ಮೇ 2020

₹ 15/-

# ಯುಗರಶ್ಮಿ

ತ್ರೈಮಾಸಿಕ



- ಬಾಹ್ಯ ಮತ್ತು ಆಂತರಿಕ ಶಾಂತಿಯ ಆವಶ್ಯಕತೆ
- ಶಾಂತಿಯ ಮಾರ್ಗದರ್ಶಕ ಜ್ಯೋತಿ
- ಪವಿತ್ರ ರಮಝಾನ್ ಮತ್ತು ನಮ್ಮ ಹೊಣೆಗಾರಿಕೆಗಳು
- ದೇವಾಸ್ತಿತ್ವದ ಹತ್ತು ಸಾಕ್ಷ್ಯಾಧಾರಗಳು
- ಅಹ್ಮದಿಯತ್ ಎಂದರೇನು?
- ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು

"ನಿಶ್ಚಯವಾಗಿಯೂ ನಾವು ನಿಮ್ಮನ್ನು ಕೆಲವು ಬಗೆಯ ಭಯಾಶಂಕೆ ಮತ್ತು ಹಸಿವಿನಿಂದಲೂ ಧನ ನಷ್ಟ, ಪ್ರಾಣಹಾನಿ ಮತ್ತು ಫಲನಷ್ಟಗಳಿಂದಲೂ ಪರೀಕ್ಷಿಸುವೆವು."

– ಪವಿತ್ರ ಖುರ್‌ಆನ್ (2 : 156)

**ವಿಷಯ ಸೂಚಿಕೆ** **ಪುಟ**


- ಮಹಾ ವಿಪತ್ತುಗಳು 1
- ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
- ಬಾಹ್ಯ ಮತ್ತು ಆಂತರಿಕ ಶಾಂತಿಯ ಆವಶ್ಯಕತೆ 3
- ಶಾಂತಿಯ ಮಾರ್ಗದರ್ಶಕ ಜ್ಯೋತಿ 9
- ಪವಿತ್ರ ರಮಝಾನ್ ಮತ್ತು ನಮ್ಮ ಹೊಣೆಗಾರಿಕೆಗಳು 13
- ದೇವಾಸ್ತಿತ್ವದ ಹತ್ತು ಸಾಕ್ಷ್ಯಾಧಾರಗಳು – 2 17
- ಅಹ್ಮದಿಯತ್ ಎಂದರೇನು ? 22
- ಹಝ್ರತ್ ಈಸಾ ಮಸೀಹ್(ಅ) ಪುನಃ ಇಳಿದು ಬರಲಾರರು 26
- ಅಹ್ಮದಿಯಾ ವಾರ್ತೆಗಳು 30
  * ಹೋಮಿಯೋಪತಿ ಚಿಕಿತ್ಸೆ * ರೋಗಿಗಳಿಗೆ ಹಣ್ಣು ವಿತರಣೆ * ವಿಕಲಚೇತ ಮಕ್ಕಳಿಗೆ ಅನ್ನದಾನ * ಶ್ರಮದಾನ
  * ಕೊರೋನಾ ಚಿಕಿತ್ಸೆಗೆ ಕಟ್ಟಡ * ಹ್ಯುಮ್ಯಾನಿಟಿ ಫಸ್ಟ್ ಜನಸೇವೆ
  * ಆಹಾರ ವಸ್ತುಗಳ ಕಿಟ್ ವಿತರಣೆ * ಆರೋಗ್ಯ ಪ್ರವರ್ತಕರಿಗೆ ಜ್ಯೂಸ್ ವಿತರಣೆ
- ಓದಿದ್ದು : 33
  * ಭೂಮಿಗೆ ದೊರಕಿದ ಹೊಸ ಚಂದಿರ * ಅತೀ ಪ್ರಾಚೀನ ಘನ ವಸ್ತು ಪತ್ತೆ * ಮಾನವನಿಗೆ ಹೊಸ ನೆಲೆ
  * ಕಬ್ಬಿಣದ ಮಳೆ ಸುರಿಸೋ ಗ್ರಹ ಪತ್ತೆ * ನೆಪ್ಚೂನ್ ಆಚೆ 139 ಹೊಸ ಆಕಾಶಕಾಯಗಳ ಪತ್ತೆ
  * 93ನೇ ವಯಸ್ಸಿನಲ್ಲಿ ಪದವಿ ಪಡೆದ ಸಾಧಕ * ಸಾಕ್ಷರತಾ ಪರೀಕ್ಷೆಯಲ್ಲಿ 105ರ ಅಜ್ಜಿ ಪಾಸ್
  * 2ರ ಬಾಲಕನಿಗೆ 102 ವಯಸ್ಸು ಎಂದು ನಮೂದು! * ಪೋಪ್ ಪ್ರಸ್ತಾಪಕ್ಕೆ ನಿವೃತ್ತ ಪೋಪ್ ಆಕ್ಷೇಪ
  * ಅತ್ಯಾಚಾರಿ ಪಾದ್ರಿಗೆ ಪೋಪರಿಂದ ಉಚ್ಚಾಟನೆ ಶಿಕ್ಷೆ * ಮದ್ರಸ ಬಾಲಕಿಯರಿಗೆ ಕಿರುಕುಳ
  * ಬುರ್ಖಾ ನಿಷೇಧ ಹಿಂಪಡೆದ ಕಾಲೇಜು * ಮೆಕ್ಕಾ, ಮದೀನ ಯಾತ್ರೆಗೆ ನಿರ್ಬಂಧ
  * 33 ಮಂದಿ ಸಜೀವ ದಹನ ಕೇಸ್: ಅಪರಾಧಿಗಳಿಗೆ ಜಾಮೀನು
- ಆರೋಗ್ಯ : 37
  * ಸಿಹಿ ಸಿಹಿ ಸಕ್ಕರೆ ತೋರದು ಅಕ್ಕರೆ
  * ನಿಂಬೆ ಹಣ್ಣಿನಿಂದ ಆರೋಗ್ಯ ವೃದ್ಧಿ
- ಭೂಮಿಯ ಮೇಲೆ ಎರಗುವ ದೇವಕೋಪ 40
- ಸಂಪಾದಕರಿಗೆ ಪತ್ರ 40


# ಯುಗರಶ್ಮಿ

ಮುಖಪುಟ ಚಿತ್ರ : 17–5–2019ರಂದು ಅಹ್ಮದಿಯಾ ಖಲೀಫರಿಂದ ಉದ್ಘಾಟಿಸಲ್ಪಟ್ಟ ಲಂಡನಿನ ಟಿಲ್‌ಫೋರ್ಡ್‌ನಲ್ಲಿರುವ "ಮಸ್ಜಿದ್ ಮುಬಾರಕ್"


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

ಸಂಪರ್ಕಿಸಿರಿ : 9900410789

بِسْمِ اللّٰهِ الرَّحْمٰنِ الرَّحِيْمِ
نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ

# ಯುಗರಶ್ಮಿ

ಮೇ 2020

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 36 | ಹಿಜ್‌ರತ್ : 1399 ಹಿಜರೀ ಶಮ್ಸೀ | ಸಂಚಿಕೆ : 3–4 |
|---|---|---|---|


## ಮಹಾ ವಿಪತ್ತುಗಳು

"ಮನುಷ್ಯನುಂಟಾದ ಕಾಲದಿಂದ ಇಷ್ಟರವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗುವುದು. ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿರಲಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು. ಅದರೊಂದಿಗೆ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಾನಕವಾದ ನಾಶಗಳು ಘಟಿಸುವುವು. ವಿವೇಕಿಗಳಾದ ಜನರು ಇವುಗಳ ಅಸಾಮಾನ್ಯತೆಯನ್ನು ಗ್ರಹಿಸುವರು. ಅವುಗಳ ಕುರಿತು ವೈಜ್ಞಾನಿಕ ಹಾಗೂ ತತ್ವಶಾಸ್ತ್ರ ಗ್ರಂಥಮಾಲೆಗಳಿಂದ ಏನನ್ನೂ ಅರಿಯಲು ಸಾಧ್ಯವಾಗಲಿಕ್ಕಿಲ್ಲ. ಆಗ ಜನರು ಮುಂದೇನು ಸಂಭವಿಸಬಹುದೆಂದು ಕಳವಳಗೊಳ್ಳುವರು. ಅನೇಕರು ರಕ್ಷಿಸಲ್ಪಡುವರು; ಅನೇಕರು ನಾಶವಾಗುವರು. ಅಂತಹ ದಿನಗಳು ಅತಿ ಸಮೀಪವಾಗಿವೆ. ಅಷ್ಟೇಕೆ, ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ, ಭೂಮಿಯಲ್ಲೂ ಆಕಾಶದಲ್ಲೂ ಇನ್ನೂ ಭಯಂಕರವಾದ ವಿಪತ್ತುಗಳು ಘಟಿಸುವುವು. ಮನುಷ್ಯರು ಪರಮಾತ್ಮನನ್ನು ಮರೆತು, ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಬರಗಳಿಗಾಗಿ ಮೀಸಲಾಗಿರಿಸಿದ ಕಾರಣದಿಂದಾಗಿ ಇವೆಲ್ಲ ಸಂಭವಿಸುವುವು...... 'ಓರ್ವ ಸಂದೇಶವಾಹಕನನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ' ಎಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ (17:16) ಹೇಳಿರುವನು.

"ಪಶ್ಚಾತ್ತಾಪಪಡುವವರು ರಕ್ಷಣೆಯನ್ನು ಹೊಂದುವರು. ಆಪತ್ತುಗಳಿಗೆ ಭಯಪಡುವವರೊಡನೆ ಕರುಣೆ ತೋರಿಸಲ್ಪಡುವುದು. ಈ ಕಷ್ಟ ಪರಂಪರೆಗಳಿಗೆ ಗುರಿಯಾಗಲಾರೆವೆಂದು ನೀವು ಭಾವಿಸುವಿರಾ? ಅಥವಾ ಉಪಾಯದಿಂದ ಸ್ವಯಂ ರಕ್ಷಣೆ ಪಡೆಯಲು ನಿಮಗೆ ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಅಂದು ಮನುಷ್ಯರ ಎಲ್ಲ ಯೋಜನೆಗಳು ಪರಾಜಯಗೊಳ್ಳುವುವು. ಅಮೇರಿಕದಲ್ಲಿ ಮತ್ತು ಇನ್ನಿತರ ಭೂಖಂಡಗಳಲ್ಲಿ ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ಭಾವಿಸಬೇಡಿ. ಅದಕ್ಕಿಂತಲೂ ಅತ್ಯಂತ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗಬೇಕಾದೀತು.

"ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ, ನೀವು ಸಹ ಸುರಕ್ಷಿತರಲ್ಲ. ಎಲೈ ದ್ವೀಪ ನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದವರೆಗೆ ಮೌನವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ ಹೇಯವಾದ ಅನೇಕ ಅತಿ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮಗಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವನ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ ನಿಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗುವುದು.

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ♦ ಒಂದು ಸ್ಥಳದಲ್ಲಿ ಪ್ಲೇಗ್ ಉಂಟೆಂದು ನಿಮಗೆ ಕೇಳಿ ಬಂದರೆ ನೀವು ಅಲ್ಲಿಗೆ ಹೋಗಬಾರದು. ನೀವು ಇರುವ ಸ್ಥಳದಲ್ಲಿ ಪ್ಲೇಗ್ ಇದ್ದರೆ ನೀವು ಅಲ್ಲಿಂದ ಓಡಿ ಹೋಗಬಾರದು. (ಬುಖಾರಿ, ಮುಸ್ಲಿಂ)
- ♦ ಉತ್ತಮವಾದ ಇಸ್ಲಾಮಿಕ ಕರ್ಮವೇನೆಂದರೆ, ಅನ್ನದಾನ ಮಾಡುವುದು ಮತ್ತು ಪರಿಚಿತರಿಗೂ ಅಪರಿಚಿತರಿಗೂ ಸಲಾಂ ಹೇಳುವುದು. (ಶಾಂತಿ ಬಯಸುವುದು.) (ಬುಖಾರಿ)
- ♦ ಶುಚಿತ್ವವು ನಂಬಿಕೆಯ (ಈಮಾನ್) ಅರ್ಧಾಂಶವಾಗಿದೆ..... ನಮಾಝ್ ಪ್ರಕಾಶವಾಗಿದೆ. ದಾನಧರ್ಮ ನಂಬಿಕೆಯ ಲಕ್ಷಣವಾಗಿದೆ. (ಮುಸ್ಲಿಂ)
- ♦ ಮುಂದೊಂದು ಕಾಲದಲ್ಲಿ ಹಲವಿಧ ಕ್ಷೋಭೆಗಳುಂಟಾಗುವುವು. ಆ ಘಟ್ಟದಲ್ಲಿ ಕುಳಿತುಕೊಳ್ಳುವವನು ನಿಲ್ಲುವವನಿಗಿಂತ, ನಿಲ್ಲುವವನು ನಡೆಯುವವನಿಗಿಂತ, ನಡೆಯುವವನು ಓಡುವವನಿಗಿಂತ ಉತ್ತಮನಾಗಿರುವನು. (ಎಲ್ಲ ಕ್ಷೋಭೆಗಳಿಂದ ನಿಷ್ಕ್ರಿಯನಾಗಿ ಅಗಲಿ ನಿಲ್ಲಬೇಕೆಂದು ತಾತ್ಪರ್ಯ). ಯಾರಾದರೂ ಅದರ ಕಡೆಗೆ ನೋಡುವನಾದರೆ ಅವನನ್ನು ಅದು ನಾಶಗೊಳಿಸುವುದು. ಯಾರಿಗಾದರೂ ಆ ಘಟ್ಟದಲ್ಲಿ ಅಭಯಾಶ್ರಯವಾಗಲಿ, ರಕ್ಷಾ ಕೇಂದ್ರವಾಗಲಿ ಲಭಿಸಿದರೆ ಅವನು ಅಲ್ಲಿ ಅಭಯ ಪಡೆದುಕೊಳ್ಳಲಿ. (ಬುಖಾರಿ)
- ♦ ಜನರಿಗೆ ಒಂದು ಕಾಲಘಟ್ಟ ಬರಲಿದೆ. ಅಂದು ತಾನು ಧನ ಸಂಪಾದಿಸಿರುವುದು ಧರ್ಮಬದ್ಧವಾದ ರೀತಿಯಲ್ಲೋ ಅಥವಾ ಧರ್ಮ ವಿರುದ್ಧವಾದ ರೀತಿಯಲ್ಲೋ ಎಂಬ ವಿಚಾರ ಮನುಷ್ಯನಿಗೆ ಒಂದು ಸಮಸ್ಯೆಯೇ ಆಗಿರಲಾರದು. (ಬುಖಾರಿ)
- ♦ ನೀವು ಸತ್ಕರ್ಮಗಳಲ್ಲಿ ಮುನ್ನಡೆಯಿರಿ. ಇರುಳು ತುಂಬಿದ ರಾತ್ರಿಯಂತೆ ಉಪಟಳ ಉಂಟಾಗುತ್ತಿರುವುವು. ಪ್ರಭಾತದ ಸತ್ಯವಿಶ್ವಾಸಿ ಪ್ರದೋಷದಲ್ಲಿ ಸತ್ಯನಿಷೇಧಿಯಾಗುವನು; ಪ್ರದೋಷದ ಸತ್ಯವಿಶ್ವಾಸಿ ಪ್ರಭಾತದಲ್ಲಿ ಸತ್ಯನಿಷೇಧಿಯಾಗುವನು. ಇದು ತನ್ನ ಧರ್ಮವನ್ನು ಐಹಿಕ ಗಳಿಕೆಗೋಸ್ಕರ ಮಾರಾಟ ಮಾಡುವ ಕಾರಣದಿಂದಾಗಿದೆ. (ಮುಸ್ಲಿಂ)
- ♦ ಜನರು ಪರಸ್ಪರ ಗೌರವಾದರದಿಂದ ವರ್ತಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ರಸ್ತೆಗಳಲ್ಲಿ ನಿಯಮ ಮತ್ತು ಶಿಸ್ತು ಪಾಲಿಸಬೇಕು; ಅವುಗಳನ್ನು ಶುಚಿಯಾಗಿಡುವ ಬಗ್ಗೆ ಗಮನಹರಿಸಬೇಕು. ಸಾರ್ವಜನಿಕ ಸ್ಥಳಗಳನ್ನು ಉಪಯೋಗಿಸುವವರು ಅದೇ ಸ್ಥಳಗಳನ್ನು ಉಪಯೋಗಿಸುವ ಇತರರಿಗೆ ಅನಾವಶ್ಯಕ ತೊಂದರೆ ಉಂಟಾಗದಂತೆ ಜಾಗ್ರತೆವಹಿಸಬೇಕು. (ಮುಸ್ಲಿಂ)
- ♦ ಹೊಟ್ಟೆಯ ಮೂರರಲ್ಲಿ ಒಂದಂಶವನ್ನು ಆಹಾರಕ್ಕೂ, ಮೂರರಲ್ಲಿ ಒಂದಂಶವನ್ನು ನೀರಿಗೂ, ಮೂರರಲ್ಲಿ ಒಂದಂಶವನ್ನು ಶ್ವಾಸೋಚ್ಛ್ವಾಸಕ್ಕೂ ಇರಿಸಿರಿ.
- ♦ ಸತ್ಯವಿಶ್ವಾಸಿಗಳು ಒಬ್ಬ ಮನುಷ್ಯನ ಹಾಗೆ. ಅವನ ಕಣ್ಣಿಗೆ ರೋಗ ಬಾಧಿಸಿದರೆ ಶರೀರವಿಡೀ ಅಸ್ವಸ್ಥವಾಗುವುದು. ತಲೆಗೆ ರೋಗ ಬಾಧಿಸಿದರೂ ಶರೀರವೆಲ್ಲ ಅಸ್ವಸ್ಥವಾಗುವುದು. (ಹಾಗೆಯೇ ಸತ್ಯವಿಶ್ವಾಸಿಗಳ ಪೈಕಿ ಒಬ್ಬನಿಗೆ ಉಂಟಾಗುವ ಸುಖ-ದುಃಖ ಇಡೀ ಸಮುದಾಯದ ಮೇಲೆ ಪರಿಣಾಮ ಬೀರುತ್ತದೆ.). (ಮುಸ್ಲಿಂ)
- ♦ ಖಂಡಿತವಾಗಿಯೂ ಸತ್ಯವು ಮನಃಶಾಂತಿಯನ್ನೂ ಸುಳ್ಳು ಪರಿಭ್ರಮೆಯನ್ನೂ ಉಂಟುಮಾಡುತ್ತದೆ.
- ♦ ಹೆಚ್ಚು ಸಂಪತ್ತು ಗಳಿಸುವುದು ಐಶ್ವರ್ಯವಲ್ಲ. ಬದಲು, ಮನಃಸಂತೃಪ್ತಿಯೇ ಐಶ್ವರ್ಯವಾಗಿದೆ.
- ♦ ಯಾರ ಕೈಗಳಿಂದಲೂ ನಾಲಗೆಯಿಂದಲೂ ಇತರರಿಗೆ ಕೇಡು ಉಂಟಾಗುವುದಿಲ್ಲವೋ ಅವನೇ ನಿಜವಾದ ಮುಸ್ಲಿಂ. (ತಿರ್ಮಿಧಿ)
- ♦ ಹಜ್ಜ್ ನಿಲ್ಲಿಸಲ್ಪಡುವ ವರೆಗೆ ಖಿಯಾಮತ್ ಸಂಭವಿಸಲಾರದು. (ಬುಖಾರಿ)

---

ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ಪರಮಾತ್ಮನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ. ದೇವನನ್ನು ಮರೆತವನು ಮನುಷ್ಯನಲ್ಲ; ಕ್ರಿಮಿಕೀಟಕ್ಕೆ ಸಮಾನನು. ದೇವನಿಗೆ ಯಾರು ಹೆದರುವುದಿಲ್ಲವೋ ಅವನು ಸತ್ತಂತೆಯೇ ಸರಿ; ಜೀವವಿಲ್ಲದವನು.” (ಹಖೀಖತುಲ್ ವಹ್ಯ್ – 1907 ಪುಟ : 256–257)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಬಾಹ್ಯ ಮತ್ತು ಆಂತರಿಕ ಶಾಂತಿಯ ಆವಶ್ಯಕತೆ

**ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**

**(ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋಚ್ಚ ನೇತಾರ ಮತ್ತು ಪಂಚಮ ಖಲೀಫ)**




***ಯುರೋಪಿನ ಚಾರಿತ್ರಿಕ ಸಂದರ್ಶನಗಳ ಸಂದರ್ಭದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹಾಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯನ್ನು ಸಂದರ್ಶಿಸಿದರು. 2019 ಸೆಪ್ಟೆಂಬರ್ ದಿನಾಂಕ 28ರಂದು ಹಾಲೆಂಡಿನ ಅಹ್ಮದಿಯಾ ಸಂಘಟನೆಯ 39ನೇ ವಾರ್ಷಿಕ ಸಮ್ಮೇಳನದ ದ್ವಿತೀಯ ದಿನ ಅವರು 125 ಗಣ್ಯ ಅಹ್ಮದಿಯೇತರ ಅತಿಥಿಗಳನ್ನು ಸಂಬೋಧಿಸಿ ಭಾಷಣ ಮಾಡಿದರು. ಹಝ್ರತ್ ಖಲೀಫರು, ಸಂಪತ್ತು ಮತ್ತು ಅಧಿಕಾರ ಆಂತರಿಕ ಮತ್ತು ಬಾಹ್ಯ ಶಾಂತಿಯನ್ನು ಏಕೆ ಸ್ಥಾಪಿಸುವುದಿಲ್ಲ ಎಂಬುದರ ಬಗ್ಗೆ ವಿವರಿಸಿ ಧರ್ಮದ ಆವಶ್ಯಕತೆ ಮತ್ತು ಧರ್ಮವು ವಾಸ್ತವಿಕ ಶಾಂತಿ ಸ್ಥಾಪನೆಗೆ ಮಾಧ್ಯಮವಾಗುವುದು ಹೇಗೆಂದು ಅದರ ರೂಪು ರೇಖೆ ನೀಡಿದರು.***

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫರು ಹೀಗೆಂದರು:

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹು – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲೆ ಇರಲಿ.

ನೀವೆಲ್ಲರೂ ನಮ್ಮ ಆಮಂತ್ರಣಗಳನ್ನು ಸ್ವೀಕರಿಸಿ ನಮ್ಮೊಂದಿಗೆ ಸೇರಿರುವುದಕ್ಕೋಸ್ಕರ ಮೊತ್ತಮೊದಲು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇತ್ತೀಚೆಗಿನ ವರ್ಷಗಳಲ್ಲಿ ಇಸ್ಲಾಮ್ ಮತ್ತು ಪೈಗಂಬರರ ವಿರುದ್ಧ ಅನೇಕ ಆಕ್ಷೇಪಗಳನ್ನು ಮಾಡಲಾಗುತ್ತಿದೆ. ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ದ್ವೇಷ ಮತ್ತು ಸುಳ್ಳು ಪ್ರಚಾರ ಮಾಡಿ ಅಪಕೀರ್ತಿ ಉಂಟುಮಾಡಲು ಸಂಘಟಿತ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ತಾವೆಲ್ಲರೂ ಒಂದು ಮುಸ್ಲಿಮ್ ಸಂಘಟನೆ ಜರಗಿಸುವ ಸಮಾರಂಭದಲ್ಲಿ ಭಾಗವಹಿಸಲು ಬಂದಿರುವುದು ನಿಮ್ಮ ತೆರೆದ ಹೃದಯಗಳ ಬಗ್ಗೆ ಮತ್ತು ವಿಶಾಲ ಮನೋಭಾವದ ಬಗ್ಗೆ ಸಾಕ್ಷ್ಯ ನೀಡುತ್ತದೆ. ಅದಕ್ಕೋಸ್ಕರ ನಾನು ನಿಮ್ಮನ್ನು ಪ್ರಶಂಸಿಸಿ ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ.

ನಿಮ್ಮ ಈ ಉದಾರ ಮತ್ತು ಸಹಿಷ್ಣು ಮನೋಭಾವ ಯಾವಾಗಲೂ ನಿಮ್ಮೊಂದಿಗೆ ಇರಲಿ ಎಂದೂ ಅದು ವಿಶಾಲವಾಗಿ ಹರಡಲಿ ಎಂದೂ ಎಲ್ಲ ಸಮುದಾಯಗಳ ಜನರು ಶಾಂತಿಯಿಂದಲೂ ಪರಸ್ಪರ ಪ್ರೀತಿಯಿಂದಲೂ ಗೌರವ ಭಾವನೆಯೊಂದಿಗೂ ಜೀವಿಸುವಂತಾಗಲಿ ಎಂದೂ ನಾನು ಪ್ರಾರ್ಥಿಸುತ್ತೇನೆ.

ಅಹ್ಮದೀ ಮುಸ್ಲಿಮರಾದ ನಾವು ದೃಢವಾಗಿ ನಂಬುವುದೇನೆಂದರೆ, ಧರ್ಮವು ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ವಿಷಯವಾಗಿದೆ. ಅದು ಹೃದಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಅನ್ಯರ ನಂಬಿಕೆ ಬಗ್ಗೆ ಕೆಟ್ಟದಾಗಿ ಮಾತನಾಡುವ ಅಧಿಕಾರ ಯಾರಿಗೂ ಇರುವುದಿಲ್ಲ.

ಅನ್ಯರು ಪವಿತ್ರ ಎಂದು ಗಣಿಸುವುದನ್ನು ಯಾರೂ ಲೇವಡಿ ಮಾಡಬಾರದು. ಏಕೆಂದರೆ ಅನ್ಯರನ್ನು ಅಣಕಿಸಿ ತಾತ್ಸಾರ ಭಾವದಿಂದ ವರ್ತಿಸುವುದರಿಂದ ನೋವು, ಸಂಕಷ್ಟ ಮತ್ತು ಒಡಕು ತಲೆದೋರುವುವು. ಇದಕ್ಕೆ ವ್ಯತಿರಿಕ್ತವಾಗಿ ಸಹಿಷ್ಣು ಮನೋಭಾವ ಮತ್ತು ಪರಸ್ಪರ ಗೌರವ ನೀಡುವಿಕೆ ಶಾಂತಿಮಯ ಸೌಹಾರ್ದಮಯ ಸಮಾಜದ ನಿರ್ಮಾಣದ ತಳಹದಿಗಳಾಗಿವೆ.

ನಾನು ಇದರ ಮೊದಲು ಹೇಳಿದ ಹಾಗೆ ಮುಸ್ಲಿಮೇತರ ಲೋಕದಲ್ಲಿ ಇಸ್ಲಾಮನ್ನು ಪವಿತ್ರ ಪೈಗಂಬರರ(ಸ) ಸ್ವಭಾವಗುಣಗಳನ್ನು ದೂಷಿಸಿ, ವಿಕೃತವಾಗಿ ಚಿತ್ರಿಸಿ ಪ್ರಚಾರ ಮಾಡಲಾಗುತ್ತಿದೆ. ಇಲ್ಲಿ ಹಾಲೆಂಡಿನಲ್ಲಿ ಸಹ ಕೆಲವರು ಇಸ್ಲಾಮಿನ ವಿರುದ್ಧ ದ್ವೇಷ ಭಾವನೆಯನ್ನು ಉತ್ತೇಜಿಸಲು ಮತ್ತು ಸಂಪೂರ್ಣ ಸುಳ್ಳು ಮತ್ತು ಭಯಾನಕ ಆರೋಪಗಳನ್ನು ಪವಿತ್ರ ಖುರ್‌ಆನ್ ಮತ್ತು ಪವಿತ್ರ ಪೈಗಂಬರ್ ಮುಹಮ್ಮದರ(ಸ) ವಿರುದ್ಧ ಮಾಡಲು ಪ್ರಾರಂಭಿಸಿದ್ದಾರೆ.

ಇದಕ್ಕೆ ಸಂಬಂಧಿಸಿ ಸೀಮಿತ ಸಮಯಾವಧಿಯಲ್ಲಿ ಇಸ್ಲಾಮಿನ ನೈಜ ತತ್ವಗಳ ಬಗ್ಗೆ ಮತ್ತು ಇಸ್ಲಾಮಿನ ಪ್ರವಾದಿಯ ಸ್ವಭಾವ ಗುಣಗಳ ಬಗ್ಗೆ ವಿವರಣೆ ನೀಡುವೆನು. ಆದರೆ ಅದಕ್ಕೆ ಮೊದಲು ಶಾಂತಿಯ ಬಗ್ಗೆ ಮತ್ತು ಅದರ ಮಹತ್ವದ ಬಗ್ಗೆ ಸಾಮಾನ್ಯವಾಗಿ ಒಂದು ವಿವರಣೆ ನೀಡುವೆನು.

ನಿಸ್ಸಂಶಯವಾಗಿ, ವೈಯಕ್ತಿಕವಾಗಿ ನಾವೆಲ್ಲರೂ ಶಾಂತಿಯನ್ನು ಆಶಿಸುವವರಾಗಿದ್ದೇವೆ. ವಿವಿಧ ದೇಶಗಳು ಮತ್ತು ವಿವಿಧ ಜನಾಂಗಗಳು ಶಾಂತಿಯ ಬಗ್ಗೆ ಅಭಿಲಾಷೆ ಹೊಂದಿರುವುದಾಗಿ ವಾದಿಸುತ್ತಾರೆ. ಆದರೆ ಶಾಂತಿ ಎಂದರೇನು? ಅದು ನಮಗೆ ಆವಶ್ಯಕವಾಗಿರುವುದು ಏಕೆ?

ನನ್ನ ದೃಷ್ಟಿಯಲ್ಲಿ ಶಾಂತಿ ಎರಡು ವಿಧ – ಆಂತರಿಕ ಶಾಂತಿ ಮತ್ತು ಬಾಹ್ಯ ಶಾಂತಿ. ಸಾಮಾನ್ಯವಾಗಿ ಬಾಹ್ಯವಾಗಿ ಜನರು ಸಂತೋಷದಿಂದಲೂ ನೆಮ್ಮದಿಯಿಂದಲೂ ಇರುವುದಾಗಿ ಕಾಣಿಸುತ್ತಾರೆ. ಆದರೆ ಅವರಿಗೆ ಬಾಹ್ಯ ಶಾಂತಿ ಇರುತ್ತದೆ, ಆಂತರಿಕ ಶಾಂತಿ ಇರುವುದಿಲ್ಲ. ಉದಾಹರಣೆಗೆ, ಶಕ್ತಿಶಾಲಿಗಳೂ ಪ್ರಭಾವಶಾಲಿಗಳೂ ಆಗಿರುವ ಜನರು ಶಾಂತಿಯನ್ನು ಬೆಳೆಸುವ ಬಗ್ಗೆ ಆಗಾಗ ಮಾತನಾಡುತ್ತಾ ಇರುತ್ತಾರೆ. ಅವರು ವೈಯಕ್ತಿಕವಾಗಿ ಲೌಕಿಕವಾದ ಎಲ್ಲ ಸುಖ ಸೌಲಭ್ಯಗಳನ್ನೂ ಅಲಂಕಾರ ವಸ್ತುಗಳನ್ನೂ ಹೊಂದಿರುತ್ತಾರೆ. ಹೀಗಿದ್ದರೂ ಅವರಲ್ಲಿ ಬಹುತೇಕ ಜನರು ಹೇಳುತ್ತಾರೆ – ತಾವು ಮಾನಸಿಕ ಶಾಂತಿಯನ್ನು ಹುಡುಕುತ್ತಿದ್ದೇವೆ ಎಂದು. ಅವರು ಬಿಗುವಿನಿಂದಲೂ ಬೇಸರದಿಂದಲೂ ಬಾಧಿತರಾಗಿರುತ್ತಾರೆ. ಪೂರ್ಣವಾಗಿ ಬಾಹ್ಯ ಮತ್ತು ಭೌತಿಕ ದೃಷ್ಟಿಕೋನದಿಂದ ನೋಡುವುದಾದರೆ, ಅವರಿಗೆ ಅವರು ಆವಶ್ಯಪಡುವುದೆಲ್ಲವೂ ಲಭ್ಯವಾಗಿವೆ. ಆದರೆ ಅವರ ಮನಸ್ಸುಗಳು ಆತಂಕಭರಿತವಾಗಿರುತ್ತವೆ ಮತ್ತು ಅವರ ಹೃದಯಗಳು ಅತೃಪ್ತವಾಗಿರುತ್ತವೆ.

ಆದುದರಿಂದ ಒಬ್ಬ ವ್ಯಕ್ತಿ ಆಂತರಿಕ ಶಾಂತಿ ಗಳಿಸುವ ತನಕ ಭೌತಿಕ ಸುಖ ಸೌಲಭ್ಯಗಳು ನಿರರ್ಥಕವಾಗಿರುತ್ತವೆ. ಸರಳವಾಗಿ ಹೇಳುವುದಾದರೆ, ಹಣದಿಂದ ಶಾಂತಿಯನ್ನು ಖರೀದಿಸಲು ಸಾಧ್ಯವಿಲ್ಲ. ಉದಾಹರಣೆಗೆ, ಐಶ್ವರ್ಯವಂತೆಯಾದ ಒಬ್ಬ ತಾಯಿಯನ್ನು ನೋಡಿರಿ. ಆಕೆಯ ಬಳಿ ಅಪಾರ ಸಂಪತ್ತಿದೆ. ಆದರೆ ಆಕೆಯ ಮಗು ಕಾಣೆಯಾಗುತ್ತದೆ. ಆಕೆಯ ಬಳಿ ಎಲ್ಲ ಸುಖ ಸೌಲಭ್ಯಗಳಿದ್ದರೂ ತನ್ನ ಕಾಣೆಯಾದ ಮಗುವನ್ನು ಕಂಡು ಹಿಡಿಯುವ ತನಕ ಭಾವೋನ್ಮತ್ತಳಾಗಿ ಆತಂಕಗೊಂಡಿರುತ್ತಾಳೆ.

ದುಃಖಕರವಾದ ವಿಷಯವೇನೆಂದರೆ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಅಭಿವೃದ್ಧಿಶೀಲ ದೇಶಗಳಲ್ಲಿಯೂ ಮಾನಸಿಕ ಆರೋಗ್ಯದ ಸಮಸ್ಯೆಗಳು ವರ್ಧಿಸುತ್ತಾ ಇವೆ. ಶ್ರೀಮಂತ ದೇಶಗಳಲ್ಲಿ, ಮಾನಸಿಕ ಅಸ್ವಸ್ಥತೆ ಅಥವಾ ವಿಷಣ್ಣತೆ ಕಾರಣದಿಂದ ಹಲವರು, ಅವರಿಗೆ ಸಾಂಪತ್ತಿಕ ಶಕ್ತಿ ಇತರರಿಗಿಂತ ಬಲವತ್ತಾಗಿದ್ದರೂ ಆತ್ಮಹತ್ಯೆ ಮಾಡುತ್ತಿದ್ದಾರೆ.

ಆಶ್ಚರ್ಯಕರವಲ್ಲದಿದ್ದರೂ ಬಲಹೀನರಾದ ಬಡಜನರಲ್ಲಿಯೂ ಆಂತರಿಕ ಶಾಂತಿ ಇಲ್ಲವಾಗಿದೆ. ಏಕೆಂದರೆ ಅವರಿಗೆ ತಮ್ಮ ಮೂಲಭೂತ ಆವಶ್ಯಕತೆಗಳನ್ನು ಈಡೇರಿಸಲಾಗುವುದಿಲ್ಲ. ಅವರು ಇತರರಿಗೆ ಲಭಿಸಿರುವ ಸುಖ ಸೌಲಭ್ಯವನ್ನು ಹತಾಶೆಯಿಂದ ಹಂಬಲಿಸುತ್ತಿದ್ದಾರೆ.

ಈ ರೀತಿ ನಿರಾಶೆ ಮತ್ತು ಆಂತರಿಕ ಸಂಕ್ಷೋಭೆ ಶ್ರೀಮಂತರಲ್ಲಿಯೂ ಬಡವರಲ್ಲಿಯೂ ಪ್ರತ್ಯಕ್ಷವಾಗಿರುತ್ತವೆ. ಒಂದು ಪಾರ್ಶ್ವದಲ್ಲಿ ಶ್ರೀಮಂತರು ಭೌತಿಕವಾಗಿ ಎಲ್ಲ ಸುಖ ಸೌಲಭ್ಯಗಳನ್ನು ಹೊಂದಿದ್ದರೂ ಆಂತರಿಕವಾಗಿ ಶಾಂತಿ ಕಳೆದುಕೊಂಡವರಾಗಿದ್ದಾರೆ. ಇನ್ನೊಂದು ಪಾರ್ಶ್ವದಲ್ಲಿ ಬಡವರೂ ಬಲಹೀನರೂ ತಮ್ಮ ದುಸ್ಥಿತಿಯ ಕಾರಣದಿಂದ ಅನ್ಯರು ಹೊಂದಿರುವ ಸುಖ ಜೀವನವನ್ನು ಆಶಿಸುತ್ತಾ ಇರುತ್ತಾರೆ.

ಜನರಿಗೆ ವಿವಿಧ ಉದ್ದೇಶಲಕ್ಷ್ಯಗಳೂ ಆಶಾಭಿಲಾಷೆಗಳೂ ಇರಬಹುದು ಮತ್ತು ಅವರು ಸಾಂಪತ್ತಿಕ ಶಕ್ತಿಗೆ ಅನುಸಾರವಾಗಿ ವಿಭಿನ್ನ ಧ್ರುವಗಳಲ್ಲಿರಬಹುದು. ಆದರೆ ಅವರೆಲ್ಲರೂ ಆಂತರಿಕ ಶಾಂತಿಯನ್ನು ಗಳಿಸುವುದರಲ್ಲಿ ಸೋತು ಹೋದರೆಂಬುದರಲ್ಲಿ ಒಗ್ಗೂಡಿದ್ದಾರೆ.

ಇಂದಿನ ಲೋಕದಲ್ಲಿ ವಿಮರ್ಶಕರು ಧರ್ಮವನ್ನು ಮತ್ತು ವಿಶಿಷ್ಟವಾಗಿ ಇಸ್ಲಾಮನ್ನು ಲೋಕದ ಇಂದಿನ ಸಮಸ್ಯೆಗಳಿಗೆ ಕಾರಣವೆಂದು ದೂಷಿಸುತ್ತಿದ್ದಾರೆ. ಆದರೆ ಆಂತರಿಕ ಯಾತನೆಗಳಿಂದ ಮತ್ತು ಕ್ಷೋಭೆಯಿಂದ ಬಳಲುವವರು ಸಂಪೂರ್ಣವಾಗಿ ಧರ್ಮರಹಿತರಾಗಿ ಜೀವಿಸುವವರಾಗಿದ್ದಾರೆ. ಆದುದರಿಂದ ಅವರ ಸಮಸ್ಯೆಗಳಿಗೆ ಇಸ್ಲಾಮ್ ಅಥವಾ ಬೇರೆ ಯಾವುದಾದರೂ ಧರ್ಮ ಕಾರಣವಾಗಿದೆ ಎಂದು ದೂಷಿಸಲು ಸಾಧ್ಯವಿಲ್ಲ.

ಒಬ್ಬ ಧಾರ್ಮಿಕ ನಾಯಕನಾಗಿ ನಾನು ದೃಢವಾಗಿ ನಂಬುವುದೇನೆಂದರೆ, ಇಂದಿನ ಸಮಸ್ಯೆಗಳಿಗೆ ಧರ್ಮವು ಕಾರಣವಾಗಿರುವುದಿಲ್ಲ. ಅದಕ್ಕೆ ಬದಲಾಗಿ, ಧರ್ಮವು ಸಮಸ್ಯೆಗಳಿಗೆ ಉತ್ತರ ನೀಡುವುದಾಗಿದೆ. ಇಸ್ಲಾಮೀ ದೃಷ್ಟಿಕೋನ ಪ್ರಕಾರ ಪರಿಹಾರ ಮಾರ್ಗ ಸುಲಭವೇ ಆಗಿದೆ.

ಇಸ್ಲಾಮಿನ ಪವಿತ್ರ ಪೈಗಂಬರ್(ಸ) ಉಪದೇಶಿಸಿರುವುದೇನೆಂದರೆ, ನೈಜವಾದ ಮನಶ್ಶಾಂತಿ ಗಳಿಸಲು ಮನುಷ್ಯನು ಸರ್ವಶಕ್ತನಾದ ದೇವನನ್ನು ಗುರುತಿಸಿ ಅವನೊಂದಿಗೆ ಸಂಬಂಧ ಸ್ಥಾಪಿಸುವುದು ಆವಶ್ಯಕವಾಗಿದೆ. ಏಕೆಂದರೆ ಇಸ್ಲಾಮ್ ಧರ್ಮ ಪ್ರಕಾರ ಸರ್ವಶಕ್ತನಾದ ದೇವನ ಗುಣವಿಶೇಷಗಳಲ್ಲಿ ಒಂದು "ಅಸ್ಸಲಾಮ್" ಅಥವಾ ಶಾಂತಿಯ ಉದ್ಭವಸ್ಥಾನ ಎಂದಾಗಿದೆ.

ಸರ್ವಶಕ್ತನಾದ ದೇವನು ತನ್ನ ಸೃಷ್ಟಿಗಳಾದ ಮನುಷ್ಯರು, ಅವರು ಯಾವ ಧರ್ಮಕ್ಕೆ ಸೇರಿದವರಾದರೂ ಯಾವ ವಿಶ್ವಾಸವನ್ನು ಹೊಂದಿದವರಾದರೂ ಶಾಂತಿಯಿಂದ ಜೀವಿಸಬೇಕೆಂದು ಇಚ್ಛಿಸುತ್ತಾನೆ. ಅದಲ್ಲದೆ ಪವಿತ್ರ ಪೈಗಂಬರ್ ಮುಹಮ್ಮದ್(ಸ) ಹೀಗೆ ಸಹ ಕಲಿಸಿದ್ದಾರೆ: ಸರ್ವಶಕ್ತನಾದ ದೇವನಾದ ಅಲ್ಲಾಹನು ತನ್ನ ಎಲ್ಲ ಸೃಷ್ಟಿಗಳನ್ನು ಪಾಲನೆ ಪೋಷಣೆ ಮಾಡುವವನಾಗಿದ್ದಾನೆ. ಸರ್ವಶಕ್ತನಾದ ದೇವನು ಕೇವಲ ಮುಸ್ಲಿಮರ ಪರಿಪಾಲಕನಲ್ಲ. ಅವನ ಕಾರುಣ್ಯ ಕ್ರೈಸ್ತರನ್ನು, ಹಿಂದುಗಳನ್ನು, ಸಿಖ್ಖರನ್ನು, ಯಹೂದಿಯರನ್ನು ಮತ್ತು ಎಲ್ಲ ಧರ್ಮಗಳ ಮತ್ತು ನಂಬಿಕೆಗಳ ಜನರನ್ನು ಮಾತ್ರವಲ್ಲ ಅವನ ಅಸ್ತಿತ್ವದಲ್ಲಿ ನಂಬಿಕೆ ಹೊಂದದ ನಾಸ್ತಿಕರನ್ನೂ ಆವರಿಸಿರುತ್ತದೆ.

ಮುಸ್ಲಿಮರು ಸರ್ವಶಕ್ತನಾದ ದೇವನ ಗುಣವಿಶೇಷಗಳನ್ನು ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ತಮ್ಮಲ್ಲಿ ಅಳವಡಿಸಿಕೊಳ್ಳಬೇಕೆಂದು ಇಸ್ಲಾಮ್ ಉಪದೇಶಿಸುತ್ತಿದೆ. ಆದುದರಿಂದ ಇಸ್ಲಾಮಿನ ಪವಿತ್ರ ಪ್ರವಾದಿ ಪದೇ ಪದೇ ತನ್ನ ಅನುಯಾಯಿಗಳೊಂದಿಗೆ, ಅನ್ಯರೊಂದಿಗೆ ಕಾರುಣ್ಯ ಭರಿತರಾಗಿ ವರ್ತಿಸಬೇಕೆಂದೂ ಅವರ ಬಗ್ಗೆ ಕಾಳಜಿ ವಹಿಸಿ ಅವರಿಗೆ ಶಾಂತಿಯನ್ನು ಒದಗಿಸಿಕೊಡಬೇಕೆಂದೂ ಉಪದೇಶಿಸುತ್ತಿದ್ದರು.

ಇಸ್ಲಾಮಿನ ಪ್ರವಾದಿ ಪ್ರತಿಪಾದಿಸಿದ ಒಂದು ಸುವರ್ಣ ತತ್ವವೇನೆಂದರೆ, ನೈಜ ಮುಸ್ಲಿಮನು ತನಗೆ ಯಾವುದನ್ನು ಇಷ್ಟಪಡುತ್ತಾನೋ ಅದು ಅನ್ಯರಿಗೂ ದೊರಕುವುದನ್ನು ಇಷ್ಟಪಡಬೇಕು.

ನಾನು ನಂಬುವುದೇನೆಂದರೆ, ಈ ಸರಳ ಆದರೆ ಗಂಭೀರ ತತ್ವವನ್ನು ಮುಸ್ಲಿಮರು ಮಾತ್ರವಲ್ಲ, ಎಲ್ಲ ಜನರು ಅನುಷ್ಠಾನಕ್ಕೆ ತರುವರಾದರೆ ಅದು ಸಮಾಜದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸುವ ಮಾಧ್ಯಮವಾಗುವುದು. ನಿಸ್ಸಂಶಯವಾಗಿ, ಪ್ರತಿಯೊಬ್ಬರು ತಮಗೋಸ್ಕರ ಮತ್ತು ತಮ್ಮ ಪ್ರೀತಿಗೆ ಪಾತ್ರರಾದವರಿಗೋಸ್ಕರ ಶಾಂತಿಯನ್ನು ಆಶಿಸುತ್ತಿರಬಹುದು. ಆದರೆ ತಮ್ಮ ವಿರೋಧಿಗಳು ಮತ್ತು ತಮ್ಮೊಂದಿಗೆ ಸ್ಪರ್ಧಿಸುವವರು ಶಾಂತಿಯಿಂದಲೂ ನೆಮ್ಮದಿಯಿಂದಲೂ ಜೀವಿಸಲಿ ಎಂದು ನಾವು ಆಶಿಸುತ್ತೇವೆ ಎಂದು ಹೇಳುವವರು ಬಹುತೇಕ ಮಂದಿ ಸುಳ್ಳನ್ನೇ ಹೇಳುವವರಾಗಿದ್ದಾರೆ.

ಆದರೆ ಇಸ್ಲಾಮ್ ಇಂತಹ ಒಳಿತಿನ ಮತ್ತು ಔದಾರ್ಯದ ಮಟ್ಟವನ್ನು ಮುಸ್ಲಿಮರಿಂದ ಆವಶ್ಯಪಡುತ್ತದೆ. ಇಸ್ಲಾಮ್ ನಿಸ್ವಾರ್ಥ ಮನೋಭಾವವನ್ನು ಪ್ರೋತ್ಸಾಹಿಸುವ ಧರ್ಮವಾಗಿದೆ. ಎಲ್ಲ ಮನುಷ್ಯರು ಸ್ವಾರ್ಥತೆಯನ್ನು ನಿಶ್ಶೇಷವಾಗಿ ತ್ಯಜಿಸಬೇಕು ಎಂದು ಇಸ್ಲಾಮ್ ಉಪದೇಶಿಸುತ್ತಿದೆ. ಇಸ್ಲಾಮಿನ ಪವಿತ್ರ ಪೈಗಂಬರ್(ಸ) ಉಪದೇಶಿಸಿದ ಇನ್ನೊಂದು ತತ್ವವೇನೆಂದರೆ, ಮನುಷ್ಯರು ತೆರೆದ ಹೃದಯವನ್ನೂ ಪರಿಶುದ್ಧವಾದ ಮನಸ್ಸನ್ನೂ ಹೊಂದಬೇಕೆಂದಾಗಿದೆ.

ಮನುಷ್ಯನು ತನಗೆ ಮಾತ್ರ ಅತ್ಯುತ್ತಮವಾದುದನ್ನು ಬಯಸುವುದಕ್ಕೆ ಬದಲಾಗಿ ಅಂತಹ ವಸ್ತುಗಳು ಅನ್ಯರಿಗೂ ದೊರಕಲಿ ಎಂದು ಆಶಿಸಬೇಕು. ಆದರೆ ದುಃಖಕರವಾದುದೇನೆಂದರೆ, ಇಂದಿನ ಲೋಕದಲ್ಲಿ ನಾವು ತದ್ವಿರುದ್ಧವಾದುದನ್ನು ಕಾಣುತ್ತೇವೆ. ಆಧುನಿಕ ಸಮಾಜ ಸ್ವಾರ್ಥತೆಯಿಂದಲೂ ದುರಾಶೆಗಳಿಂದಲೂ ಭರಿತವಾಗಿದೆ. ಅಸ್ತವ್ಯಸ್ತತೆ, ಸಂಘರ್ಷ ಮತ್ತು ಯುದ್ಧ ವರ್ಧಿಸುತ್ತಿವೆ. ಆದರೆ ನ್ಯಾಯ ಬದ್ಧತೆಯಿಂದ ವರ್ತಿಸುವುದನ್ನು ಸ್ಥಿರವಾಗಿ ತ್ಯಜಿಸಲಾಗುತ್ತಿದೆ.

ಶಕ್ತಿಶಾಲಿಯೂ ಸಂಪನ್ನವೂ ಆಗಿರುವ ಅನೇಕ ದೇಶಗಳ ವಿದೇಶ ನೀತಿಯಿಂದ ಇದು ಸ್ಪಷ್ಟವಾಗಿ ತಿಳಿಯುತ್ತದೆ. ಆಧುನಿಕ ಚರಿತ್ರೆಯಲ್ಲಿ ಸ್ಥಿರವಾಗಿ ಜಾರಿಯಲ್ಲಿರುವ ಒಂದು ವಿಷಯವೇನೆಂದರೆ, ಶಕ್ತಿಶಾಲಿ ದೇಶಗಳು ತಮ್ಮ ಸೈನ್ಯವನ್ನು ದೂರದೇಶಗಳಿಗೆ ಶಾಂತಿ ಸ್ಥಾಪಿಸುವ ನೆವನದಿಂದ ಕಳುಹಿಸುತ್ತಾ ಇರುತ್ತದೆ. ಆದರೆ ಅನಂತರ ಸಾಬೀತಾದುದೇನೆಂದರೆ, ಆ ಶಕ್ತಿಶಾಲಿ ದೇಶಗಳ ವಾಸ್ತವಿಕ ಉದ್ದೇಶ ತಮ್ಮ ಸ್ವಾರ್ಥ ಹಿತಾಶಕ್ತಿಗಳನ್ನು ಸಂರಕ್ಷಿಸುವುದು ಮತ್ತು ಲಾಭಗಳಿಸುವುದು ಆಗಿರುತ್ತದೆ.

ಇಂತಹ ಸಂಘರ್ಷಗಳಲ್ಲಿ ಶಕ್ತಿಶಾಲಿ ದೇಶದ ಕೇವಲ ಒಬ್ಬ ಸೈನಿಕ ಕೊಲ್ಲಲ್ಪಟ್ಟರೆ ಅದರ ಬಗ್ಗೆ ದುಃಖ ಪ್ರಕಟಣೆಯ ಹೊನಲು ಹರಿಯುತ್ತದೆ ಮತ್ತು ಪ್ರತೀಕಾರ ಮಾಡುವ ಪ್ರತಿಜ್ಞೆ ಮಾಡಲಾಗುತ್ತಿದೆ. ಆದರೆ ಬಾಂಬು ವರ್ಷಿಸುವುದರ ಮೂಲಕ ಅಥವಾ ಬೇರೆ ಆಯುಧಗಳನ್ನು ಬಳಸುವ ಮೂಲಕ ನೂರಾರು ಮಾತ್ರವಲ್ಲ ಸಾವಿರಾರು ನಿಷ್ಕಳಂಕ ನಾಗರಿಕರು ಹತರಾದರೂ – ಅವರಲ್ಲಿ ನಿಸ್ಸಹಾಯರಾದ ಮಹಿಳೆಯರೂ ಮಕ್ಕಳೂ ಸೇರಿದ್ದರೂ – ಈ ಶಕ್ತಿಶಾಲಿ ದೇಶಗಳು ಮೌನವಾಗಿರುತ್ತವೆ ಮತ್ತು ಆ ಘಟನೆಗಳ ಬಗ್ಗೆ ಒಂದಿಷ್ಟು ದುಃಖವನ್ನಾಗಲಿ, ಪಶ್ಚಾತ್ತಾಪವನ್ನಾಗಲಿ ಪ್ರಕಟಿಸುವುದಿಲ್ಲ.

ಇಂತಹ ಅನ್ಯಾಯ ಭರಿತ ಘಟನೆಗಳ ಪರಿಣಾಮ ಅತ್ಯಂತ ವಿನಾಶಕರವೂ ವಿಸ್ತಾರವಾಗಿರುವುದೂ ಆಗಿರುತ್ತದೆ. ಆಕ್ರಮಿಸಲ್ಪಟ್ಟ ದೇಶಗಳ ಜನರು ತಮ್ಮ ಜೀವಗಳಿಗೆ ಶಕ್ತಿಶಾಲಿ ದೇಶಗಳ ಜನರ ಜೀವಗಳಿಗಿರುವ ಮೌಲ್ಯಕ್ಕಿಂತ ಕಡಿಮೆ ಮೌಲ್ಯವಿರುವುದಾಗಿ ಕಾಣುತ್ತಾರೆ.

ಶಕ್ತಿಶಾಲಿ ದೇಶಗಳ ದ್ವಿಮುಖ ಧೋರಣೆ ಮತ್ತು ಮಾನವೀಯತೆ ರಹಿತ ನೀತಿಯಿಂದ ಪೀಡಿತರಾಗಿ, ಆಶಾಭಂಗ, ಸಿಟ್ಟು ಮತ್ತು ಕ್ರೋಧದಿಂದ ಅವರ ಭಾವನೆಗಳು ಕುದಿದು ಹೊರಹೊಮ್ಮುವ ಸಾಧ್ಯತೆ ಯಾವಾಗಲೂ ಇರುತ್ತದೆ. ಅಂತಹ ದೇಶಗಳ ಶಾಂತಿ ಮತ್ತು ಭದ್ರತೆ ನಾಮಾವಶೇಷವಾಗಿದೆ. ಆದರೆ ಲೋಕದ ಅನ್ಯ ದೇಶಗಳು ತಮ್ಮನ್ನು ಆ ದೇಶಗಳ ದುಸ್ಥಿತಿ ಬಾಧಿಸದು ಎಂದು ಭಾವಿಸುವುದು ಅವಿವೇಕತನವಾಗಿದೆ. ಈಗ ಲೋಕದ ದೇಶಗಳು ಎಷ್ಟು ಪರಸ್ಪರ ಜೋಡಿಸಲ್ಪಟ್ಟಿದೆ ಎಂದರೆ ಲೋಕದ ಒಂದು ಭಾಗದಲ್ಲಿ ಸಂಭವಿಸುವ ಅಸ್ತವ್ಯಸ್ತತೆಗಳು ಮತ್ತು ಸಂಘರ್ಷಗಳು ಆ ಭಾಗದ ಪರಿಮಿತಿಗಳಿಂದ ಹೊರಗೆ ವ್ಯಾಪಿಸುವುದು ಖಂಡಿತವಾದ ವಿಷಯವಾಗಿದೆ. ನಾವು ಅಂತಹ ಉದಾಹರಣೆಗಳನ್ನು ಕಳೆದ ಕೆಲವು ವರ್ಷಗಳಲ್ಲಿ ಕಂಡಿದ್ದೇವೆ.

ಆದುದರಿಂದ ನಾವು ವಾಸ್ತವಿಕವಾಗಿಯೂ ಶಾಂತಿಯನ್ನು ನಮ್ಮ ವೈಯಕ್ತಿಕ ನೆಲೆಯಲ್ಲಿಯೂ ಸಾಮೂಹಿಕ ನೆಲೆಯಲ್ಲೂ ಆಶಿಸುವವರಾದರೆ ನಾವು ಪ್ರಮುಖವಾಗಿ ಪಾಲಿಸಬೇಕಾದ ತತ್ವವೇನೆಂದರೆ, ನಾವು ನಮಗೆ ಏನನ್ನು ಇಚ್ಛಿಸುತ್ತೇವೋ ಅದನ್ನು ಅನ್ಯರಿಗೋಸ್ಕರವೂ ಇಚ್ಛಿಸಬೇಕು. ನಾನು ಹಿಂದೆ ಹೇಳಿದ ಹಾಗೆ ಈ ಸರಳ ತತ್ವವು ಲೋಕದಲ್ಲಿ ನೈಜ ಶಾಂತಿ ಸ್ಥಾಪಿಸಲಿರುವ ಅಸ್ತಿಭಾರವಾಗಿದೆ.

ಇಸ್ಲಾಮ್ ಧರ್ಮದ ಬಗ್ಗೆ ಹೇಳುವುದಾದರೆ, ಪವಿತ್ರ ಪೈಗಂಬರ್ ಮುಹಮ್ಮದ್(ಸ) ಹೀಗೆ ಉಪದೇಶಿಸಿದರು: ನೈಜ ಶಾಂತಿ ಗಳಿಸಲು ಮಾನವರು ಸರ್ವಶಕ್ತನಾದ ದೇವನ ಕಡೆಗೆ ಅಭಿಮುಖೀಕರಿಸಬೇಕು. ಅವನು ಶಾಂತಿಯ ಉದ್ಭವ ಸ್ಥಾನವಾಗಿದ್ದಾನೆ ಮತ್ತು ಪರಿಶುದ್ಧನಾಗಿದ್ದಾನೆ. ಅವನ ಗುಣವಿಶೇಷಗಳನ್ನು ಅನುಸರಿಸಲು ಪ್ರಯತ್ನಿಸಬೇಕು. ಇದರ ಅರ್ಥವೇನೆಂದರೆ, ಮನುಷ್ಯರು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಶಾಂತಿಯನ್ನು ಹೊಂದುವ ಉದ್ದೇಶದಿಂದ ಬದಿಗೆ ಸರಿಸಬೇಕು ಮತ್ತು ಅವರು ಯಾವಾಗಲೂ ತಮ್ಮ ಉದ್ದೇಶಲಕ್ಷ್ಯಗಳನ್ನು ಶುದ್ಧವಾಗಿರಿಸಬೇಕು.

ನಿಶ್ಚಯವಾಗಿಯೂ ಇಂದು ಲೋಕದಲ್ಲಿ ಜಾರಿಯಲ್ಲಿರುವ ಒಡಕುಗಳಿಗೆ ಕಾರಣವಾಗಿರುವುದು ಸಂಬಂಧಿತ ಪಕ್ಷಗಳ ಉದ್ದೇಶಲಕ್ಷ್ಯಗಳು ನಿಷ್ಕಳಂಕವೂ ಪ್ರಾಮಾಣಿಕವೂ ಆಗದಿರುವುದರಿಂದಾಗಿದೆ. ಅವರ ಮಾತುಗಳಲ್ಲಿ ಮತ್ತು ಅವರು ಮಾಡುವ ಕೃತ್ಯಗಳಲ್ಲಿ ಸ್ಪಷ್ಟವಾದ ವೈರುಧ್ಯಗಳಿರುತ್ತವೆ. ಒಬ್ಬ ಮನುಷ್ಯನ ನಡೆ ಮತ್ತು ನುಡಿಯ ಮಧ್ಯೆ ಸಾಮರಸ್ಯವಿಲ್ಲದಿದ್ದಲ್ಲಿ ಎಂದೂ ಶಾಂತಿ ಸ್ಥಾಪಿತವಾಗಲಾರದು.

ಯುನೈಟೆಡ್ ಸ್ಟೇಟ್ಸ್, ಚೀನಾ, ರಶ್ಯಾ, ಯುರೋಪಿಯನ್ ದೇಶಗಳು, ಮುಸ್ಲಿಮ್ ದೇಶಗಳು ಮತ್ತು ಇತರ ದೇಶಗಳ ಪ್ರತಿಯೊಂದು ಸರಕಾರ ಮತ್ತು ಪ್ರತಿಯೊಬ್ಬ ರಾಜಕಾರಣಿ ಯುದ್ಧಗಳನ್ನು ಮತ್ತು ರಕ್ತಪಾತವನ್ನು ಖಂಡಿಸುವ ರೂಢಿಯನ್ನು ಹೊಂದಿದ್ದಾರೆ. ಆದರೆ ವಾಸ್ತವಿಕವೇನೆಂದರೆ, ಅವುಗಳ ಬಗ್ಗೆ ಅವರು ಹೊಂದಿರುವ ವಿರೋಧ ಅವರ ಸ್ವಾರ್ಥ ಹಿತಾಸಕ್ತಿಗೆ ಮತ್ತು ಅವರ ಜನತೆಗೆ ಸೀಮಿತವಾಗಿರುತ್ತದೆ.

ನಿಯಮಗಳ ಪಾಲನೆ, ನ್ಯಾಯನಿಷ್ಠೆ, ಮಾನವ ಹಕ್ಕುಗಳ ರಕ್ಷಣೆ ಮೊದಲಾದುವುಗಳ ಬಗ್ಗೆ ಅವರ ಅರಚಾಟ ಅವರ ಸ್ವಂತ ಹಿತಾಸಕ್ತಿಗಳು ಅಪಾಯದಲ್ಲಿರುವಾಗ ಹಲವು ಬಾರಿ ಪೊಳ್ಳಾಗಿರುತ್ತದೆ. ಅವರು

ಆಕ್ರಮಿಸಲ್ಪಟ್ಟಿದೆ ಅಥವಾ ಅವರಿಗೆ ಹಾನಿ ಉಂಟಾದರೆ ಅವರು ಅನ್ಯಾಯದ ಬಗ್ಗೆ ತೀವ್ರ ಕ್ರೋಧವನ್ನು ಪ್ರಕಟಿಸುತ್ತಾರೆ. ಆದರೆ ಅವರು ಸ್ವತಃ ಬಲಹೀನ ದೇಶಗಳ ಅಂತಃಕಲಹಗಳ ಮತ್ತು ಸಂಘರ್ಷಗಳ ಲಾಭ ಪಡೆದು ತಮ್ಮ ಹಿತಕ್ಕೋಸ್ಕರ ಆದೇಶಗಳನ್ನು ಶೋಷಿಸುತ್ತಾರೆ.

ಒಂದು ದೇಶದಲ್ಲಿ ಅಂತಃಕಲಹ ಜಾರಿಯಲ್ಲಿರುವಾಗ ವಿರೋಧಿ ಗುಂಪುಗಳನ್ನು ಶಾಂತಿ ಸಂಧಾನದ ಮಾತುಕತೆಗೆ ಕರೆದು ಪ್ರಾಮಾಣಿಕವಾಗಿ ಚರ್ಚೆ ನಡೆಸುವಂತೆ ಮಾಡುವುದಕ್ಕೆ ಪ್ರತಿಯಾಗಿ ಶಕ್ತಿಶಾಲಿ ಪ್ರಮುಖ ರಾಷ್ಟ್ರಗಳು ಇತರ ದೇಶಗಳ ಸಂಘರ್ಷಗಳಲ್ಲಿ ಹಸ್ತಕ್ಷೇಪ ನಡೆಸಿ ತಮ್ಮ ಹಿತಾಸಕ್ತಿಗಳಿಗೆ ಬೆಂಬಲ ನೀಡುವ ಪಕ್ಷಕ್ಕೆ ಆಯುಧ ಪೂರೈಕೆ ಮಾಡುತ್ತವೆ. ಆ ರೀತಿ ಅವರು ಬೆಂಕಿಗೆ ಪೆಟ್ರೋಲ್ ಸುರಿಯುತ್ತಾರೆ ಮತ್ತು ಅದರ ಪರಿಣಾಮವಾಗಿ ಮಹಿಳೆಯರು, ಮಕ್ಕಳು, ವೃದ್ಧರು ಸಹಿತ ನಿಷ್ಕಳಂಕ ಜನರು ಪ್ರಾಣ ಕಳೆದುಕೊಳ್ಳುತ್ತಾರೆ ಮತ್ತು ಕುಟುಂಬಗಳು ನಾಶವಾಗುತ್ತವೆ. ನಗರಗಳು, ಪಟ್ಟಣಗಳು, ಗ್ರಾಮಗಳು ಧ್ವಂಸಗೊಳಿಸಲ್ಪಡುತ್ತಿವೆ.

ಇವುಗಳ ಪರಿಣಾಮವಾಗಿ ವಿವಿಧ ದೇಶಗಳ ಜನರು ನಿರಾಶೆಯಿಂದ ಕ್ರೋಧಭರಿತರಾಗಿ ಬಂಡಾಯವೇಳುತ್ತಾರೆ. ಅನೇಕ ಮುಸ್ಲಿಮ್ ದೇಶಗಳಲ್ಲಿ ಇತ್ತೀಚೆಗೆ ಹೀಗೆಯೇ ಸಂಭವಿಸುತ್ತಾ ಇದೆ. ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೆ ಆದ್ಯತೆ ನೀಡುವ ಶಕ್ತಿಶಾಲಿ ದೇಶಗಳು ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತಿದ್ದಾರೆಂದು ಹೇಳಲು ಸಾಧ್ಯವೇ? ಇಸ್ಲಾಮಿನ ವಿಮರ್ಶಕರು, ಲೋಕದ ಅಶಾಂತಿಗೆ ಕಾರಣ ಇಸ್ಲಾಮ್ ಎಂದು ದೂಷಿಸುವುದನ್ನು ಮುಂದುವರಿಸಲು ಸಾಧ್ಯವೇ?

ಇಂದಿನ ಕಾಲದಲ್ಲಿ ಸಂಭವಿಸುತ್ತಿರುವ ಅನ್ಯಾಯಗಳಿಗೆ ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಹೊಣೆಯಾಗಿದ್ದಾರೆಂದು ಹೇಳುತ್ತಾ ಇರಲು ಸಾಧ್ಯವೇ?

ಒಂದು ವಿಷಯ ಸ್ಪಷ್ಟವಾಗಿ ತಿಳಿಯುತ್ತದೆ. ಮುಸ್ಲಿಮ್ ದೇಶಗಳಲ್ಲಿ ಮತ್ತು ಇತರ ದೇಶಗಳಲ್ಲಿ ಸಂಭವಿಸುತ್ತಾ ಇರುವ ಪ್ರಕ್ಷುಬ್ಧತೆಗೆ ಇಸ್ಲಾಮ್ ತತ್ವಗಳೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಅವುಗಳಿಗೆ ಕಾರಣ ಒಂದು ಕಡೆ ಕೆಲವು ದೇಶಗಳ ರಾಜಕೀಯ ನಾಯಕರ ಸ್ವಾರ್ಥ ಹಿತಾಸಕ್ತಿಗಳು, ಭ್ರಷ್ಟ ಸರಕಾರಗಳ ಕೃತ್ಯಗಳು ಮತ್ತು ಇನ್ನೊಂದು ಕಡೆ ವಿದ್ರೋಹಿ ವಿಭಜನಕಾರಿ ಗುಂಪುಗಳ ಕುಕೃತ್ಯಗಳು.

ಲೋಕದಲ್ಲಿ ಅಶಾಂತಿಗೆ ಇನ್ನೊಂದು ಕಾರಣ ಉಗ್ರವಾದಿ ಗುಂಪುಗಳ ಬರ್ಬರ ಕೃತ್ಯಗಳಾಗಿವೆ. ಅವರು ಉದ್ದೇಶಿಸುವುದು ಸಂಪತ್ತನ್ನು ಮತ್ತು ಆಡಳಿತೆ ಶಕ್ತಿಯನ್ನಾಗಿದೆ. ಅಸ್ತವ್ಯಸ್ತತೆಯ ಕೇಂದ್ರ ಮುಸ್ಲಿಮ್ ದೇಶಗಳಾಗಿದ್ದರೂ ಮುಸ್ಲಿಮೇತರ ದೇಶಗಳು ಪರಿಸ್ಥಿತಿಯನ್ನು ಉದ್ದೀಪಿಸುತ್ತಿದ್ದಾರೆಯೇ ಹೊರತು ಅವುಗಳಿಗೆ ಪರಿಹಾರ ಮಾರ್ಗವನ್ನು ಕಂಡುಕೊಳ್ಳುವುದಿಲ್ಲ.

ಇಸ್ಲಾಮ್ ಧರ್ಮ ಉಗ್ರವಾದಿಗಳನ್ನು ಉತ್ತೇಜಿಸಿದೆ ಎಂದು ವಾದಿಸಬಹುದಾದರೂ ಸ್ಪಷ್ಟವಾದ ಸತ್ಯವೇನೆಂದರೆ, ಅಂತಹ ಆರೋಪ ಸತ್ಯದಿಂದ ದೂರವಾಗಿರುವುದಾಗಿದೆ. ನಾನು ಹಿಂದೆ ಹೇಳಿದ ಹಾಗೆ ಇಸ್ಲಾಮಿನ ಪವಿತ್ರ ಪೈಗಂಬರರು(ಸ), ಸರ್ವಶಕ್ತನಾದ ಅಲ್ಲಾಹನು ಶಾಂತಿಯ ಉದ್ಭವಸ್ಥಾನವೆಂದೂ ಅವನು ಸಕಲ ಮಾನವರ ಪರಿಪಾಲಕನೆಂದೂ ಉಪದೇಶಿಸಿರುವರು. ಈ ವಿಷಯವನ್ನು ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದಲ್ಲಿಯೇ ಪ್ರಸ್ತಾಪಿಸಲಾಗಿದೆ. ಹೀಗಿರುವಾಗ ಇಸ್ಲಾಮಿನ ಪವಿತ್ರ ಪೈಗಂಬರರಿಗೆ(ಸ) ಅಸಹಿಷ್ಣುತೆಯನ್ನು ಪ್ರೋತ್ಸಾಹಿಸಲು ಮತ್ತು ಸಮಾಜದಲ್ಲಿ ಒಡಕನ್ನುಂಟುಮಾಡಲು ಹೇಗೆ ತಾನೆ ಸಾಧ್ಯ?

ಪವಿತ್ರ ಪೈಗಂಬರರು(ಸ) ತನ್ನ ಜೀವಿತದಾದ್ಯಂತ ವಿವಿಧ ಧರ್ಮಗಳ ವಿಶ್ವಾಸಿಗಳ ಮಧ್ಯೆ ಸೌಹಾರ್ದ ಸ್ಥಾಪಿಸಲು ಮತ್ತು ಕುಟುಂಬದಿಂದ ಮೊದಲುಗೊಂಡು ಅಂತರ್‍ರಾಷ್ಟ್ರೀಯ ಮಟ್ಟದ ತನಕ ಎಲ್ಲ ಹಂತಗಳಲ್ಲಿಯೂ ಶಾಂತಿ ಸ್ಥಾಪನೆಯ ಬಗ್ಗೆ ಒತ್ತಿ ಹೇಳಿದರು. ಇದು ಕೇವಲ ಅವರ ಉಪದೇಶ ಮಾತ್ರವಾಗಿರಲಿಲ್ಲ; ಅವರು ಆ ಉಪದೇಶವನ್ನು ಕೃತ್ಯರೂಪಕ್ಕೆ ತಂದವರೂ ಆಗಿದ್ದರು.

ಪವಿತ್ರ ಪೈಗಂಬರರು(ಸ) ಪ್ರಾರಂಭ ಕಾಲದಿಂದಲೇ ಶಾಂತಿಯ ಸಂದೇಶ ನೀಡಿದರು ಮತ್ತು ಸಮಾಜದಲ್ಲಿ ಸಹಿಷ್ಣುತೆಯನ್ನೂ ಸೌಹಾರ್ದವನ್ನೂ ಪ್ರೋತ್ಸಾಹಿಸಿದರು. ಸರ್ವಶಕ್ತನಾದ ದೇವನು ಎಲ್ಲ ಜನರಿಗೆ ವಂಶ, ವರ್ಣ ವ್ಯತ್ಯಾಸವಿಲ್ಲದೆ ಶಾಂತಿಮಯ ಜೀವನವನ್ನು ಬಯಸುತ್ತಾನೆಂದು ಪವಿತ್ರ ಪೈಗಂಬರರು(ಸ) ಘೋಷಿಸಿದರಲ್ಲದೆ ಮಾನವೀಯ ಮೌಲ್ಯಗಳನ್ನು ಗುರುತಿಸಿ ಬೆಂಬಲಿಸಿದರು.

ಆದ್ಯಕಾಲದ ಮುಸ್ಲಿಮರು ಯುದ್ಧ ಮಾಡುತ್ತಿದ್ದರೆಂದೂ ಅವರು ಅನ್ಯ ಧರ್ಮದವರ ವಿಶ್ವಾಸಗಳ ಬಗ್ಗೆ ಅಸಹನೆದೋರುತ್ತಿದ್ದರೆಂದೂ ಆಕ್ಷೇಪಿಸಲಾಗುತ್ತಿದೆ. ಆದರೆ ಇಸ್ಲಾಮಿನ ಚರಿತ್ರೆಯನ್ನು ಪೂರ್ವಗ್ರಹ ಪೀಡಿತರಾಗದೆ ಪರಿಶೀಲಿಸಿದರೆ ಈ ಆರೋಪ ತಪ್ಪೆಂದೂ ಅನ್ಯಾಯಕರವಾದುದೆಂದೂ ತಿಳಿಯುವುದು.

ಇಸ್ಲಾಮ್ ಸ್ಥಾಪಿತವಾದಾಗ ಮುಸ್ಲಿಮರು ಮಕ್ಕದಲ್ಲಿ ನಿಷ್ಕರುಣ ಹಿಂಸಾಚಾರಗಳಿಗೆ ಗುರಿಯಾಗಿದ್ದರು. ಕೆಲವರನ್ನು ಹುತಾತ್ಮರನ್ನಾಗಿ ಮಾಡಲಾಯಿತು. ಬೇರೆ ಕೆಲವರಿಗೆ ಕ್ರೂರವಾಗಿ ಚಿತ್ರಹಿಂಸೆ ನೀಡಲಾಯಿತು. ಆದರೆ ಮುಸ್ಲಿಮರು ಸಹನೆದೋರಿದರು ಮತ್ತು ಎಂದೂ ಪ್ರತೀಕಾರ ಮಾಡಲಿಲ್ಲ.

ಅತ್ಯಂತ ದಾರುಣ ಹಿಂಸಾಚಾರಗಳಿಗೆ ಈಡಾದ ಕೆಲವು ಬಲಹೀನ ಮುಸ್ಲಿಮರು, ಇಂದು ಇತಿಯೋಪಿಯ ಎಂದು ಕರೆಯಲ್ಪಡುವ ದೇಶಕ್ಕೆ ವಲಸೆ ಹೋದರು. ಆದರೆ ಇಸ್ಲಾಮಿನ ವಿರೋಧಿಗಳು ಆ ದೇಶದಲ್ಲಿ ಮುಸ್ಲಿಮರು ಶಾಂತಿಯಿಂದ ನೆಲೆಸಲು ಬಿಡಲಿಲ್ಲ. ಶತ್ರುಗಳು ಇತಿಯೋಪಿಯಕ್ಕೆ ಹೋಗಿ ಅಲ್ಲಿನ ದೊರೆಯೊಂದಿಗೆ ಮುಸ್ಲಿಮರನ್ನು ಆ ದೇಶದಿಂದ ಗಡಿಪಾರು ಮಾಡಲು ಅಪೇಕ್ಷಿಸಿದರು. ಮುಸ್ಲಿಮರನ್ನು ಮರಳಲು ಬಲಾತ್ಕಾರ ಮಾಡಿ ಅವರ ಮೇಲೆ ಹಿಂಸಾಚಾರ ಜಾರಿಗೊಳಿಸಿ ಇಸ್ಲಾಮನ್ನು ಹರಡುವುದರಿಂದ ತಡೆಯಲು ಶತ್ರುಗಳು ಉದ್ದೇಶಿಸಿದ್ದರು.

ಮಕ್ಕದ ಅವಿಶ್ವಾಸಿಗಳು ಇತಿಯೋಪಿಯದ ದೊರೆಯೊಂದಿಗೆ ಹೇಳಿದರು: ಮುಸ್ಲಿಮರು ಹೊಸ ಧರ್ಮವನ್ನು ಸ್ಥಾಪಿಸಿದ್ದಾರೆ ಮತ್ತು ವಿಗ್ರಹಾರಾಧನೆಯನ್ನು ಖಂಡಿಸುತ್ತಾರೆ. ಮುಸ್ಲಿಮರು ಸಮಾಜದಲ್ಲಿ ಅಸ್ತವ್ಯಸ್ತತೆಯನ್ನೂ ಅಶಾಂತಿಯನ್ನೂ ಹಬ್ಬಿಸುತ್ತಾರೆ. ದೊರೆಯು ಮುಸ್ಲಿಮರಿಗೆ ತಮ್ಮ ವಿರುದ್ಧ ಮಾಡಿದ ಆಪಾದನೆಯ ಬಗ್ಗೆ ಪ್ರತಿವಾದ ಮಾಡಲು ಆಜ್ಞಾಪಿಸಿದಾಗ ಮುಸ್ಲಿಮರು ಸಕಲ ಸೃಷ್ಟಿಗಳ ಸೃಷ್ಟಿಕರ್ತನಾದ ಏಕದೇವನನ್ನು ತಾವು ನಂಬುವುದಾಗಿಯೂ ಅವನನ್ನು ಮಾತ್ರ ಆರಾಧಿಸುವುದಾಗಿಯೂ ಮತ್ತು ಎಲ್ಲ ಸಮುದಾಯಗಳೊಂದಿಗೆ ಶಾಂತಿಯಿಂದ ಜೀವಿಸಲು ಇಚ್ಛಿಸುವುದಾಗಿಯೂ ಎಲ್ಲ ಧರ್ಮಗಳ ಜನರು ಪರಸ್ಪರ ಗೌರವಿಸಬೇಕೆಂದು ಬಯಸುವುದಾಗಿಯೂ ಹೇಳಿದರು. ಶಕ್ತಿಶಾಲಿಗಳಾದ ಶ್ರೀಮಂತರು ಬಲಹೀನರ ಹಕ್ಕುಗಳನ್ನು

ತುಳಿದು ಹಾಕಬಾರದೆಂದೂ ಬಡವರು ತಮಗಿಂತ ಉತ್ತಮ ಸ್ಥಿತಿಯಲ್ಲಿರುವವರ ಬಗ್ಗೆ ದ್ವೇಷಭಾವನೆ ಹೊಂದಬಾರದು ಎಂಬುದೇ ತಮ್ಮ ವಿಶ್ವಾಸವೆಂದೂ ಮುಸ್ಲಿಮರು ಹೇಳಿದರು.

ದೊರೆಯು ಅವಿಶ್ವಾಸಿಗಳೊಂದಿಗೆ ಕೇಳಿದನು: ಮುಸ್ಲಿಮರು ಎಂದಾದರೂ ಯುದ್ಧ ಮಾಡಿರುವರೋ? ಅವರು ಸುಳ್ಳು ಹೇಳಿರುವರೋ? ಅವರು ವಾಗ್ದಾನಗಳ ಉಲ್ಲಂಘನೆ ಮಾಡಿರುವರೋ ಅಥವಾ ವಿದ್ರೋಹವನ್ನು ಉತ್ತೇಜಿಸಿರುವರೋ? ಆಗ ಅವಿಶ್ವಾಸಿಗಳು ಮುಸ್ಲಿಮರು ಹಾಗೇನೂ ಮಾಡಿರಲಿಲ್ಲ ಎಂದು ಒಪ್ಪಿಕೊಳ್ಳಲು ನಿರ್ಬಂಧಿತರಾದರು.

ಮಕ್ಕದ ಅವಿಶ್ವಾಸಿಗಳು ಇಸ್ಲಾಮಿನ ಪವಿತ್ರ ಪೈಗಂಬರರನ್ನು(ಸ) ಮತ್ತು ಅವರ ಅನುಯಾಯಿಗಳನ್ನು ದ್ವೇಷಿಸುತ್ತಿದ್ದರೂ ಅವರು ಇಸ್ಲಾಮನ್ನು ನಾಶಮಾಡಲು ಇಚ್ಛಿಸುತ್ತಿದ್ದರೂ ಅವರು ಸಾಕ್ಷ್ಯ ಹೇಳಿದರು – ಇಸ್ಲಾಮಿನ ಪ್ರವಾದಿಯವರು ಎಂದೂ ಸುಳ್ಳು ಹೇಳಿರಲಿಲ್ಲ; ಎಂದೂ ವಾಗ್ದಾನವನ್ನು ಉಲ್ಲಂಘಿಸಲಿಲ್ಲ, ಎಂದೂ ಕ್ರೂರವಾಗಿಯೂ ಅನ್ಯಾಯದಿಂದಲೂ ವರ್ತಿಸಿರಲಿಲ್ಲ.

ಎಲ್ಲ ಸಮಯಗಳಲ್ಲೂ ಅತ್ಯಂತ ಕ್ರೂರ ಬರ್ಬರ ಹಿಂಸಾಚಾರಗಳಿಗೆ ಗುರಿಯಾದಾಗಲೂ ಇಸ್ಲಾಮಿನ ಪೈಗಂಬರರು(ಸ) ಸಹನೆಯಿಂದ ವರ್ತಿಸುತ್ತಾ ಇದ್ದರು.

ಪವಿತ್ರ ಪೈಗಂಬರರು(ಸ) ತನ್ನ ನೋವುಗಳನ್ನು ಸರ್ವಶಕ್ತನಾದ ದೇವನ ಮುಂದೆ ನಿವೇದಿಸಿದರು. ಅವರು ತನ್ನ ದುಃಖವನ್ನು ದೇವನ ಮುಂದೆ ನಿವೇದಿಸಿದ ಬಗ್ಗೆ ಮತ್ತು ತನ್ನ ಜನತೆಯನ್ನು ಶಾಂತಿ ಮತ್ತು ಸಮೃದ್ಧಿಯ ಕಡೆಗೆ ಆಹ್ವಾನಿಸಿದ ಬಗ್ಗೆ ಪವಿತ್ರ ಖುರ್‌ಆನ್ ಪ್ರಸ್ತಾಪಿಸಿದೆ. ಆದರೆ ಮಕ್ಕದ ಜನರು ಅವರ ಆಹ್ವಾನಕ್ಕೆ ಕಿವಿಗೊಡದೆ ತಮ್ಮ ಕ್ರೂರ ಹಿಂಸಾಚಾರಗಳನ್ನು ಮುಂದುವರಿಸಿದರು. ಪವಿತ್ರ ಪೈಗಂಬರರು(ಸ) ಮಕ್ಕದಲ್ಲಿದ್ದಾಗ ಮುಸ್ಲಿಮರನ್ನು ಹಿಂಸಾಚಾರಗಳಿಗೆ ಗುರಿಪಡಿಸಿದ ಅವಿಶ್ವಾಸಿಗಳ ವಿರುದ್ಧ ಎಂದೂ ಖಡ್ಗವೆತ್ತಿರಲಿಲ್ಲ. ಮಕ್ಕದ ಆಡಳಿತೆಗಾರರ ವಿರುದ್ಧ ಅಸಹಕಾರದಿಂದ ವರ್ತಿಸಿರಲಿಲ್ಲ ಅಥವಾ ವಿದ್ರೋಹವನ್ನು ಉತ್ತೇಜಿಸಿರಲಿಲ್ಲ.

ಪವಿತ್ರ ಪೈಗಂಬರ್(ಸ) ಸಹನೆದೋರಿದುದು ಸರ್ವಶಕ್ತನಾದ ಅಲ್ಲಾಹನ ಆಜ್ಞೆ ಪ್ರಕಾರವಾಗಿತ್ತು. ಪವಿತ್ರ ಖುರ್‌ಆನ್ ಅಧ್ಯಾಯ 25 ವಚನ 64ರಲ್ಲಿ ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರನ್ನು ಸಂಬೋಧಿಸಿ ಹೇಳುತ್ತಾನೆ: "ಪರಮ ದಯಾವಂತನ (ಅಲ್ಲಾಹನ) ಭಕ್ತದಾಸರು ಭೂಮಿಯಲ್ಲಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. ಅಜ್ಞಾನಿಗಳಾದ ಜನರು ಅವರನ್ನು ಮಾತಿಗೆಳೆದರೆ ಅವರು 'ಸಲಾಮ್' (ಶಾಂತಿ) ಎಂದು ಹೇಳುತ್ತಾರೆ."

ಪವಿತ್ರ ಖುರ್‌ಆನ್ ಮುಸ್ಲಿಮರೊಂದಿಗೆ ಒತ್ತಿ ಹೇಳಿತು ಮತ್ತು ಅವರಿಗೆ ಸಲಹೆ ನೀಡಿತು – ಅವರನ್ನು ಎಷ್ಟು ರೊಚ್ಚಿಗೆಬ್ಬಿಸಿದರೂ ಹಿಂಸಾಚಾರಗಳಿಗೆ ಗುರಿಪಡಿಸಿದರೂ ಅವರು ಸಹನೆ ದೋರಬೇಕೆಂದು; ಶತ್ರುಗಳ ವಿದ್ವೇಷ ಮತ್ತು ವಿರೋಧವನ್ನು ಶಾಂತಿಯಿಂದಲೂ ಸಹನೆಯಿಂದಲೂ ಎದುರಿಸಬೇಕೆಂದು.

ಅದರ ಪರಿಣಾಮವಾಗಿ ಆದ್ಯ ಕಾಲದ ಮುಸ್ಲಿಮರು ಹಿಂಸಾಚಾರಗಳಿಗೂ ಅಪಕೀರ್ತಿಗಳಿಗೂ ಅಪಮಾನಗಳಿಗೂ ಗುರಿಯಾದರೂ ಸರ್ವಶಕ್ತನಾದ ದೇವನ ಆಜ್ಞೆ ಪ್ರಕಾರ ಸಹನೆಯಿಂದ ವರ್ತಿಸಿದರು. ಪ್ರತೀಕಾರ ಮಾಡುವ ಸಹಜ ಮನೋಭಾವವನ್ನು ನಿಗ್ರಹಿಸಿ, ತಮಗೆ ಇಷ್ಟಪಡುವುದನ್ನು ಅನ್ಯರಿಗೂ ಇಷ್ಟಪಡಬೇಕೆಂಬ ಮಾನದಂಡವನ್ನು ಪಾಲಿಸುವವರಾಗಿ ಮುಸ್ಲಿಮರು ತಮ್ಮ ಶತ್ರುಗಳಿಗೋಸ್ಕರ ಸಹ ಶಾಂತಿಯನ್ನು ಬಯಸಿದರು.

ತಾತ್ಕಾಲಿಕವಾದ ಶಾಂತಿಯನ್ನಲ್ಲ ಮುಸ್ಲಿಮರು ಅನ್ಯರಿಗೋಸ್ಕರ ಆಶಿಸಿದುದು. ಅವರು ಆಶಿಸಿದುದು ಶಾಶ್ವತ ಶಾಂತಿಯನ್ನಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 10 ವಚನ 26ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಅಲ್ಲಾಹನು ಶಾಂತಿಯ ನೆಲೆವೀಡಿಗೆ ಆಹ್ವಾನಿಸುತ್ತಾನೆ."

ಪವಿತ್ರ ಖುರ್‌ಆನಿನ ಈ ವಚನ ಸ್ಪಷ್ಟಪಡಿಸುವುದೇನೆಂದರೆ, ಶಾಶ್ವತ ಶಾಂತಿಯನ್ನೂ ಸೌಹಾರ್ದವನ್ನೂ ಸ್ಥಾಪಿಸಲು ಮತ್ತು ಜನರನ್ನು ಒಟ್ಟಿಗೆ ಸೇರಿಸಲು ತಮ್ಮ ಪೂರ್ಣ ಶಕ್ತಿಸಾಮರ್ಥ್ಯಗಳನ್ನು ಮುಸ್ಲಿಮರು ಬಳಸಬೇಕು.

ಆದರೆ ಅವಿಶ್ವಾಸಿಗಳ ಹಿಂಸಾಚಾರ ಅನೇಕ ವರ್ಷಗಳ ಕಾಲ ಮುಂದುವರಿಯಿತು. ಕೊನೆಗೆ ಹಿಂಸಾಚಾರ ಎಲ್ಲ ಪರಿಮಿತಿಗಳನ್ನು ಮೀರಿದಾಗ ಇಸ್ಲಾಮಿನ ಪೈಗಂಬರರು(ಸ) ಮತ್ತು ಅವರ ಅನುಯಾಯಿಗಳು ಮದೀನಕ್ಕೆ ವಲಸೆ ಹೋದರು. ಆದರೆ ಇಸ್ಲಾಮಿನ ಶತ್ರುಗಳು ಮುಸ್ಲಿಮರನ್ನು ಮದೀನದಲ್ಲಿ ಕೂಡ ಶಾಂತಿಯಿಂದ ಜೀವಿಸಲು ಬಿಡಲಿಲ್ಲ. ಅವರು ಮುಸ್ಲಿಮರನ್ನು ಬೆನ್ನಟ್ಟಿದರು ಮತ್ತು ಬೇಗನೆ ಮುಸ್ಲಿಮರ ವಿರುದ್ಧ ಯುದ್ಧ ಮಾಡಿದರು. ವರ್ಷಗಟ್ಟಲೆ ಶತ್ರುಗಳ ದ್ವೇಷಭರಿತ ಹಿಂಸಾಚಾರಗಳನ್ನು ಅನುಭವಿಸಿದ ನಂತರ ಮತ್ತು ಮನೆಗಳಿಂದ ಹೊರದೂಡಲ್ಪಟ್ಟ ನಂತರ ಮುಸ್ಲಿಮರಿಗೆ ಸರ್ವಶಕ್ತನಾದ ಅಲ್ಲಾಹನು ಬಲಪ್ರಯೋಗಿಸಿ ಶತ್ರುಗಳನ್ನು ಪ್ರತಿರೋಧಿಸಲು ಅನುಮತಿ ನೀಡಿದನು.

ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ, ಪ್ರತಿರೋಧಕ ಯುದ್ಧ ಮಾಡಲು ಅನುಮತಿಸಿದುದು ಕೇವಲ ಇಸ್ಲಾಮನ್ನಾಗಲಿ, ಮುಸ್ಲಿಮರನ್ನಾಗಲಿ ಮಾತ್ರ ರಕ್ಷಿಸಲಿಕ್ಕೋಸ್ಕರವಾಗಿರಲಿಲ್ಲ. ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40, 41 ಹೀಗೆ ಸೂಚಿಸುತ್ತದೆ: ಯುದ್ಧ ಮಾಡಲು ಅನುಮತಿ ನೀಡಿರುವುದು ಎಲ್ಲ ಧರ್ಮಗಳನ್ನು ಸಂರಕ್ಷಿಸಲು ಮತ್ತು ಸಾರ್ವತ್ರಿಕ ಧಾರ್ಮಿಕ ಸ್ವಾತಂತ್ರ್ಯ ನೀಡಲಿಕ್ಕಾಗಿತ್ತು. ಏಕೆಂದರೆ ಇಸ್ಲಾಮಿನ ಶತ್ರುಗಳ ವಾಸ್ತವಿಕ ಗುರಿಗಳು ಅವುಗಳಾಗಿದ್ದುವು.

ಒಂದು ವಿಷಯ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಇಸ್ಲಾಮಿನ ಪವಿತ್ರ ಪೈಗಂಬರರು(ಸ) ತನ್ನ ಅನುಯಾಯಿಗಳು ಅತ್ಯಂತ ಕಠಿಣ ಶಿಸ್ತಿನ ಯುದ್ಧ ನಿಯಮಗಳನ್ನು ಪಾಲಿಸಬೇಕೆಂದು ಆಜ್ಞಾಪಿಸಿದ್ದರು. ಉದಾಹರಣೆಗೆ, ಯುದ್ಧ ಕೈದಿಗಳೊಂದಿಗೆ ಕಾರುಣ್ಯದಿಂದ ವರ್ತಿಸಬೇಕೆಂದೂ ಸಾಧ್ಯವಿರುವಾಗಲೆಲ್ಲ ಅವರನ್ನು ಬಿಡುಗಡೆ ಮಾಡಬೇಕೆಂದೂ ಆಜ್ಞಾಪಿಸಿದ್ದರು. ಮಕ್ಕಳನ್ನು, ಮಹಿಳೆಯರನ್ನು, ವೃದ್ಧರನ್ನು, ರೋಗಿಗಳನ್ನು, ಆರಾಧನಾಲಯಗಳನ್ನು ಮತ್ತು ಧಾರ್ಮಿಕ ನಾಯಕರನ್ನು ಆಕ್ರಮಿಸಬಾರದೆಂದು ಪವಿತ್ರ ಪೈಗಂಬರರು(ಸ) ಆಜ್ಞಾಪಿಸಿದ್ದರು. ಪವಿತ್ರ ಪೈಗಂಬರರು(ಸ) ಹೀಗೆ ಸಹ ಹೇಳಿದರು: ಶತ್ರು ಪಕ್ಷದವರು ರಾಜಿ ಸಂಧಾನದ ಸೂಚನೆಯನ್ನು ನೀಡಿದರೆ ತಕ್ಷಣ ಅದನ್ನು ಅಂಗೀಕರಿಸಬೇಕು ಮತ್ತು ಶಾಂತಿ ಸ್ಥಾಪನೆಯ ಯಾವ ಸಂದರ್ಭವನ್ನೂ ಕಳೆದುಕೊಳ್ಳಬಾರದು.

ಇನ್ನೊಂದು ವಿಷಯ ಗಮನಾರ್ಹವಾಗಿದೆ. ಆದ್ಯಕಾಲದ ಮುಸ್ಲಿಮರು ರಣೋತ್ಸಾಹಿಗಳೂ ರಕ್ತಪಿಪಾಸುಗಳೂ ಆಗಿದ್ದರೆಂದು

ಸಾಮಾನ್ಯವಾಗಿ ಸೂಚಿಸಲಾಗುತ್ತಿದ್ದ ಬಗ್ಗೆ ಈಗ ಅನೇಕ ಪಾಶ್ಚಿಮಾತ್ಯ ಮುಸ್ಲಿಮೇತರ ಚರಿತ್ರೆಗಾರರು ಹೇಳುತ್ತಾರೆ – ಆದ್ಯಕಾಲದ ಮುಸ್ಲಿಮರ ಬಗ್ಗೆ ಈ ನಿಷ್ಕರ್ಷ ಸಂಪೂರ್ಣವಾಗಿ ತಪ್ಪಾಗಿದೆ ಎಂದು. ಅವರ ಸಂಶೋಧನೆಗಳು ಹೀಗೆ ಸಾಬೀತು ಗೊಳಿಸಿದೆ: ಇಸ್ಲಾಮಿನ ಆದ್ಯಕಾಲದಲ್ಲಿ ಸಂಭವಿಸಿದ ಯುದ್ಧಗಳಲ್ಲಿ ಸಂಭವಿಸಿದ ಜೀವಹಾನಿ ಇಂದಿನ ಕಾಲದಲ್ಲಿ ಒಂದೇ ಒಂದು ಬಾಂಬು ದಾಳಿಯಿಂದ ಸಂಭವಿಸುವ ಜೀವನಾಶಕ್ಕೆ ಹೋಲಿಸಿ ನೋಡುವುದಾದರೆ ಕೇವಲ ಲವಲೇಶ ಮಾತ್ರವಾಗಿದೆ.

ಇದರಿಂದ ತಿಳಿಯುವುದೇನೆಂದರೆ, ಇಸ್ಲಾಮ್ ಸಂಘರ್ಷವನ್ನಾಗಲಿ, ದ್ವೇಷವನ್ನಾಗಲಿ ಉತ್ತೇಜಿಸುವುದಿಲ್ಲ. ಅದು ಮಾನವರನ್ನು ವಿಭಜಿಸುವ ದ್ವೇಷದ ಗೋಡೆಯನ್ನು ಕೆಡವಿ ಹಾಕಲು ಮತ್ತು ಕಾರುಣ್ಯದ ಸೇತುವೆಗಳನ್ನು ನಿರ್ಮಿಸಿ ಮಾನವರನ್ನು ಒಗ್ಗೂಡಿಸಲು ಉಪದೇಶಿಸುತ್ತಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮಾಜದ ಪ್ರತಿಯೊಂದು ಹಂತದಲ್ಲಿಯೂ ಎಲ್ಲ ಜನಾಂಗಗಳ ಮಧ್ಯೆಯೂ ಶಾಂತಿಯನ್ನು ಹರಡುವ ಹೊಣೆಗಾರಿಕೆ ಮುಸ್ಲಿಮರಿಗಿದೆ. ಇದಕ್ಕೆ ಮೂಲಭೂತವಾದ ಕಾರಣ, ನಾನು ಹಿಂದೆ ಹೇಳಿದ ಹಾಗೆ ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯವಾಗಿದೆ. ಅದರಲ್ಲಿ ಹೀಗೆ ಹೇಳಲಾಗಿದೆ: "ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ"

ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಎಲ್ಲ ಜನರ ಪಾಲಕನೂ ಪೋಷಕನೂ ಆಗಿರುವಾಗ, ಒಬ್ಬ ಮುಸ್ಲಿಮನಿಗೆ ತನ್ನ ಸಹಸೃಷ್ಟಿಯ ಬಗ್ಗೆ ದ್ವೇಷವನ್ನು ಹೊಂದಲು ಸಾಧ್ಯವಿಲ್ಲ. ಆದುದರಿಂದ ಮುಸ್ಲಿಮರಾದ ನಾವು ಅನ್ಯರ ಬಗ್ಗೆ ಪ್ರೀತಿ, ಕಾರುಣ್ಯ ಮತ್ತು ಸಹಾನುಭೂತಿಯನ್ನು ಮಾತ್ರ ಹೊಂದಲು ಸಾಧ್ಯ.

ನಾವು ನಿಷ್ಠಾಬದ್ಧ ಮುಸ್ಲಿಮರಾದುದರಿಂದ ನಾವು ನಮ್ಮದೇ ಆಗಿರುವ ಧಾರ್ಮಿಕ ವಿಶ್ವಾಸಗಳನ್ನು ಹೊಂದಿದ್ದೇವೆ. ದೇವನೊಬ್ಬನೇ ಎಂದು ನಾವು ನಂಬುತ್ತೇವೆ. ನಾವು ಅವನ ಕಡೆಗೆ ಅಭಿಮುಖೀಕರಿಸುತ್ತೇವೆ ಮತ್ತು ಅವನನ್ನು ಮಾತ್ರ ಆರಾಧಿಸುತ್ತೇವೆ. ನಾವು ಪವಿತ್ರ ಖುರ್‌ಆನಿನ ಶಾಶ್ವತ ತತ್ವವಾದ "ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ" ಎಂಬ ತತ್ವಕ್ಕೆ ದೃಢವಾಗಿ ಬದ್ಧರಾಗಿದ್ದೇವೆ.

ನಾನು ಹಿಂದೆ ಹೇಳಿದ ಹಾಗೆ ಧರ್ಮ ಯಾವಾಗಲೂ ಹೃದಯಕ್ಕೆ ಸಂಬಂಧಿಸಿದ ವಿಷಯವಾಗಿದೆ ಮತ್ತು ಪ್ರತಿಯೊಬ್ಬನಿಗೆ ಸಂಬಂಧಿಸಿದ ವೈಯಕ್ತಿಕ ವಿಷಯವಾಗಿದೆ. ಇಸ್ಲಾಮ್ ಎಂಬ ಶಬ್ದದ ಅರ್ಥ "ಶಾಂತಿ" ಎಂದಾಗಿದೆ. ಮುಸ್ಲಿಮರು ಶಾಂತಿ ಪ್ರಿಯರಾಗಬೇಕೆಂದೂ ಅನ್ಯರಿಗೆ ಪ್ರೀತಿ ಮತ್ತು ಗೌರವ ತೋರಿಸಬೇಕೆಂದೂ ಸ್ಪಷ್ಟವಾಗಿ ಉಪದೇಶಿಸುವ ಅನೇಕ ವಚನಗಳು ಪವಿತ್ರ ಖುರ್‌ಆನ್‌ನಲ್ಲಿವೆ.

ಶಾಂತಿಯನ್ನು ಪ್ರತಿಪಾದಿಸುವ ಇಂತಹ ತತ್ವಗಳು ಇಸ್ಲಾಮಿನ ಪವಿತ್ರ ಪೈಗಂಬರರಿಗೆ[ಸ] ಅವತೀರ್ಣವಾಗಿರುವಾಗ ಆ ಪೈಗಂಬರರೇ ಆ ತತ್ವಗಳನ್ನು ಉಲ್ಲಂಘಿಸುವರೇ?

ಪ್ರಾಮಾಣಿಕರೂ ನಿಷ್ಪಕ್ಷ ಮತಿಗಳೂ ಆಗಿರುವ ಚರಿತ್ರೆಗಾರರು ಇಸ್ಲಾಮಿನ ಪವಿತ್ರ ಪೈಗಂಬರರ[ಸ] ಬಗ್ಗೆ, ಅವರು ಎಂದೂ ಕ್ರೌರ್ಯದಿಂದ ವರ್ತಿಸಲಿಲ್ಲವೆಂದೂ ಅನ್ಯರ ಹಕ್ಕುಗಳನ್ನು ಎಂದೂ ಕಿತ್ತುಕೊಳ್ಳಲಿಲ್ಲವೆಂದೂ ಸಾಕ್ಷ್ಯ ಹೇಳುತ್ತಾರೆ.

ಪ್ರತಿಯೊಂದು ಸಂದರ್ಭದಲ್ಲಿ ಪವಿತ್ರ ಪೈಗಂಬರರು[ಸ] ಶಾಂತಿ, ಸಹಿಷ್ಣುತೆ ಮತ್ತು ಅನ್ಯರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಕಲಿಸಿದರು. ಅವರ ಉಪದೇಶಗಳು ನಮಗೆ ಸ್ಫೂರ್ತಿದಾಯಕವಾಗಿವೆ. ನಾವು ಪವಿತ್ರ ಪ್ರವಾದಿಯ[ಸ] ಅನುಯಾಯಿಗಳೆಂದು ಅಭಿಮಾನ ಭರಿತರಾಗಿ ಘೋಷಿಸುತ್ತೇವೆ. ಪವಿತ್ರ ಖುರ್‌ಆನ್ ಅವರನ್ನು ಸಕಲ ಲೋಕಗಳಿಗೆ ಮಂಗಳದಾಯಕನೆಂದು ಘೋಷಿಸಿದೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ "ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ" ಎಂಬ ಧ್ಯೇಯ ವಚನ ಘೋಷಿಸುತ್ತಿರುವುದು ಇದೇ ಕಾರಣದಿಂದಾಗಿದೆ. ಸಂಘರ್ಷಭರಿತ, ಒಡಕುಭರಿತ ಈ ಕಾಲದಲ್ಲಿ ನಮ್ಮ ಸಂದೇಶವೇನೆಂದರೆ, ಎಲ್ಲ ರಾಷ್ಟ್ರಗಳೂ ಎಲ್ಲ ಜನಾಂಗಗಳೂ ತುರ್ತಾಗಿ ಶಾಂತಿ ಸ್ಥಾಪನೆಗೋಸ್ಕರ ಕಠಿಣ ಪರಿಶ್ರಮ ನಡೆಸಬೇಕು.

ಇಸ್ಲಾಮಿನ ಕಟು ವಿಮರ್ಶಕರು ಮನವರಿಕೆ ಮಾಡಬೇಕು. ಅವರು ತಮ್ಮ ನಂಜನ್ನೂ ವಿಷವನ್ನೂ ಇಸ್ಲಾಮ್ ಮತ್ತು ಅದರ ಪರಿಶುದ್ಧ ಪೈಗಂಬರರ[ಸ] ವಿರುದ್ಧ ಸುರಿಸುವುದಕ್ಕೆ ಬದಲಾಗಿ ಅವರು ತಮ್ಮ ಪಕ್ಷಪಾತ ಸ್ವಭಾವವನ್ನೂ ಮತ್ಸರವನ್ನೂ ಸ್ವಾರ್ಥವನ್ನೂ ತ್ಯಜಿಸಬೇಕು. ಹಾಗೆ ಮಾಡದಿದ್ದರೆ ಲೋಕದಲ್ಲಿ ಗಲಭೆ ಗೊಂದಲಗಳು ಮತ್ತು ದ್ವೇಷ ವರ್ಧಿಸುತ್ತಲೇ ಮುಂದುವರಿಯುವುದು. ಮುಸ್ಲಿಮರಲ್ಲಿ ಅವಿದ್ಯಾವಂತರಾಗಿರುವ ಮತ್ತು ಇಸ್ಲಾಮಿನ ನೈಜ ತತ್ವಗಳನ್ನು ಅರಿಯದವರಾದ ಜನರ ಆಶಾಭಂಗ ಮತ್ತು ಕ್ರೋಧ ಪ್ರಜ್ವಲಿಸುವುದು.

ಮುಸ್ಲಿಮ್ ಸಮುದಾಯದಲ್ಲಿ ಮಾತ್ರವಲ್ಲ, ಇತರ ಸಮಾಜಗಳಲ್ಲಿಯೂ ಯಾವ ಯುವ ಜನರು ತಮ್ಮ ಮುಂದಿನ ಜೀವಿತದ ಬಗ್ಗೆ ಆಶಾಭಂಗ ಅನುಭವಿಸುತ್ತಿರುವರೋ ಅವರು ತಮ್ಮ ಧರ್ಮದ ಮತಪಂಡಿತರು ಮತ್ತು ಉಗ್ರವಾದಿಗಳಿಗೆ ಸುಲಭವಾದ ಭೇಟೆಯಾಗುತ್ತಾರೆ ಮತ್ತು ಉಗ್ರವಾದಿಗಳು ಅವರ ಮನಸ್ಸುಗಳನ್ನು ವಿಷಭರಿತವನ್ನಾಗಿ ಮಾಡುತ್ತಾರೆ. ನಾವು ಇದನ್ನು ತಡೆಯಬೇಕು. ಅಲ್ಲದಿದ್ದರೆ ಆಧುನಿಕ ಲೋಕವನ್ನು ಕತ್ತಲೆಗೊಳಿಸಿದ ದ್ವೇಷದ ವಿಷ ವರ್ತುಲ ಮುಂದುವರಿಯುವುದು. ವಿಶಾಲ ಲೋಕದಲ್ಲಿ ಮತ್ತು ಮುಸ್ಲಿಮ್ ಸಮುದಾಯಗಳೊಳಗಿನ ಶಾಂತಿ ದೂರದ ಸ್ವಪ್ನವಾಗುವುದು.

ನಾನು ಆರಂಭದಲ್ಲಿಯೇ ಹೇಳಿದ ಹಾಗೆ ಒಬ್ಬರಿನ್ನೊಬ್ಬರ ಧಾರ್ಮಿಕ ಭಾವನೆಗಳನ್ನು ದೂಷಿಸುವುದಕ್ಕೆ ಬದಲಾಗಿ ನಾವು ಎಲ್ಲರೂ ಜೊತೆಗೂಡಬೇಕು ಮತ್ತು ನಮ್ಮ ಮಕ್ಕಳಿಗೆ ಹಾಗೂ ಮುಂದಿನ ಪೀಳಿಗೆಗಳಿಗೆ ಉತ್ತಮ ಭಾವಿ ಜೀವಿತವನ್ನು ನಿರ್ಮಿಸಲು ಪ್ರಯತ್ನಿಸಬೇಕು.

ನಾವು ನಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೆ ಸರಿಸಿ ಲೋಕದಲ್ಲಿ ಸ್ಥಿರವಾದ ಶಾಂತಿಯನ್ನು ಸ್ಥಾಪಿಸಲು ನಿಷ್ಠಾಪೂರ್ವಕವಾಗಿ ಪ್ರಯತ್ನಿಸಬೇಕು. ನಾವು ಪರಸ್ಪರ ಒಬ್ಬರಿನ್ನೊಬ್ಬರನ್ನು ಗೌರವಿಸಬೇಕು ಮತ್ತು ಐಕ್ಯತೆ ಹಾಗೂ ಸಾರ್ವಜನಿಕ ಹಿತದ ತತ್ವದ ಅಸ್ತಿಭಾರದ ಮೇಲೆ ನಿರ್ಮಿಸಲ್ಪಡುವ ಸಮಾಜದ ನಿರ್ಮಾಣ ಮಾಡಲು ಕಠಿಣ ಪರಿಶ್ರಮ ನಡೆಸಬೇಕು.

ಸರ್ವಶಕ್ತನಾದ ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯವನ್ನು ದಯಪಾಲಿಸಲಿ – ಆಮೀನ್.

**(Review of Religions December 2019ರ ಸಂಚಿಕೆಯಿಂದ. ಭಾಷಾಂತರ: ಎಮ್. ಉಬೈದುಲ್ಲಾ).**

# ಶಾಂತಿಯ ಮಾರ್ಗದರ್ಶಕ ಜ್ಯೋತಿ



**ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋಚ್ಚ ನೇತಾರರಾದ ಪಂಚಮ ಖಲೀಫ**

*ಯು.ಎಸ್.ಎ.ದ ಫಿಲಡೆಲ್ಫಿಯಾದಲ್ಲಿ ಬೈತುಲ್ ಆಫಿಯತ್ ಮಸ್‌ಜಿದ್ ಉದ್ಘಾಟನೆ ಸಂದರ್ಭದಲ್ಲಿ (19–10–2018) ಮಾಡಿದ ಭಾಷಣ.*

*ಫಿಲಡೆಲ್ಫಿಯಾ ನಗರ ಭ್ರಾತೃ ಸ್ನೇಹದ ನಗರವೆಂದು ಕರೆಯಲ್ಪಡುತ್ತದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆ ನಿರ್ಮಿಸಿದ ಮಸ್‌ಜಿದ್ ಈ ನಗರಕ್ಕೆ ಅನುಯೋಜ್ಯವಾಗಿದೆ. ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ತನ್ನ ಭಾಷಣದಲ್ಲಿ ಹೀಗೆ ಹೇಳಿದರು: "ನಮ್ಮ ನೆರೆಹೊರೆಯವರ ಅಶ್ರುಧಾರೆಯನ್ನು ಒರೆಸಲು, ಅವರಿಗೆ ಬೆಂಬಲ ನೀಡಲು ಮತ್ತು ಸಾಂತ್ವನ ನೀಡಲು ನಾವು ಯಾವಾಗಲೂ ಸದಾ ಸಿದ್ಧರಾಗಿರುವೆವು."*

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಪಂಚಮ ಖಲೀಫರು ಹೀಗೆ ಹೇಳಿದರು:

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲಿರಲಿ.

ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಈ ವಿಶಿಷ್ಟ ಸಂತೋಷದಾಯಕ ಸಮಾರಂಭದಲ್ಲಿ ಭಾಗವಹಿಸಲು ನಮ್ಮೊಂದಿಗೆ ಸೇರಿದ ನಿಮಗೆಲ್ಲರಿಗೂ ನಾನು ಮೊತ್ತಮೊದಲು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾವು ನಮ್ಮ ಹೊಸ ಮಸ್‌ಜಿದನ್ನು ಈ ನಗರದಲ್ಲಿ ಇಂದು ಉದ್ಘಾಟಿಸುತ್ತಿದ್ದೇವೆ.

ನಮ್ಮ ಜೀವಿತದ ಒಂದು ವಾಸ್ತವಿಕ ವಿಷಯವೇನೆಂದರೆ, ಮನುಷ್ಯರು ಸಾಮಾಜಿಕ ಸಂಪರ್ಕ ಸ್ಥಾಪಿಸದೆ ಮತ್ತು ಪರಸ್ಪರ ಒಬ್ಬರಿನ್ನೊಬ್ಬರೊಂದಿಗೆ ಸಂಬಂಧ ಹೊಂದದೆ ಬದುಕಲಾರರು. ಜನಾಂಗ, ಧರ್ಮ ಮತ್ತು ಸಾಮಾಜಿಕ ಹಿನ್ನೆಲೆ ವಿಭಿನ್ನವಾಗಿದ್ದರೂ ಮಾನವರೆಂಬ ನೆಲೆಯಲ್ಲಿ ನಾವು ಐಕ್ಯದಿಂದಿದ್ದೇವೆ. ಆದುದರಿಂದ ನಾವು ಪರಸ್ಪರ ಸಂಪರ್ಕ ಹೊಂದುವುದು ಮುಖ್ಯವಾಗಿದೆ. ನಮ್ಮನ್ನು ಪ್ರತ್ಯೇಕಿಸುವುದು ಮತ್ತು ಕೇವಲ ನಮ್ಮ ನಿರ್ದಿಷ್ಟ ಸಮುದಾಯದೊಂದಿಗೆ ಮಾತ್ರ ಬೆರೆತುಕೊಳ್ಳುವುದು ಉಚಿತವಲ್ಲ.

ಎಲ್ಲ ವಿಷಯಗಳಿಗೆ ಸಂಬಂಧಿಸಿ, ತಡೆಗಟ್ಟುಗಳನ್ನು ನಿವಾರಿಸಲು, ಪರಸ್ಪರ ತಿಳುವಳಿಕೆಗಳನ್ನು ವರ್ಧಿಸಲು ಪರಸ್ಪರ ಸಂವಾದವು ಅತ್ಯಂತ ನಿರ್ಣಾಯಕವಾಗಿದೆ. ಸಾಮಾಜಿಕ ಬೆಳವಣಿಗೆಗೆ ಶಾಂತಿ ಮತ್ತು ಸೌಹಾರ್ದದ ಪರಿಸರವನ್ನು ಪೋಷಿಸಲು, ವಿವಿಧ ಸಮುದಾಯಗಳ ಮಧ್ಯೆ ಆದರಭಾವದಿಂದ ಕೂಡಿದ ಚರ್ಚೆ ಮಾಡುವುದು ಬಹಳ ಆವಶ್ಯಕವಾದುದಾಗಿದೆ. ನಿಮ್ಮ ಬಿಡುವಿಲ್ಲದ ಸಮಯದಲ್ಲಿ ನೀವು ನಮ್ಮೊಂದಿಗೆ ಸೇರಲು ಬಂದುದಕ್ಕೋಸ್ಕರ ನಾನು ನಿಮ್ಮನ್ನು ಬಹಳ ಗೌರವ ಭಾವದಿಂದ ಕಾಣುತ್ತೇನೆ. ನಿಮ್ಮ ಪೈಕಿ ಬಹುತೇಕ ಜನರು ಮುಸ್ಲಿಮೇತರರಾಗಿದ್ದರೂ ನೀವು ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಸಂಪೂರ್ಣವಾಗಿ ಧಾರ್ಮಿಕವಾಗಿರುವ ಈ ಸಮಾರಂಭದಲ್ಲಿ ಎಂದರೆ, ಮಸ್‌ಜಿದ್ ಉದ್ಘಾಟನೆಯ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿರುವಿರಿ. ನಿಮ್ಮ ಸಹಿಷ್ಣುತೆ ಮತ್ತು ಗೌರವ ನೀಡುವಿಕೆಯನ್ನು ಪ್ರಶಂಸಿಸದೆ ನಾನು ಮುಂದಿನ ಮಾತುಗಳನ್ನು ಹೇಳಲಾರೆ.

ನೀವು ಈ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ನಮ್ಮ ಸಮುದಾಯದ ಸದಸ್ಯರೊಂದಿಗೆ ವೈಯಕ್ತಿಕ ಸಂಬಂಧವನ್ನು ಬಲಪಡಿಸಲು ನಿಮಗಿರುವ ಇಚ್ಛೆಯನ್ನು ಸೂಚಿಸುತ್ತದೆಯಲ್ಲದೆ ನಮ್ಮ ಧರ್ಮದ ಬಗ್ಗೆ ಹೆಚ್ಚಿನ ಮಾಹಿತಿ ಗಳಿಸುವ ಬಗ್ಗೆ ನಿಮ್ಮ ಆಸಕ್ತಿಯನ್ನೂ ಸೂಚಿಸುತ್ತದೆ. ಗಾಳಿ ಸುದ್ದಿಗಳನ್ನೂ ಹಳಸು ಸಮಾಚಾರಗಳನ್ನೂ ಕಣ್ಣುಮುಚ್ಚಿ ಅಂಗೀಕರಿಸಲು ತಾವು ಸಿದ್ಧರಾಗಿಲ್ಲ ಎಂದು ಸಹ ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಇಂದಿನ ಕಾಲಘಟ್ಟದಲ್ಲಿ ಅನೇಕ ವರದಿಗಳು ಅಯಥಾರ್ಥವಾಗಿರುವಾಗ ಇಸ್ಲಾಮ್ ಧರ್ಮದ ಬಗ್ಗೆ ನಿಮ್ಮ ಸತ್ಯಾನ್ವೇಷಣೆ ಪ್ರಶಂಸನೀಯವಾಗಿದೆ. ಮುಸ್ಲಿಮರ ಬಗ್ಗೆ ಮೀಡಿಯಾ ಹೇಳುವುದನ್ನು ಅಂಗೀಕರಿಸುವುದನ್ನು ಮತ್ತು ಇಸ್ಲಾಮ್ ವಿರೋಧಿ ಶಕ್ತಿಗಳು ಚಿತ್ರಿಸಲು ಪ್ರಯತ್ನಿಸುವುದನ್ನು ನಂಬುವುದಕ್ಕೆ ಬದಲಾಗಿ ಇಸ್ಲಾಮ್ ಎಂದರೇನು? ಅದು ಏನನ್ನು ಪ್ರತಿನಿಧೀಕರಿಸುತ್ತದೆ ಎಂದು ನೇರವಾಗಿ ತಿಳಿದುಕೊಳ್ಳಲು ನೀವು ಇಲ್ಲಿಗೆ ಆಗಮಿಸಿರುವಿರಿ. ಈ ಕಾರಣದಿಂದ ನಾನು ನಿಮ್ಮನ್ನು ಶ್ಲಾಘಿಸುತ್ತೇನೆ ಮತ್ತು ನನ್ನ ಪ್ರಾಮಾಣಿಕ ಕೃತಜ್ಞತೆಗಳನ್ನು ನಿಮಗೆ ಸೂಚಿಸುತ್ತೇನೆ.

ನಿಮಗೆ ತಿಳಿದಿರುವ ನಮ್ಮ ಧ್ಯೇಯವಾಕ್ಯ LOVE FOR ALL, HATRED FOR NONE ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ ಎಂಬುದು ಹೊಸದಾಗಿ ನಾವು ರಚಿಸಿದುದೇನೂ ಅಲ್ಲ. ಇಸ್ಲಾಮಿನ ಪವಿತ್ರ ಗ್ರಂಥವಾದ ಪವಿತ್ರ ಖುರ್‌ಆನಿನ ಉಪದೇಶಗಳು ಮತ್ತು ಇಸ್ಲಾಮಿನ ಪವಿತ್ರ ಪ್ರವಾದಿ ಮುಹಮ್ಮದರ(ಸ) ಉಪದೇಶಗಳನ್ನು ಆಧಾರವಾಗಿಟ್ಟು ಈ ಧ್ಯೇಯವಾಕ್ಯವನ್ನು ರಚಿಸಲಾಗಿದೆ. ಪರಸ್ಪರ ಒಬ್ಬರಿನ್ನೊಬ್ಬರಿಗೆ ಗೌರವ ನೀಡುವುದು ಮತ್ತು ಸಹಿಷ್ಣುತೆ ಮೂಲಭೂತ ಮಾನವೀಯ ಮೌಲ್ಯಗಳೆಂದು ಇಸ್ಲಾಮ್ ಆರಂಭದಿಂದಲೇ ಪ್ರತಿಪಾದಿಸಿದೆ. ಉದಾಹರಣೆಗೆ, ಪವಿತ್ರ ಖುರ್‌ಆನ್ ಅಧ್ಯಾಯ 6 ವಚನ 109ರಲ್ಲಿ ಹೀಗೆ ಉಪದೇಶಿಸಲಾಗಿದೆ: *ಅಲ್ಲಾಹನ ಹೊರತು ಜನರು ಕರೆದು ಪ್ರಾರ್ಥಿಸುವ ವಿಗ್ರಹಗಳನ್ನು ನಿಂದಿಸಬಾರದು. ಏಕೆಂದರೆ ಹಾಗೆ ಮಾಡಿದರೆ ಅವರು ಸರ್ವಶಕ್ತನಾದ ಅಲ್ಲಾಹನನ್ನು ನಿಂದಿಸಲು ಉತ್ತೇಜಿಸಲ್ಪಡುವರು.* ಬಿಗುವಿನ ಸ್ಥಿತಿ ತಲೆದೋರುವುದನ್ನು ತಡೆಯಲು ಮತ್ತು ಸಮಾಜವನ್ನು ದ್ವೇಷ ಮತ್ತು ಹಗೆತನದ ವಲಯದಿಂದ ರಕ್ಷಿಸಲು ಮುಸ್ಲಿಮರು ಯಾವಾಗಲೂ ಆತ್ಮನಿಯಂತ್ರಣ ಮತ್ತು ಸಹನೆಯನ್ನು ತೋರಿಸಬೇಕೆಂದು ಉಪದೇಶಿಸಲಾಗಿದೆ.

ಮುಸ್ಲಿಮರು ಅನ್ಯ ಧರ್ಮಗಳನ್ನು ಮತ್ತು ಅನ್ಯ ಧರ್ಮದ ಧಾರ್ಮಿಕ ವ್ಯಕ್ತಿಗಳನ್ನು ಗೌರವಿಸುವುದಿಲ್ಲ ಎಂದು ಪದೇ ಪದೇ ಆಪಾದಿಸಲಾಗುತ್ತಿದೆ. ಆದರೆ ಇದು ಸತ್ಯದಿಂದ ದೂರವಾದ

ಆಪಾದನೆಯಾಗಿದೆ. ವಾಸ್ತವಿಕವಾಗಿ ಮುಸ್ಲಿಮರು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಆಧಾರವಾಗಿಟ್ಟುಕೊಂಡು ನಂಬುವುದೇನೆಂದರೆ, ದೇವ ನಿಯೋಜಿತರಾದ ಪ್ರವಾದಿಗಳು ಎಲ್ಲ ಜನಾಂಗಗಳಿಗೆ ಅವರ ಮಾರ್ಗದರ್ಶನ ಮತ್ತು ಸುಧಾರಣೆಗೋಸ್ಕರ ಕಳುಹಿಸಲ್ಪಟ್ಟಿರುವರು. ನಾವು ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ದೃಢವಾಗಿ ನಂಬುತ್ತೇವೆ. ಸರ್ವಶಕ್ತನಾದ ದೇವನ ಕಡೆಗೆ ಮಾನವರನ್ನು ಒಯ್ಯಲು ಮತ್ತು ಅವರಿಗೆ ನೈತಿಕತೆಯನ್ನು ಕಲಿಸಲು ಹಾಗೂ ಮನಸ್ಸಾಕ್ಷಿಯ ಸ್ವಾತಂತ್ರ್ಯ, ನ್ಯಾಯಪಾಲನೆ, ಅನುಕಂಪ ಮೊದಲಾದ ಮಾನವೀಯ ಮೌಲ್ಯಗಳನ್ನು ಸ್ಥಾಪಿಸಲು ಪ್ರವಾದಿಗಳನ್ನು ನಿಯೋಗಿಸಲಾಯಿತೆಂದು ನಾವು ನಂಬುತ್ತೇವೆ. ಹೀಗಿರುವಾಗ ಅನ್ಯಧರ್ಮಗಳನ್ನು ಮತ್ತು ಅವುಗಳ ಅನುಯಾಯಿಗಳನ್ನು ಅವಮರ್ಯಾದೆಯಿಂದ ಕಾಣಲು ಹೇಗೆ ತಾನೆ ನಮಗೆ ಸಾಧ್ಯ ?

ಅಹ್ಮದೀ ಮುಸ್ಲಿಮರಾದ ನಾವು ಯಾರನ್ನೂ ದ್ವೇಷಿಸುವುದಿಲ್ಲ ಎಂದು ಹೇಳುವುದು ಆ ಕಾರಣದಿಂದ ಪ್ರಾಮಾಣಿಕವಾಗಿಯೇ ಆಗಿದೆ. ನಾವು ಎಲ್ಲ ಜನರ ಬಗ್ಗೆ ಪ್ರಾಮಾಣಿಕವಾದ ಪ್ರೀತಿಯನ್ನು ಹೊಂದಿದ್ದೇವೆ. ನಾವು ಅನ್ಯರಿಗೆ ಸ್ನೇಹದ ಹಸ್ತವನ್ನು ಚಾಚಲು ಸದಾ ಸನ್ನದ್ಧರಾಗಿರುತ್ತೇವೆ. ಒಂದು ಚಿಕ್ಕ ಉದಾಹರಣೆ ಹೀಗಿದೆ: ಕಳೆದ ವರ್ಷ ಫಿಲಡೆಲ್ಫಿಯಾ ನಗರದ ಯಹೂದಿಯರ ಸಮಾಧಿ ಸ್ಥಳ ಆಕ್ರಮಿಸಲ್ಪಟ್ಟು ಗೋರಿಗಳ ಗುರುತಿನ ಕಲ್ಲುಗಳು ಅಪವಿತ್ರಗೊಳಿಸಲ್ಪಟ್ಟಾಗ ಸ್ಥಳೀಯ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸದಸ್ಯರು ಯಹೂದಿ ಸಮುದಾಯಕ್ಕೆ ಸಹಾಯ ಮಾಡಲು ಕೂಡಲೆ ಹೋದರು ಮತ್ತು ಈ ನಿಂದನೀಯ ಅಪರಾಧ ಕೃತ್ಯ ನಡೆದ ನಂತರ ಅವರನ್ನು ಬೆಂಬಲಿಸಲು ನಿಂತರು. ಇಂತಹ ಕರ್ಮಗಳಿಗೋಸ್ಕರ ನಾವು ಯಾವುದೇ ಪಾರಿತೋಷಿಕವನ್ನಾಗಲಿ, ಉಪಕಾರ ಸ್ಮರಣೆಯನ್ನಾಗಲಿ ಆಶಿಸುವುದಿಲ್ಲ. ಏಕೆಂದರೆ ನಾವು ನಮ್ಮ ಧರ್ಮ ಕಲಿಸಿಕೊಟ್ಟದ್ದನ್ನು, ಎಂದರೆ ಕಷ್ಟದ ಕಾಲದಲ್ಲಿ ಎಲ್ಲ ಧರ್ಮಗಳ ಜನರ ಭುಜಗಳಿಗೆ ಭುಜಗೊಟ್ಟು ಬೆಂಬಲ ನೀಡಬೇಕೆಂಬ ಉಪದೇಶವನ್ನು ಅನುಸರಿಸುತ್ತೇವೆ. ಎಲ್ಲ ಜನರು ಯಾವುದೇ ತಾರತಮ್ಯಗಳಿಗೊಳಗಾಗದೆ ಯಾವುದೇ ಪೂರ್ವಾಗ್ರಹಗಳಿಗೆ ಗುರಿಯಾಗದೆ ಜೀವಿಸುವ ಹಕ್ಕು ಹೊಂದಿರುವರೆಂದು ನಾವು ಪ್ರತಿಪಾದಿಸುತ್ತೇವೆ.

ಇಸ್ಲಾಮಿನ ಚರಿತ್ರೆಯನ್ನು ನಿಷ್ಪಕ್ಷಪಾತವಾಗಿಯೂ ಪ್ರಾಮಾಣಿಕವಾಗಿಯೂ ವೀಕ್ಷಿಸಲು ಇಚ್ಛಿಸುವವರು ವಿಶ್ವಾಸದ ಸಾರ್ವತ್ರಿಕ ಸ್ವಾತಂತ್ರ್ಯವು ಇಸ್ಲಾಮಿನ ಪ್ರಮುಖ ಉಪದೇಶವಾಗಿದೆ ಎಂದು ಕಾಣುವರು. ಮಕ್ಕದಲ್ಲಿ ಅನೇಕ ವರ್ಷಗಳ ಕಾಲ ಹಿಂಸಾಚಾರಗಳಿಗೆ ಈಡಾದ ನಂತರ ಇಸ್ಲಾಮಿನ ಪೈಗಂಬರರು(ಸ) ತನ್ನ ಅನೇಕ ಅನುಯಾಯಿಗಳೊಂದಿಗೆ ಮದೀನಕ್ಕೆ ವಲಸೆ ಹೋದ ಬಳಿಕ ಮದೀನದಲ್ಲಿ ಅವರ ನೇತೃತ್ವದಲ್ಲಿ ಸ್ಥಾಪಿತವಾದ ಸರಕಾರ ಬಹುಪ್ರತಿನಿಧಿತ್ವ ಮತ್ತು ವಿಶಾಲ ಮನೋಭಾವದ ಅತ್ಯುತ್ಕೃಷ್ಟ ಪ್ರತೀಕವಾಗಿತ್ತು. ಇತರ ಧರ್ಮಗಳ ನಾಯಕರೊಂದಿಗೆ ಮತ್ತು ಸಮುದಾಯಗಳೊಂದಿಗೆ ಇಸ್ಲಾಮಿನ ಪೈಗಂಬರರು(ಸ) ಒಂದು ಒಡಂಬಡಿಕೆಯನ್ನು ಮಾಡಿದರು. ಅದು ಆ ಬಹುವಿಧ ನಗರದ ಆಡಳಿತೆಗೆ ಅಸ್ತಿಭಾರವಾಗಿತ್ತು. ಸಮಾಜದ ಎಲ್ಲ ಸದ್ಯಸರು ಶಾಂತಿಯಿಂದಲೂ, ದೌರ್ಜನ್ಯಗಳಿಂದ ಮುಕ್ತರಾಗಿ ಜೀವಿಸುವರೆಂದೂ ಪ್ರತಿಯೊಬ್ಬರು ತಮ್ಮ ಧಾರ್ಮಿಕ ವಿಶ್ವಾಸದ ಪ್ರಕಾರ ಜೀವಿಸುವರೆಂದೂ ಖಾತರಿ ನೀಡಲಾಗಿತ್ತು. ಇಷ್ಟು ಮಾತ್ರವಲ್ಲ, ಆ ಕಾಲದ ಆಚಾರ ಪ್ರಕಾರ ಪ್ರತಿಯೊಂದು ಸಮುದಾಯ ತನ್ನ ಧಾರ್ಮಿಕ ನಿಯಮಗಳಿಗೆ ಮತ್ತು ಗೋತ್ರ ನಿಯಮಗಳಿಗೆ ಬದ್ಧವಾಗಿರಬೇಕೆಂದು ನಿಬಂಧನೆ ಮಾಡಲಾಗಿತ್ತು. ಆದುದರಿಂದ ಮುಸ್ಲಿಮರು ಇಸ್ಲಾಮೀ ಶರೀಅತ್ ನಿಯಮಗಳನ್ನು ಅನುಸರಿಸಿದರು. ಯಹೂದಿಯರು ತಮ್ಮ ಧಾರ್ಮಿಕ ಗ್ರಂಥವಾದ ತೌರಾತನ್ನು(Torah) ಅನುಸರಿಸಿದರು. ಇತರ ಸಮುದಾಯಗಳು ತಮ್ಮ ಸಂಪ್ರದಾಯಗಳಿಗನುಸಾರವಾದ ವಿಶ್ವಾಸಗಳಿಗೂ ನಿಯಮಗಳಿಗೂ ಬದ್ಧರಾಗಿದ್ದರು.

ಅದೇ ಸಮಯದಲ್ಲಿ ಜನರ ವಿಶ್ವಾಸಗಳು ಹೇಗಿದ್ದರೂ ಅವರೆಲ್ಲರೂ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಲು ಮತ್ತು ಒಬ್ಬರಿನ್ನೊಬ್ಬರನ್ನು ಗೌರವದಿಂದ ಕಂಡು ವರ್ತಿಸಲು ಹೊಣೆಗಾರಿಕೆ ಹೊಂದಿದವರಾಗಿದ್ದರು. ಈ ಒಡಂಬಡಿಕೆಯಿಂದ ಶಾಂತಿಯು ಪೋಷಿಸಲ್ಪಟ್ಟಿತು. ಸಹಿಷ್ಣುತೆಯಿಂದ ಭರಿತವಾದ ಸಮಾಜವು ಸ್ಥಾಪಿತವಾಯಿತು. ಈ ರೀತಿ 1400 ವರ್ಷಗಳ ಹಿಂದೆ ಬಹು ಸಾಂಸ್ಕೃತಿಕ ಕರಗುವ ಪಾತ್ರೆಯಾಗಿದ್ದ ಮದೀನದ ಸಮಾಜವನ್ನು ಯಶಸ್ವಿಯಾಗಿ ನಿಭಾಯಿಸಿ ಆಡಳಿತೆ ನಡೆಸಲಾಯಿತು. ನಾನು ಸೂಚಿಸುವುದು ಇಂದಿನ ಲೋಕದಲ್ಲಿ ಅಸಂಖ್ಯಾತ ವಿಭಿನ್ನ ನಿಯಮಗಳು ಒಂದೇ ಸಮಾಜದಲ್ಲಿರುವ ವಿವಿಧ ಸಮುದಾಯಗಳಿಗಿರಬೇಕು ಎಂದು ಅಲ್ಲ. ನಾನು ಹೇಳುವುದೇನೆಂದರೆ, ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ಆದ್ಯತೆ ನೀಡಬೇಕೆಂದಾಗಿದೆ. ಸಾರ್ವತ್ರಿಕ ಮಾನವೀಯ ಹಕ್ಕುಗಳನ್ನು ಬೆಂಬಲಿಸಿ ನೈತಿಕತೆ ಮತ್ತು ನ್ಯಾಯವನ್ನು ಸಮಾಜದ ಎಲ್ಲ ಮಟ್ಟಗಳಲ್ಲಿಯೂ ಪ್ರೋತ್ಸಾಹಿಸಿ ಹೀಗೆ ಮಾಡಬಹುದು.

ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿನ ಪೈಗಂಬರರು(ಸ) ಧರ್ಮಕ್ಕೆ ಸಂಬಂಧಿಸಿ ಯಾವ ಬಲಾತ್ಕಾರವೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿರುವರು. ಪ್ರತಿಯೊಬ್ಬ ವ್ಯಕ್ತಿಗೆ ತಾನು ಇಚ್ಛಿಸುವ ಮಾರ್ಗದಲ್ಲಿ ಸಾಗಲು ಸಂಪೂರ್ಣ ಸ್ವಾತಂತ್ರ್ಯವಿದೆ. ವಿಶ್ವಾಸವೆಂಬುದು ವ್ಯಕ್ತಿಯ ಹೃದಯ ಮತ್ತು ಮನಸ್ಸಿಗೆ ಯಾವಾಗಲೂ ಸಂಬಂಧಿಸಿದೆ ಮತ್ತು ಸಂಬಂಧಿಸಿರಬೇಕು.

ಅವರೊಂದಿಗೆ ಇಸ್ಲಾಮ್ ಹೀಗೆ ಉಪದೇಶಿಸುತ್ತಿದೆ: ಯಾವುದೇ ಧರ್ಮವನ್ನು ಅವಲಂಬಿಸುವವನಾದರೂ ಪ್ರತಿಯೊಬ್ಬ ನಾಗರಿಕನು ಶಾಂತಿಯನ್ನು ಕಾಪಾಡಲು ಬದ್ಧನಾಗಿರಬೇಕು ಮತ್ತು ಸಮಾಜದ ಹಿತಕ್ಕೆ ವಿರುದ್ಧವಾಗಿ ಏನನ್ನೂ ಅವನಾಗಲಿ, ಅವಳಾಗಲಿ ಮಾಡಬಾರದು. ಇಸ್ಲಾಮ್ ಹೇಳುತ್ತಿರುವುದೇನೆಂದರೆ, ಎಲ್ಲ ಜನರು ನಿಯಮಗಳನ್ನು ಪಾಲಿಸುವ ದೇಶಭಕ್ತರಾದ ಪ್ರಜೆಗಳಾಗಿ ದೇಶದ ಅಭಿವೃದ್ಧಿಗೋಸ್ಕರ ಪ್ರಯತ್ನಿಸುವವರಾಗಬೇಕು. ಆದುದರಿಂದ ನಮ್ಮ ಹೊಸ ಮಸ್‌ಜಿದ್ ಬಗ್ಗೆ ಆತಂಕವಿದ್ದರೆ ಮತ್ತು ಅದನ್ನು ಸಮಾಜದ ಇತರರ ವಿರುದ್ಧ ದ್ವೇಷ ಸಾಧಿಸಲು ಗೂಢಾಲೋಚನೆ ಮಾಡುವ ಕೇಂದ್ರವಾಗಿ ಮುಸ್ಲಿಮರು ಬಳಸುವರೆಂಬ ಭಯವಿದ್ದರೆ ನೀವು ಆ ರೀತಿ ಭಯಪಡಬೇಕಾದ ಆವಶ್ಯಕತೆ ಇಲ್ಲ ಎಂದು ನಾನು ನಿಮಗೆ ಖಾತರಿ ನೀಡುತ್ತೇನೆ. ಈ ಕಟ್ಟಡದಿಂದ ಪ್ರೀತಿ, ವಾತ್ಸಲ್ಯ ಮತ್ತು ಭ್ರಾತೃತ್ವದ ಸಂದೇಶ ಮಾತ್ರ ಬೆಳಗುವುದೆಂದು ನೀವು ದೃಢವಾಗಿ ನಂಬುವವರಾಗಿರಿ.

ಈ ಸಂದರ್ಭದಲ್ಲಿ ಮಸ್‌ಜಿದ್‌ಗಳ ನಿರ್ಮಾಣದ

ಉದ್ದೇಶಲಕ್ಷ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಲು ನಾನು ಇಚ್ಛಿಸುತ್ತೇನೆ. ಪ್ರಥಮ ಉದ್ದೇಶ, ಮುಸ್ಲಿಮರು ಪರಸ್ಪರ ಪ್ರೀತಿ ಮತ್ತು ಐಕ್ಯತೆಯಿಂದ ಒಗ್ಗೂಡಿ ಏಕ ದೇವನನ್ನು, ಅವನು ನಮಗೆ ಕಲಿಸಿಕೊಟ್ಟ ರೀತಿಯಲ್ಲಿ ಆರಾಧನೆ ಮಾಡುವುದಾಗಿದೆ. ಅದೇ ಸಮಯದಲ್ಲಿ ದ್ವಿತೀಯ ಉದ್ದೇಶ ಮಾನವರ ಸೇವೆಗಾಗಿರುವ ಒಂದು ಕೇಂದ್ರವನ್ನಾಗಿ ಮಸ್‌ಜಿದನ್ನು ಮಾಡುವುದಾಗಿದೆ. ಪ್ರತಿಯೊಬ್ಬ ಆರಾಧಕನಿಗೆ ಒಂದು ಮಹತ್ವಪೂರ್ಣ ಹೊಣೆಗಾರಿಕೆಯಾಗಿರುವುದು ಸಮಾಜದ ಎಲ್ಲ ಸದಸ್ಯರ ಹಕ್ಕುಗಳನ್ನು ಈಡೇರಿಸಿಕೊಡಬೇಕೆಂಬುದಾಗಿದೆ. ತತ್ಪರಿಣಾಮವಾಗಿ ನೈಜ ಮಸ್‌ಜಿದ್ ಕಾರುಣ್ಯ, ಔದಾರ್ಯ ಮತ್ತು ಐಕ್ಯದ ಪ್ರತೀಕವಾಗಿರುತ್ತದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಚರಿತ್ರೆ ಹೀಗೆ ಸಾಕ್ಷ್ಯ ನೀಡುತ್ತದೆ: ನಾವು ಲೋಕದಲ್ಲಿ ಎಲ್ಲೆಲ್ಲ ಮಸ್‌ಜಿದ್ ಸ್ಥಾಪಿಸುತ್ತೇವೋ ಅಲ್ಲೆಲ್ಲ ಬಂದು ಆರಾಧಿಸುವ ನಮ್ಮ ಸದಸ್ಯರು ತಮ್ಮ ತಮ್ಮ ಸಹಜೀವಿಗಳ ಕಡೆಗಿರುವ ತಮ್ಮ ಪ್ರೀತಿ, ಅನುಕಂಪ ಮತ್ತು ನಿಷ್ಠೆಯಲ್ಲಿ ವರ್ಧನೆ ಹೊಂದುತ್ತಾರೆ. ಅಹ್ಮದೀ ಮುಸ್ಲಿಮರನ್ನು ನಮ್ಮ ಮಸ್‌ಜಿದ್‌ಗಳು ಭಯೋತ್ಪಾದನೆ ಮತ್ತು ಉಗ್ರವಾದದ ಕಡೆಗೆ ಉದ್ರೇಕಿಸುವುದಕ್ಕೆ ಬದಲಾಗಿ ಮಾನವರ ಸೇವೆ ಮಾಡಲು ಮತ್ತು ಸಹಜೀವಿಗಳಿಗೆ ತಮ್ಮ ಹೃದಯಗಳನ್ನು ತೆರೆಯಲು ಉತ್ತೇಜಿಸುತ್ತವೆ. ಶಾಂತಿಯನ್ನು ಹರಡಲು, ಎಲ್ಲ ವರ್ಗದ ಜನರೊಂದಿಗೆ ಭ್ರಾತೃತ್ವ ಮತ್ತು ಪರಸ್ಪರ ಸ್ನೇಹದ ಸಂಬಂಧ ಬೆಳೆಸಲು ಮತ್ತು ಎಲ್ಲ ವಿಧ ದ್ವೇಷ, ಮತಭ್ರಾಂತಿ ಮತ್ತು ಒಡಕುಗಳನ್ನು ನಿಶ್ಶೇಷಗೊಳಿಸಲು ನಮ್ಮ ಮಸ್‌ಜಿದ್‌ಗಳು ಸಹಾಯಕವಾಗಿವೆ.

ಈ ನಗರ "ಭ್ರಾತೃ ಪ್ರೇಮದ ನಗರ" ಎಂದು ಪ್ರಸಿದ್ಧವಾಗಿದೆ. ನಮ್ಮ ಹೊಸ ಮಸ್‌ಜಿದ್ ಇದರ ಚಿಹ್ನೆಯಾಗಿದೆ. ಪ್ರೀತಿ, ಭ್ರಾತೃತ್ವ ಮತ್ತು ಸೌಹಾರ್ದವನ್ನು ಇಲ್ಲಿ ಮತ್ತು ಹೊರಗೆ ಹರಡಲು ನಮ್ಮ ಪ್ರಯತ್ನಗಳನ್ನು ಬಲಪಡಿಸುವೆವು ಎಂಬ ನಮ್ಮ ಪ್ರತಿಜ್ಞೆಯ ದ್ಯೋತಕವಾಗಿದೆ ಈ ಮಸ್‌ಜಿದ್. ಹೀಗೆ ವಾದಿಸುವುದು ಸುಲಭವಾದರೂ ನಮ್ಮ ಜಮಾಅತಿನ ಚರಿತ್ರೆ ನಮ್ಮ ವಾದ ಪೊಳ್ಳು ಅಲ್ಲ ಎಂದು ಸಾಬೀತುಗೊಳಿಸುತ್ತಿದೆ. ನಾವು ವಾಸ್ತವಿಕವಾದುದನ್ನೇ ಹೇಳುತ್ತೇವೆ. ನಾವು ನುಡಿದಂತೆ ನಡೆಯಲು ಯಾವಾಗಲೂ ಪರಿಶ್ರಮ ಪಡುತ್ತೇವೆ. "ಬೈತುಲ್ ಆಫಿಯತ್" ಎಂದು ಹೆಸರಿಸಿದ ಈ ಮಸ್‌ಜಿದ್ ಬಗ್ಗೆ ಇಲ್ಲಿನ ಜನರು ಮೆಚ್ಚಿಗೆ ಸೂಚಿಸುವರೆಂದು ನಾನು ಸಂಪೂರ್ಣವಾದ ದೃಢವಿಶ್ವಾಸ ಹೊಂದಿದ್ದೇನೆ. ಬೈತುಲ್ ಆಫಿಯತ್ ಎಂದರೆ ಭದ್ರತೆಯ ಭವನ ಎಂದು ಅರ್ಥ. ಇದು ಸಂಪೂರ್ಣ ಸಮಾಜಕ್ಕೆ ಶಾಂತಿಯ ಮೂಲಸ್ಥಾನವಾಗುವುದು.

ನಾನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ: ಶಾಂತಿ ಸ್ಥಾಪನೆ ಬಗ್ಗೆ ನಮ್ಮ ಬದ್ಧತೆ ಮತ್ತು ಮಾನವರ ಸೇವೆ ಮಾಡುವ ನಮ್ಮ ಪ್ರತಿಜ್ಞೆಯ ಕಾರಣವು ಸಂಪೂರ್ಣವಾಗಿ ವಿಶ್ವಾಸ ಮತ್ತು ನಮ್ಮ ಧರ್ಮದ ಉಪದೇಶಗಳಾಗಿವೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರನ್ನು ನಾವು ವಾಗ್ದತ್ತ ಮಸೀಹರೆಂದೂ ಇಮಾಮ್ ಮಹ್‌ದೀ ಎಂದೂ ನಂಬುತ್ತೇವೆ. ತಾನು ಮುಹಮ್ಮದೀ ಮಸೀಹ್ ಎಂದು ಅವರು ಬಹಿರಂಗವಾಗಿ ಘೋಷಿಸಿ ತಾನು ಮೂಸಾ ಪ್ರವಾದಿಯ ನಂತರ ಆಗಮಿಸಿದ ಮಸೀಹರ ಶಾಂತಿಮಯ ಹೆಜ್ಜೆ ಗುರುತುಗಳನ್ನು ಅನುಸರಿಸುವುದಾಗಿ ಹೇಳಿದರು. ಸರ್ವಶಕ್ತನಾದ ದೇವನು ತನ್ನನ್ನು ಎರಡು ಪ್ರಮುಖ ಉದ್ದೇಶಗಳಿಗೋಸ್ಕರ ನಿಯೋಜಿಸಿದುದಾಗಿ ಅವರು ವಾದಿಸಿದರು.

ಮಾನವರನ್ನು ಅವರ ಸೃಷ್ಟಿಕರ್ತನ ಕಡೆಗೆ ಒಯ್ಯುವುದು ಮತ್ತು ದೇವನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವಂತೆ ಮಾಡುವುದು ಅವರ ಪ್ರಥಮ ಉದ್ದೇಶವಾಗಿದೆ. ಮಾನವ ಮೌಲ್ಯಗಳನ್ನು ಗೌರವಿಸಿ ಮಾನವರು ಪರಸ್ಪರ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವಂತೆ ಮಾಡುವುದು ಅವರ ಆಗಮನದ ದ್ವಿತೀಯ ಉದ್ದೇಶವಾಗಿದೆ. ಆದುದರಿಂದ ವಾಗ್ದತ್ತ ಮಹ್‌ದೀ ಮಸೀಹರನ್ನು ನಂಬುವ ಅಹ್ಮದೀ ಮುಸ್ಲಿಮರಿಗೆ ಇದು ಕಡ್ಡಾಯವಾಗಿದೆ: ಅವರು ಸರ್ವಶಕ್ತನಾದ ಅಲ್ಲಾಹನ ಸಾಮೀಪ್ಯವನ್ನು ಗಳಿಸಲು ಪ್ರಯತ್ನಿಸಬೇಕು ಮತ್ತು ಮಾನವರ ಸೇವೆ ಮಾಡುವ ಸಂದರ್ಭಗಳನ್ನು ಹುಡುಕಬೇಕು. ಪವಿತ್ರ ಖುರ್‌ಆನ್ ಮತ್ತು ಪವಿತ್ರ ಪೈಗಂಬರರು(ಸ) ಇವುಗಳನ್ನೇ ಪದೇ ಪದೇ ಉಪದೇಶಿಸಿದ್ದಾರೆ. ಅಧ್ಯಾಯ 4 ವಚನ 37ರಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ನೀವು ಅಲ್ಲಾಹನನ್ನು ಆರಾಧಿಸಿರಿ; ಬೇರೆನನ್ನೂ ಅವನ ಸಹಭಾಗಿಗಳನ್ನಾಗಿ ಮಾಡಬೇಡಿರಿ. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ – ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ. ಅಹಂಭಾವಿಗಳನ್ನೂ ಜಂಭಕೊಚ್ಚುವವರನ್ನೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ."

ಪವಿತ್ರ ಖುರ್‌ಆನಿನ ಈ ಒಂದು ವಚನ ನೈತಿಕತೆ ಮತ್ತು ಮಾನವ ಹಕ್ಕುಗಳ ಶೋಭಾಯಮಾನವಾದ ಪ್ರಣಾಳಿಕೆಯಾಗಿದೆ. ಅದು ಶಾಂತಿ ಮತ್ತು ಭ್ರಾತೃ ಪ್ರೇಮಕ್ಕೆ ಸಾಗುವ ಸುವರ್ಣ ಪಥವಾಗಿದೆ. ಈ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನು ತನ್ನ ಆರಾಧನೆಯ ಬಗ್ಗೆ ಹೇಳಿದ ನಂತರ ಮಾತಾಪಿತರೊಂದಿಗೂ ಸಂಬಂಧಿಕರೊಂದಿಗೂ ಪ್ರೀತಿ ವಾತ್ಸಲ್ಯಗಳೊಂದಿಗೆ ವರ್ತಿಸಲು ಮುಸ್ಲಿಮರಿಗೆ ಆಜ್ಞಾಪಿಸಿದ್ದಾನೆ. ಸಮಾಜದ ದುರ್ಬಲರಾದ ಜನರಿಗೆ ಮತ್ತು ಅನಾಥರಿಗೆ ಸಹಾಯ ನೀಡಲು ಅಲ್ಲಾಹನು ಆಜ್ಞಾಪಿಸಿರುತ್ತಾನೆ. ಅನಂತರ ನೆರೆಹೊರೆಯವರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ವಿಶಿಷ್ಟವಾಗಿ ಆಜ್ಞಾಪಿಸಲಾಗಿದೆ. ತಮ್ಮ ನೆರೆಹೊರೆಯವರನ್ನು ಪ್ರೀತಿಸಲು, ಸಂರಕ್ಷಿಸಲು ಮತ್ತು ಆವಶ್ಯಕವಾದ ಸಂದರ್ಭದಲ್ಲಿ ಸಹಾಯ ಮಾಡಲು ಸದಾ ಸನ್ನದ್ಧರಾಗಬೇಕೆಂದು ಮುಸ್ಲಿಮರಿಗೆ ಕಲಿಸಲಾಗಿದೆ.

ಇನ್ನೊಂದು ವಿಷಯವನ್ನು ನಾನು ವಿಶದೀಕರಿಸಲು ಇಚ್ಛಿಸುತ್ತೇನೆ. ಇಸ್ಲಾಮ್ ಧರ್ಮದ ಪ್ರಕಾರ "ನೆರೆಹೊರೆಯವರು" ಎಂಬುದರ ಅರ್ಥ ನಿರೂಪಣೆ ಬಹಳ ವಿಶಾಲವಾಗಿದೆ. ಸಮೀಪವಾಗಿ ವಾಸಿಸುವವರು ಮಾತ್ರವಲ್ಲ ದೂರವಾಗಿ ವಾಸಿಸುವವರೂ ಪ್ರಯಾಣದ ಸಂಗಡಿಗರೂ ಸಹೋದ್ಯೋಗಿಗಳೂ ಅಧೀನವಿರುವವರೂ ಮತ್ತು ಬೇರೆ ಅನೇಕರು ನೆರೆಹೊರೆಯವರು ಎಂಬ ಶಬ್ದದಲ್ಲಿ ಸೇರಿದ್ದಾರೆ. ವಾಸ್ತವಿಕವಾಗಿ ಪವಿತ್ರ ಖುರ್‌ಆನ್ ಹೀಗೆ ಘೋಷಿಸಿದೆ: ಒಬ್ಬ ಮುಸ್ಲಿಮ್ ವಾಸಿಸುವ ನಗರದ ಎಲ್ಲ ಜನರು ಅವನ ನೆರೆಹೊರೆಯವರೇ ಆಗಿದ್ದಾರೆ. ಇಸ್ಲಾಮ್ ಧರ್ಮದ ಪವಿತ್ರ ಪೈಗಂಬರರು(ಸ) ನೆರೆಹೊರೆಯವರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಪದೇ ಪದೇ ಉಪದೇಶಿಸಿದ್ದಾರೆ. ಅವರು ಹೀಗೆ ಹೇಳಿದರು: ಸರ್ವಶಕ್ತನಾದ ಅಲ್ಲಾಹನು ನೆರೆಹೊರೆಯವರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಎಷ್ಟು ಒತ್ತಿ ಹೇಳುತ್ತಾ ಇದ್ದನೆಂದರೆ ನಾನು ಯೋಚಿಸಿದೆ, ಪ್ರಾಯಶಃ ಅವರನ್ನು ವಾರಸುದಾರರೊಂದಿಗೆ ಸೇರಿಸಬಹುದು ಎಂದು.

ನಾವು ಫಿಲಡೆಲ್ಫಿಯಾ ನಗರದಲ್ಲಿ ಒಂದು ಮಸ್‌ಜಿದನ್ನು ನಿರ್ಮಿಸಿದ್ದೇವೆ ಮತ್ತು ಇಲ್ಲಿ ಅಹ್ಮದೀ ಮುಸ್ಲಿಮರ ಒಂದು ಸಮುದಾಯವಿದೆ. ನಮ್ಮ ಉದ್ದೇಶ ಈ ನಗರದಲ್ಲಿ ಶಾಂತಿ ಮತ್ತು ಸಮೃದ್ಧಿಯನ್ನು ವರ್ಧಿಸುವುದಾಗಿದೆ ಮತ್ತು ಇಲ್ಲಿನ ಜನರಿಗೆ ಸೇವೆ ಮಾಡುವುದಾಗಿದೆ.

ಈಗ ಈ ಮಸ್‌ಜಿದ್ ತೆರೆಯಲ್ಪಟ್ಟಿದೆ. ಇಲ್ಲಿನ ಅಹ್ಮದೀ ಮುಸ್ಲಿಮರು ಈ ನಗರದಲ್ಲಿ ವಾಸಿಸುವ ಎಲ್ಲರನ್ನೂ ತಮ್ಮ ನೆರೆಹೊರೆಯವರಾಗಿ ಗಣಿಸುವರು ಮತ್ತು ಅವರಿಗೆ ಈಡೇರಿಸಿಕೊಡಬೇಕಾದ ಅನೇಕ ಹಕ್ಕುಗಳಿವೆ ಎಂದು ಗುರುತಿಸಿ ಅವುಗಳನ್ನು ಈಡೇರಿಸಲು ತಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸುವರು. ನಿಮಗೆ ಯಾವಾಗಲಾದರೂ ಸಹಾಯದ ಆವಶ್ಯಕತೆ ಇದ್ದರೆ ನಾವು ಸಹಾಯ ಮಾಡಲು ಸಿದ್ಧರಾಗುವೆವು ಮತ್ತು ನಮಗೆ ಸಾಧ್ಯವಿರುವುದನ್ನೆಲ್ಲ ಮಾಡುವೆವು ಎಂದು ವಾಗ್ದಾನ ಮಾಡುತ್ತೇವೆ.

ದುಃಖ ಮತ್ತು ಹತಾಶೆಯ ಕಾಲದಲ್ಲಿ ನಾವು ನಮ್ಮ ನೆರೆಹೊರೆಯವರ ಅಶ್ರುವನ್ನು ಒರೆಸಲು, ಅವರಿಗೆ ಸಹಾಯ ಮಾಡಲು ಮತ್ತು ಅವರಿಗೆ ಸಾಂತ್ವನ ನೀಡಲು ಸದಾ ಸಿದ್ಧರಾಗಿರುವೆವು.

ನನಗೆ ದೃಢವಿಶ್ವಾವಿದೆ – ನೀವು ಸ್ವತಃ ಕಾಣುವಿರಿ. ಈ ಮಸ್‌ಜಿದ್ ಈ ನಗರಕ್ಕೆ ಒಂದು ಹೊಸ ಆಕರ್ಷಣೀಯ ಕೇಂದ್ರ ಮತ್ತು ಒಂದು ಗುರುತಿಸಲ್ಪಡುವ ಸ್ಥಾನವಾಗುವುದರ ಜೊತೆಗೆ ಅದು ಪ್ರೀತಿ ಮತ್ತು ದಯೆಯನ್ನು ನಗರದಲ್ಲಿ ಮತ್ತು ಹೊರಗೆ ಹರಡುವ ಮೂಲಕ ಆಧ್ಯಾತ್ಮಿಕವಾಗಿ ಸಮಾಜವನ್ನು ಶೃಂಗರಿಸುವುದು. ಅದು ಶಾಂತಿಯ ಮಾರ್ಗದರ್ಶಕ ಜ್ಯೋತಿಯಾಗಿ ಎಲ್ಲ ಶಾಂತಿ ಪ್ರಿಯರಾದ ಜನರಿಗೆ, ಅವರು ಯಾವ ಜಾತಿ, ಮತ, ವರ್ಣಗಳಿಗೆ ಸೇರಿದವರಾಗಿದ್ದರೂ ಶುಭ ಪ್ರತೀಕ್ಷೆಯ ಕೇಂದ್ರವಾಗುವುದು.

ನಾನು ಶುಭ ಪ್ರತೀಕ್ಷೆ ಹೊಂದಿ ಪ್ರಾರ್ಥಿಸುತ್ತೇನೆ – ಈ ನಗರವಾಸಿಗಳಾದ ಎಲ್ಲ ಜನರು, ಅವರು ಹೇಗಿದ್ದರೂ ಅವರು ಯಾವ ವಿಶ್ವಾಸ ಹೊಂದಿದ್ದರೂ ಒಟ್ಟಿಗೆ ಸೇರಿಕೊಂಡು ಸಾರ್ವಜನಿಕ ಹಿತಕ್ಕೋಸ್ಕರ ಪರಿಶ್ರಮಿಸುವರೆಂದು, ನೈಜ ಮತ್ತು ಶಾಶ್ವತ ಶಾಂತಿಯ ಪರಿಸರವನ್ನು ಸ್ಥಾಪಿಸಲು ಕಾರ್ಯೋನ್ಮುಖರಾಗುವರೆಂದು.

ಫಿಲಡೆಲ್ಫಿಯಾ ಧಾರ್ಮಿಕ ಸ್ವಾತಂತ್ರ್ಯವನ್ನೂ ಆರಾಧನೆಯ ಸ್ವಾತಂತ್ರ್ಯವನ್ನೂ ಅನುಮತಿಸಿದ ಪ್ರಥಮ ವಸಾಹತುಶಾಹಿ ನಗರವೆಂದು ಹೇಳಲಾಗುತ್ತದೆ. ಇದಲ್ಲದೆ ಸ್ವಾತಂತ್ರ್ಯ ಘೋಷಣೆಗೆ ಸಹಿ ಹಾಕಲಾದ ಚಾರಿತ್ರಿಕ ನಗರ ಸಹ ಫಿಲಡೆಲ್ಫಿಯಾ ಆಗಿದೆ. ಆದುದರಿಂದ ಈ ನಗರ ಅಮೂಲ್ಯವಾದ ಅಭಿಮಾನಕರವಾದ ಚರಿತ್ರೆಯನ್ನು ಹೊಂದಿದೆ. ಈ ನಗರವಾಸಿಗಳು ತಮ್ಮ ಗತಕಾಲದ ವೈಶಿಷ್ಟ್ಯಪೂರ್ಣ ಅಸ್ತಿಭಾರದ ಮೇಲೆ ತಮ್ಮನ್ನು ಬೆಳೆಸುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ ಮತ್ತು ಆ ಮಹಾನ್ ಪರಂಪರೆಗಳು ನಿಮ್ಮ ಮುಂದಿನ ಜೀವಿತದ ಹೆಗ್ಗುರುತುಗಳಾಗಲಿ.

ನಾನು ಪ್ರಾರ್ಥಿಸುತ್ತೇನೆ – ಈ ನಗರ ಶಾಶ್ವತವಾಗಿ ಧಾರ್ಮಿಕ ಸ್ವಾತಂತ್ರ್ಯದ ಮಾರ್ಗದರ್ಶಕ ಜ್ಯೋತಿಯಾಗಲಿ. ಈ ನಗರದ ಜನರು ಶಾಂತಿ ಸ್ಥಾಪನೆಗೋಸ್ಕರ ಈ ನಗರದಲ್ಲಿ ಮಾತ್ರವಲ್ಲ ಯುನೈಟೆಡ್ ಸ್ಟೇಟ್ಸ್‌ನಲ್ಲೂ ಲೋಕದಾದ್ಯಂತವೂ ತಮ್ಮ ಪ್ರಯತ್ನಗಳನ್ನು ಮಾಡುವವರಾಗಲಿ.

ಇಲ್ಲಿ ವಾಸಿಸುವ ನಮ್ಮ ಜನರ ಜನ ಸಂಖ್ಯೆ ಬಹಳ ಕಡಿಮೆಯಾಗಿದ್ದರೂ ನಾನು ಖಾತರಿ ನೀಡುತ್ತೇನೆ – ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅಂತಹ ಶ್ರೇಷ್ಠ ಪ್ರಯತ್ನಗಳಿಗೆ ಬೆಂಬಲ ನೀಡಲು ಯಾವಾಗಲೂ ಸಿದ್ಧವಾಗಿರುವುದು ಮತ್ತು ಆವಶ್ಯಕವಾದ ಸಹಾಯವನ್ನು ನೀಡುವುದು.

ಎಲ್ಲ ನಗರಗಳಲ್ಲೂ ಎಲ್ಲ ದೇಶಗಳಲ್ಲೂ ಶಾಂತಿಯನ್ನು ಸ್ಥಾಪಿಸಲು ಸರ್ವಶಕ್ತನಾದ ಅಲ್ಲಾಹನು ನಮಗೆ ನೆರವು ನೀಡುವವನಾಗಲಿ.

ಕೊನೆಯದಾಗಿ, ನೀವು ಬಂದು ನಮ್ಮೊಂದಿಗೆ ಈ ಸಮಾರಂಭದಲ್ಲಿ ಭಾಗವಹಿಸಿದುದಕ್ಕಾಗಿ ನನ್ನ ಪ್ರಾಮಾಣಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅಲ್ಲಾಹನು ತಮಗೆಲ್ಲರಿಗೂ ಅನುಗ್ರಹ ದಯಪಾಲಿಸಲಿ. ಬಹಳ ಧನ್ಯವಾದಗಳು.

**(The Review of Religions April 2019 ಸಂಚಿಕೆಯಿಂದ)**

**LOVE FOR HONESTY AND HATRED FOR DISHONESTY**

**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ**

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ**

# ಪವಿತ್ರ ರಮಝಾನ್ ಮತ್ತು ನಮ್ಮ ಹೊಣೆಗಾರಿಕೆಗಳು

**(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಲಂಡನಿನ 'ಬೈತುಲ್ ಫುತೂಹ್' ಮಸೀದಿಯಲ್ಲಿ 10–05–2019 ರಂದು ನೀಡಿದ ಜುಮುಅ ಖುತ್‌ಬದ ಸಾರಾಂಶ)**

يٰۤاَيُّهَا الَّذِيۡنَ اٰمَنُوۡا كُتِبَ عَلَيۡكُمُ الصِّيَامُ كَمَا كُتِبَ عَلَى الَّذِيۡنَ مِنۡ قَبۡلِكُمۡ لَعَلَّكُمۡ تَتَّقُوۡنَ ﴿۱۸۴﴾
اَيَّامًا مَّعۡدُوۡدٰتٍ ؕ فَمَنۡ كَانَ مِنۡكُمۡ مَّرِيۡضًا اَوۡ عَلٰى سَفَرٍ فَعِدَّةٌ مِّنۡ اَيَّامٍ اُخَرَ ؕ وَعَلَى الَّذِيۡنَ يُطِيۡقُوۡنَهٗ
فِدۡيَةٌ طَعَامُ مِسۡكِيۡنٍ ؕ فَمَنۡ تَطَوَّعَ خَيۡرًا فَهُوَ خَيۡرٌ لَّهٗ ؕ وَاَنۡ تَصُوۡمُوۡا خَيۡرٌ لَّكُمۡ اِنۡ كُنۡتُمۡ تَعۡلَمُوۡنَ ﴿۱۸۵﴾
شَهۡرُ رَمَضَانَ الَّذِىۡۤ اُنۡزِلَ فِيۡهِ الۡقُرۡاٰنُ هُدًى لِّلنَّاسِ وَ بَيِّنٰتٍ مِّنَ الۡهُدٰى وَالۡفُرۡقَانِ ۚ فَمَنۡ شَهِدَ مِنۡكُمُ
الشَّهۡرَ فَلۡيَصُمۡهُ ؕ وَمَنۡ كَانَ مَرِيۡضًا اَوۡ عَلٰى سَفَرٍ فَعِدَّةٌ مِّنۡ اَيَّامٍ اُخَرَ ؕ يُرِيۡدُ اللّٰهُ بِكُمُ الۡيُسۡرَ وَلَا يُرِيۡدُ
بِكُمُ الۡعُسۡرَ ۚ وَلِتُكۡمِلُوا الۡعِدَّةَ وَلِتُكَبِّرُوا اللّٰهَ عَلٰى مَا هَدٰٮكُمۡ وَلَعَلَّكُمۡ تَشۡكُرُوۡنَ ﴿۱۸۶﴾
وَاِذَا سَاَلَكَ عِبَادِىۡ عَنِّىۡ فَاِنِّىۡ قَرِيۡبٌ ؕ اُجِيۡبُ دَعۡوَةَ الدَّاعِ اِذَا دَعَانِ ۙ فَلۡيَسۡتَجِيۡبُوۡا لِىۡ وَلۡيُؤۡمِنُوۡا بِىۡ لَعَلَّهُمۡ
يَرۡشُدُوۡنَ ﴿۱۸۷﴾

"ಎಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ. (ಈ ಉಪವಾಸವನ್ನು) ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. (ಉಪವಾಸ ಮಾಡಲು ದೈಹಿಕ ನಿಶ್ಶಕ್ತಿಯಿದ್ದು ಆರ್ಥಿಕವಾಗಿ) ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ. ಇನ್ನು ಯಾರಾದರೂ ಪೂರ್ಣವಾದ ಅನುಸರಣೆಯನ್ನು ತೋರಿಸುತ್ತಾ ಏನಾದರೂ ಒಳಿತನ್ನು ಮಾಡುವವರಾದರೆ ಅದು ಆತನಿಗೆ ಉತ್ತಮ. ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ.

"ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ.

"(ಎಲೈ ಪ್ರವಾದಿ,) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು)– ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ." (ಪವಿತ್ರ ಖುರ್‌ಆನ್ 2: 184–187).

ಪವಿತ್ರ ಖುರ್‌ಆನಿನ ಈ ವಚನಗಳಲ್ಲಿ ಉಪವಾಸಗಳ ಫರ್ಝಿಯ್ಯತ್ (ಕಡ್ಡಾಯವಾಗಿರುವಿಕೆ), ಅದರ ಅಹ್‌ಮಿಯ್ಯತ್ (ಮಹತ್ವ), ಈ ತಿಂಗಳಲ್ಲಿ ಸತ್ಯವಿಶ್ವಾಸಿಗಳ ಹೊಣೆಗಾರಿಕೆಗಳು ಮತ್ತು ಪ್ರಾರ್ಥನೆ ಅಂಗೀಕರಿಸಲ್ಪಡುವ ವಿಧಾನಗಳನ್ನು ವಿವರಿಸಲಾಗಿದೆ. ಎಂತಹ ಒಂದು ತಿಂಗಳನ್ನು ನಮಗೆ ನಿಶ್ಚಯಿಸಲಾಗಿದೆ ಎಂದರೆ ಅದರಲ್ಲಿ ಅಲ್ಲಾಹನು ದಾಸರ ಸಮೀಪಕ್ಕೆ ಬರುತ್ತಾನೆ. ಶೈತಾನನನ್ನು ಬಂಧಿಸಲಾಗುತ್ತದೆ. ಅಲ್ಲಾಹನಿಂದ ದಾಸರಿಗೆ ಎಷ್ಟೆಲ್ಲ ಕಾರುಣ್ಯ ಮತ್ತು ಅನುಗ್ರಹಗಳ ಬಾಗಿಲುಗಳು ತೆರೆಯಲ್ಪಡುತ್ತವೆ ಎಂದರೆ ನಾವು ಅಲ್ಲಾಹನ ಮಾತುಗಳನ್ನು ಆಲಿಸಿ ಉಪವಾಸ ವ್ರತಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಪಾಲಿಸಲು ಪ್ರಯತ್ನ ಮಾಡಬೇಕಾದುದು ಆವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಹೇಳಿದರು: ರಮಝಾನಿನಲ್ಲಿ ಏನೆಲ್ಲ ಅನುಗ್ರಹಗಳಿವೆ ಮತ್ತು ಅಲ್ಲಾಹನು ಹೇಗೆ ಮತ್ತು ಎಷ್ಟು ನಿಮ್ಮ ಮೇಲೆ ಕಾರುಣ್ಯ ಬೀರುವವನಾಗಿರುತ್ತಾನೆ ಎಂದು ನಿಮಗೆ ತಿಳಿದರೆ ಇಡೀ ವರ್ಷವೇ ರಮಝಾನ್ ಆಗಲಿ ಎಂದು ನೀವು ಇಚ್ಛಿಸುವಿರಿ. ವರ್ಷವಿಡೀ ನಾವು ಅಲ್ಲಾಹನ ಅನುಗ್ರಹಗಳನ್ನು ಬಾಚಿಕೊಳ್ಳುವವರಾಗುವೆವು ಎಂದು ನೀವು ಬಯಸುವಿರಿ. ಉಪವಾಸವನ್ನು ನಮ್ಮ ಲಾಭಕ್ಕೋಸ್ಕರವೇ ಅಲ್ಲಾಹನು ಫರ್ಝ್ (ಕಡ್ಡಾಯವಾಗಿ) ಮಾಡಿದ್ದಾನೆ. ಆಧ್ಯಾತ್ಮಿಕ ಮತ್ತು ಶಾರೀರಿಕವಾದ ಪ್ರತಿಯೊಂದು ರೀತಿಯ ಲಾಭವನ್ನು ನಾವು ಉಪವಾಸದಿಂದ ಗಳಿಸಬಲ್ಲೆವು. ಉಪವಾಸಗಳು ಒಬ್ಬ ಸತ್ಯವಿಶ್ವಾಸಿಯ ಶಾರೀರಿಕ ಸ್ಥಿತಿಯನ್ನು ಉತ್ತಮಪಡಿಸುತ್ತದೆ. ಅದಕ್ಕಿಂತ ಮಿಗಿಲಾಗಿ ಆಧ್ಯಾತ್ಮಿಕವಾಗಿ ಅವರ ಸ್ಥಿತಿ ಉತ್ತಮಗೊಳ್ಳಲು ಕಾರಣವಾಗುತ್ತದೆ. ಆದುದರಿಂದ ನಾವು ಅಲ್ಲಾಹನ ಈ ಆಜ್ಞೆಯನ್ನು ಅನುಷ್ಠಾನಕ್ಕೆ ತಂದು ರಮಝಾನ್ ತಿಂಗಳಲ್ಲಿ ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸಲು ಧಾರಾಳವಾಗಿ ಪ್ರಯತ್ನಿಸಬೇಕಾಗಿದೆ.

ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ಉಪವಾಸ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಪವಿತ್ರ ಖುರ್‌ಆನಿನ ಈ ವಚನಗಳಲ್ಲಿ ಅಲ್ಲಾಹನು ವಿವರಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಇಚ್ಛಿಸುವುದೇನೆಂದರೆ, ನೀವು ಒಂದು ಆಹಾರವನ್ನು ಕಡಿಮೆಗೊಳಿಸಿ ಇನ್ನೊಂದನ್ನು ವರ್ಧಿಸಬೇಕು. ಯಾವಾಗಲೂ ಉಪವಾಸ ಮಾಡುವವನು ಹೀಗೆ ಉದ್ದೇಶಿಸಬೇಕು. ಅವನಿಂದ ಆವಶ್ಯಪಡುವುದು ಹಸಿದಿರಬೇಕೆಂದು ಮಾತ್ರವಲ್ಲ, ಅವನು ಅಲ್ಲಾಹನನ್ನು ಸ್ಮರಿಸುವುದರಲ್ಲಿ ಮಗ್ನನಾಗಿರಬೇಕು. ಆ ಮೂಲಕ ಅವನಿಗೆ ಅಲ್ಲಾಹನೊಂದಿಗೆ ಸಾಮೀಪ್ಯ ಮತ್ತು ಲೌಕಿಕತೆಯಿಂದ ವಿದೂರತೆ ಸಂಭವಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಉಪವಾಸದ ಅರ್ಥವೇನೆಂದರೆ, ಮನುಷ್ಯನು ಒಂದು ಆಹಾರವನ್ನು ಎಂದರೆ ಶರೀರವನ್ನು ಪೋಷಿಸುವ ಆಹಾರವನ್ನು ತ್ಯಜಿಸಿ ಬೇರೊಂದು ಆಹಾರವನ್ನು ಎಂದರೆ ಆತ್ಮವನ್ನು ಸಮಾಧಾನಪಡಿಸುವ ಮತ್ತು

ಆಧ್ಯಾತ್ಮಿಕ ಹಸಿವನ್ನು ನೀಗಿಸುವ ಆಹಾರವನ್ನು ಗಳಿಸಬೇಕು. ಕೇವಲ ಆಚಾರ ರೂಪದಲ್ಲಿ ಉಪವಾಸ ಮಾಡದೆ ಅಲ್ಲಾಹನಿಗೋಸ್ಕರ ಉಪವಾಸ ಮಾಡುವವರು ಅಲ್ಲಾಹನ ಹಮ್ದ್ (ಸ್ತುತಿ) ತಸ್‌ಬೀಹ್ (ಅಲ್ಲಾಹನ ಪರಿಶುದ್ಧಿಯ ಸ್ಮರಣೆ) ಮತ್ತು ತಹ್‌ಲೀಲ್ (ಅಲ್ಲಾಹನಲ್ಲಿ ತಲ್ಲೀನನಾಗುವಿಕೆ) ಇವುಗಳಲ್ಲಿ ನಿರತನಾಗಬೇಕು.

ಉಪವಾಸ ಮಾಡುವುದರ ಉದ್ದೇಶ ತಖ್ವವನ್ನು ಗಳಿಸುವುದೆಂದು ಅಲ್ಲಾಹನು ಹೇಳಿದ್ದಾನೆ. ತಖ್ವದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮುತ್ತಖಿ (ತಖ್ವವುಳ್ಳವನು) ಆಗಲು ಆವಶ್ಯವಾಗಿರುವುದು ಏನೆಂದರೆ ದುರ್ಗುಣಗಳಿಂದ ದೂರ ಸರಿಯಬೇಕು ಮತ್ತು ಸದ್ಗುಣಗಳನ್ನು ವೃದ್ಧಿಗೊಳಿಸಬೇಕು. ಜನರೊಂದಿಗೆ ಮೃದುವಾಗಿ ವರ್ತಿಸಬೇಕು. ಅಲ್ಲಾಹನೊಂದಿಗೆ ಸತ್ಯಸಂಧವಾದ ನಿಷ್ಠೆಯನ್ನು ಹೊಂದಬೇಕು. ಇವುಗಳಿಂದ ಮನುಷ್ಯನು ಮುತ್ತಖಿ ಎಂದು ಕರೆಯಲ್ಪಡುತ್ತಾನೆ. ಅಲ್ಲಾಹನು ಅಂತಹ ಜನರ ಸಂರಕ್ಷಕನಾಗಿರುತ್ತಾನೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿರುವನು: وَهُوَ يَتَوَلَّى الصّٰلِحِينَ – ಸಜ್ಜನರಿಗೆ ಅವನು ಸಂರಕ್ಷಣೆ ನೀಡುತ್ತಾನೆ.(7:197). ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಅಲ್ಲಾಹನು ಅವರ ಕೈಯಾಗುತ್ತಾನೆ – ಅದರ ಮೂಲಕ ಅವರು ಹಿಡಿಯುತ್ತಾರೆ. ಅಲ್ಲಾಹನು ಅವರ ಕಣ್ಣು ಆಗುತ್ತಾನೆ – ಅದರ ಮೂಲಕ ಅವರು ನೋಡುತ್ತಾರೆ. ಅಲ್ಲಾಹನು ಅವರ ಕಿವಿಯಾಗುತ್ತಾನೆ – ಅದರ ಮೂಲಕ ಅವರು ಆಲಿಸುತ್ತಾರೆ. ಅಲ್ಲಾಹನು ಅವರ ಪಾದವಾಗುತ್ತಾನೆ – ಅದರ ಮೂಲಕ ಅವರು ಚಲಿಸುತ್ತಾರೆ.

ಹಝ್ರತ್ ಅಬೂಹುರೈರ[ರ] ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು – ಅಲ್ಲಾಹನು ಹೇಳುತ್ತಾನೆ – ಮನುಷ್ಯನ ಪ್ರತಿಯೊಂದು ಕರ್ಮ ಅವನ ಸ್ವಂತ ಲಾಭಕ್ಕೋಸ್ಕರವಾಗಿರುತ್ತದೆ. ಆದರೆ ಉಪವಾಸ ಇದಕ್ಕೆ ಹೊರತಾಗಿದೆ. ಮನುಷ್ಯನು ನನಗೋಸ್ಕರ ಉಪವಾಸ ಮಾಡುತ್ತಾನೆ. ನಾನೇ ಅದರ ಪ್ರತಿಫಲವಾಗಿದ್ದೇನೆ. ಅಂದರೆ ನಾನೇ ಅದಕ್ಕೆ ಪ್ರತಿಫಲ ನೀಡುವೆನು – ನಾನು ಇಚ್ಛಿಸುವ ಪ್ರಕಾರ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಹೀಗೆ ಸಹ ಹೇಳಿರುವರು: ಉಪವಾಸ ಗುರಾಣಿ ಆಗಿರುತ್ತದೆ. ನಿಮ್ಮಲ್ಲಿ ಯಾರಾದರೂ ಉಪವಾಸ ಅನುಷ್ಠಿಸುತ್ತಾ ಇದ್ದರೆ ಕಾಮಾಸಕ್ತಿಯ ಮಾತುಗಳನ್ನು ಮತ್ತು ಬೈಗಳನ್ನು ವರ್ಜಿಸಬೇಕು. ಯಾರಾದರೂ ಅವರೊಂದಿಗೆ ಅಸಭ್ಯವಾಗಿ ವರ್ತಿಸಿದರೆ ಅಥವಾ ಜಗಳ ಮಾಡಿದರೆ ಅವನೊಂದಿಗೆ ಹೇಳಬೇಕು – ನಾನು ಉಪವಾಸ ಮಾಡುತ್ತಿದ್ದೇನೆ ಎಂದು.

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಹೀಗೆ ಸಹ ಹೇಳಿದರು: ಯಾರ ಕೈಯ್ಯಲ್ಲಿ ಮುಹಮ್ಮದನ ಜೀವವಿದೆಯೋ ಅವನ ಹೆಸರಿನಲ್ಲಿ ಆಣೆ ಹಾಕಿ ಹೇಳುತ್ತೇನೆ, ಉಪವಾಸ ಮಾಡುವವನ ಬಾಯಿಯ ವಾಸನೆ ಅಲ್ಲಾಹನ ಸನ್ನಿಧಿಯಲ್ಲಿ ಕಸ್ತೂರಿಗಿಂತ ಹೆಚ್ಚು ಉತ್ತಮವಾಗಿದೆ. ಉಪವಾಸ ಮಾಡುವವನಿಗೆ ಎರಡು ಸಂತೋಷಪಡುವ ಸಂದರ್ಭಗಳಿವೆ. ಒಂದು, ಉಪವಾಸ ಪೂರ್ಣಗೊಳಿಸಿ ಇಫ್ತಾರ್ ಮಾಡುವಾಗ ಉಪವಾಸ ಮಾಡುವವನು ಸಂತೋಷಪಡುತ್ತಾನೆ. ಎರಡನೆಯದಾಗಿ, ಅವನು ತನ್ನ ಪ್ರಭುವಾದ ಅಲ್ಲಾಹನನ್ನು ಭೇಟಿಯಾಗುವಾಗ ಉಪವಾಸದ ಕಾರಣ ಸಂತೋಷಪಡುವನು.

ಆದುದರಿಂದ ಉಪವಾಸ ಅನುಷ್ಠಿಸುವವನು ತಖ್ವದ ಈ ಎರಡು ಮಟ್ಟವನ್ನು ಗಳಿಸಬೇಕು. ಅವನು ಎಲ್ಲ ವಿಧ ಆಧ್ಯಾತ್ಮಿಕ ಮತ್ತು ನೈತಿಕ ಬಲಹೀನತೆಗಳಿಂದ ತನ್ನನ್ನು ರಕ್ಷಿಸಿಕೊಂಡು ತನ್ನ ದಿನವನ್ನು ಕಳೆಯಬೇಕು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಹೇಳಿದ್ದಾರೆ, ಶೈತಾನನು ಸಂಕೋಲೆಗಳಿಂದ ಕಟ್ಟಲ್ಪಡುತ್ತಾನೆಂದು. ಹೀಗಿರುವಾಗ ರಮಝಾನ್ ತಿಂಗಳಲ್ಲಿಯೂ ಲೋಕದಲ್ಲಿ ಕೆಟ್ಟ ವರ್ತನೆಗಳು ಜಾರಿಯಲ್ಲಿರುವುದಕ್ಕೆ ಕಾರಣವೇನು? ಯಾರು ಉಪವಾಸದ ವಾಸ್ತವಿಕತೆಯನ್ನು ಅರಿತುಕೊಂಡು ತಖ್ವವನ್ನು ಅವಲಂಬಿಸುತ್ತಾರೋ ಅವರಿಗೆ ಉಪವಾಸ ಒಂದು ಗುರಾಣಿಯಾಗಿ ಶೈತಾನನಿಂದ ರಕ್ಷಿಸುತ್ತದೆ. ಈ ಮುಖ್ಯ ಉದ್ದೇಶವನ್ನು ನಾವು ಪ್ರತಿ ಸಮಯದಲ್ಲಿ ನಮ್ಮ ಮುಂದೆ ಇರಿಸಬೇಕಾಗಿದೆ.

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಹೀಗೆ ಸಹ ಎಚ್ಚರಿಕೆ ನೀಡಿದ್ದಾರೆ: ರಮಝಾನ್ ತಿಂಗಳಲ್ಲಿ ಅಲ್ಲಾಹನಿಂದ ಕ್ಷಮೆಯನ್ನು ಗಳಿಸದಿದ್ದರೆ, ಅಲ್ಲಾಹನ ಕಾರುಣ್ಯ ವಿಶಾಲವಾಗಿ ಸುರಿಯುತ್ತಿರುವಾಗ ಅಲ್ಲಾಹನಿಂದ ಕ್ಷಮೆಯನ್ನು ಗಳಿಸಲು ಸಾಧ್ಯವಾಗದಿದ್ದರೆ ಬೇರೆ ಯಾವಾಗ ಕ್ಷಮೆಯನ್ನು ಗಳಿಸಲು ಸಾಧ್ಯ? ಆದುದರಿಂದ ನಾವು ರಮಝಾನಿನ ಆಗಮನದಿಂದ ಸಂತೋಷಗೊಂಡು ಪರಸ್ಪರ ಶುಭಾಶಯಗಳನ್ನು ಕೋರುವುದರಲ್ಲಿ ನಿರತರಾದರೆ ಸಾಕಾಗಲಾರದು. ನಾವು ನಮ್ಮನ್ನು ಪರಿಶೋಧಿಸಬೇಕು – ಅಲ್ಲಾಹನು ಉಪವಾಸದ ಉದ್ದೇಶವನ್ನು ಹೇಳಿದ್ದಾನೆ. ನಾವು ಅದನ್ನು ಗಳಿಸಲು ಪ್ರಯತ್ನ ಮಾಡುತ್ತಿರುವೆವೋ ಇಲ್ಲವೋ ಎಂದು. ಅಲ್ಲಾಹನು ನಮಗೆಲ್ಲರಿಗೂ ತಖ್ವವನ್ನು ಗಳಿಸುವ ಭಾಗ್ಯ ನೀಡಲಿ ಮತ್ತು ಅವನು ತನ್ನ ಕ್ಷಮೆಯ ಚಾದರವನ್ನು ನಮ್ಮ ಮೇಲೆ ಹೊದಿಸುವವನಾಗಲಿ.

ಪವಿತ್ರ ಖುರ್‌ಆನಿನ ವಚನದಲ್ಲಿ ಯಾವ ಪರಿಸ್ಥಿತಿಗಳಲ್ಲಿ ನಾವು ಉಪವಾಸ ಮಾಡದೆ ಇರಬಹುದೆಂದು ಅಲ್ಲಾಹನು ವಿವರಿಸಿದ್ದಾನೆ. ಉಪವಾಸವನ್ನು ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ ಎಂದು ಅಲ್ಲಾಹನು ಹೇಳಿದ್ದಾನೆ. ಇದು ಬಹಳ ದೊಡ್ಡ ಬಲಿದಾನದ ಕೆಲಸವೇನೂ ಅಲ್ಲ ಎಂದು ಸಹ ಅಲ್ಲಾಹನು ಹೇಳಿದ್ದಾನೆ. ಈ ದಿನಗಳಲ್ಲಿ ಅಲ್ಲಾಹನು ತನ್ನ ಕಾರುಣ್ಯವನ್ನು ದಯಪಾಲಿಸುವುದಾಗಿ ಅಲ್ಲಾಹನು ಹೇಳಿದ್ದಾನೆ. ರೋಗಿಯಾಗಿದ್ದರೆ ಅಥವಾ ಪ್ರಯಾಣದಲ್ಲಿದ್ದರೆ ಆ ದಿನಗಳಲ್ಲಿ ಉಪವಾಸ ಮಾಡುವುದರಿಂದ ವಿನಾಯತಿ ಇದೆ. ಆದರೆ ಉಪವಾಸ ಮಾಡಲು ಅಸಾಧ್ಯವಾದ ದಿನಗಳ ಉಪವಾಸ ಬೇರೆ ದಿನಗಳಲ್ಲಿ ಅನುಷ್ಠಿಸಿ ಎಣಿಕೆ ಪೂರ್ಣಗೊಳಿಸಬೇಕು. ಒಬ್ಬನು ಸ್ಥಿರವಾಗಿ ರೋಗಿಯಾಗಿದ್ದರೆ, ಕೇವಲ ನೆವನ ಹೇಳದೆ, ಡಾಕ್ಟರ್ ಉಪವಾಸ ಮಾಡಬಾರದೆಂದು ಹೇಳಿದ್ದರೆ ಒಬ್ಬ ಬಡವನಿಗೆ ಉಪವಾಸ ಮಾಡುವ ವ್ಯವಸ್ಥೆ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಫಿದ್‌ಯವನ್ನು ನಿಶ್ಚಯಿಸಿರುವುದು ಏಕೆ ಎಂದು ಒಮ್ಮೆ ನಾನು ಯೋಚಿಸಿದೆ. ಆಗ ಅದರ ಉದ್ದೇಶ ಉಪವಾಸ ಮಾಡುವ ಭಾಗ್ಯ ದೊರಕಲಿಕ್ಕಾಗಿದೆ ಎಂದು ಮನವರಿಕೆಯಾಯಿತು.. ಅಲ್ಲಾಹನು ಸರ್ವಶಕ್ತನಾಗಿದ್ದಾನೆ. ಕ್ಷಯರೋಗ (ಟಿ.ಬಿ.) ಪೀಡಿತನನ್ನು ಸಹ ರೋಗಮುಕ್ತನನ್ನಾಗಿ ಮಾಡಲು ಅಲ್ಲಾಹನಿಗೆ ಸಾಧ್ಯವಿದೆ. ಅವನಿಗೆ ಉಪವಾಸ ಮಾಡುವ ಶಕ್ತಿ ದೊರಕಲು ಸಾಧ್ಯವಿದೆ. ಫಿದ್‌ಯದ ಉದ್ದೇಶ ಶಕ್ತಿಯನ್ನು ಗಳಿಸುವುದಾಗಿದೆ. ಇದು ಅಲ್ಲಾಹನ ಅನುಗ್ರಹದಿಂದ ಮಾತ್ರವೇ ಲಭಿಸುತ್ತದೆ. ಆರೋಗ್ಯವನ್ನು ಗಳಿಸಿ

ಉಪವಾಸ ಮಾಡುವ ಶಕ್ತಿ ಗಳಿಸುವವರು ಕೇವಲ ಫಿದ್‌ಯ ನೀಡಿ ಸುಮ್ಮನೆ ಇರುವುದು ಅನುಮತಿಸಲ್ಪಡುವುದಿಲ್ಲ. ಇದು ತಪ್ಪಾದ ನವೀನಾಚಾರವಾಗುತ್ತದೆ. ಫಿದ್‌ಯವನ್ನು ನೀಡಿದ್ದರೂ ರಮಝಾನ್ ತಿಂಗಳು ದಾಟಿ ಹೋದ ನಂತರ ಬಿಟ್ಟುಹೋದ ಉಪವಾಸಗಳನ್ನು ಅನುಷ್ಠಿಸುವುದು ಆವಶ್ಯಕವಾಗಿದೆ. ವರ್ಷದ ಕಾಲಾವಧಿಯಲ್ಲಿ ಯಾವಾಗ ಬೇಕಾದರೂ ಆ ಉಪವಾಸ ಮಾಡಬಹುದು. ಆದರೆ ಸ್ಥಿರವಾದ ರೋಗಿಗಳು, ಹಾಲೂಡಿಸುವ ತಾಯಂದಿರು, ಗರ್ಭಿಣಿಯರು ಮೊದಲಾದವರಿಗೆ ಫಿದ್‌ಯುವೇ ಸಾಕಾಗುತ್ತದೆ. ಆದರೆ ಫಿದ್‌ಯದೊಂದಿಗೆ ಈ ತಿಂಗಳಲ್ಲಿ ಆರಾಧನೆಗಳನ್ನು, ಧಿಕ್ರೆ ಇಲಾಹಿಯನ್ನು ಮಾಡಬೇಕು. ಇತರ ಸತ್ಕರ್ಮಗಳನ್ನು ಜಾರಿಯಲ್ಲಿರಿಸಬೇಕು. ಫಿದ್‌ಯ ನೀಡಿದ ಕಾರಣ ಬೇರೆ ಏನೂ ಮಾಡಬೇಕಾಗಿಲ್ಲ ಎಂದು ಯೋಚಿಸಬಾರದು.

ಪವಿತ್ರ ಖುರ್‌ಆನಿನ ವಚನಗಳಲ್ಲಿ ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: ನೀವು ಪೂರ್ಣವಾದ ಅನುಸರಣೆಯಿಂದ ಮಾಡುವ ಒಳಿತಿಗೆ ಅಲ್ಲಾಹನು ಅತ್ಯುತ್ತಮ ಪ್ರತಿಫಲ ನೀಡುವನು. ನಂತರದ ವಚನದಲ್ಲಿ ಅಲ್ಲಾಹನು, ಈ ತಿಂಗಳಲ್ಲಿ ಪವಿತ್ರ ಖುರ್‌ಆನ್ ಅವತೀರ್ಣಗೊಳಿಸಿರುವುದಾಗಿ ಹೇಳಿದ್ದಾನೆ. ಅದು ನಿಮಗೆ ಮಾರ್ಗದರ್ಶನ ನೀಡುವುದು. ಅದರಲ್ಲಿ ಪ್ರಕಾಶಮಾನವಾದ ಸಾಕ್ಷ್ಯಾಧಾರಗಳು ಮತ್ತು ದೃಷ್ಟಾಂತಗಳು ಅಡಕವಾಗಿವೆ. ಆದುದರಿಂದ ಪವಿತ್ರ ಖುರ್‌ಆನಿಗೆ ರಮಝಾನಿನೊಂದಿಗೆ ಒಂದು ವಿಶಿಷ್ಟ ಸಂಬಂಧವಿದೆ. ಆದುದರಿಂದ ಈ ತಿಂಗಳಲ್ಲಿ ಉಪವಾಸ ಮಾಡುವುದರೊಂದಿಗೆ ಪವಿತ್ರ ಖುರ್‌ಆನ್ ಪಠಿಸುವುದು, ಅದರ ವಚನಗಳ ಬಗ್ಗೆ ಚಿಂತಿಸುವುದು, ಅದರ ಆಜ್ಞೆಗಳನ್ನು ಅನ್ವೇಷಿಸಿ ಅವುಗಳನ್ನು ಕರ್ಮರೂಪಕ್ಕೆ ತರುವುದಕ್ಕೆ ಪ್ರಯತ್ನಿಸುವುದು ಆವಶ್ಯಕವಾಗಿದೆ. ಆ ಮೂಲಕ ನಾವು ರಮಝಾನಿನ ಉಪವಾಸಗಳಿಂದ ವಾಸ್ತವಿಕ ಅನುಗ್ರಹ ಗಳಿಸಬಹುದು. ಪ್ರತಿಯೊಬ್ಬನು ಪವಿತ್ರ ಖುರ್‌ಆನಿನ ಅರ್ಥ ವೈಶಾಲ್ಯದ ಆಳದ ತನಕ ತಲಪಲಾರ. ಆದುದರಿಂದ ಪವಿತ್ರ ಖುರ್‌ಆನ್ ಪಾರಾಯಣ ಮತ್ತು ಅರ್ಥದೊಂದಿಗೆ, ಜಮಾಅತ್ ವತಿಯಿಂದ ಮಸ್‌ಜಿದ್‌ಗಳು ಇರುವಲ್ಲಿ ದರ್ಸ್ ನೀಡುವ ವ್ಯವಸ್ಥೆ ಇರುವಲ್ಲಿ ಅದರ ಪ್ರಯೋಜನ ಪಡೆಯಬೇಕು. ಎಂ.ಟಿ.ಎ.ದಲ್ಲಿ ದರ್ಸ್ ವ್ಯವಸ್ಥೆ ಮಾಡಲಾಗಿದೆ. ಅದರ ಲಾಭ ಪಡೆಯಬೇಕಾದುದು ಆವಶ್ಯಕವಾಗಿದೆ. ಈ ತಿಂಗಳಲ್ಲಿ ಪವಿತ್ರ ಖುರ್‌ಆನನ್ನು ಹೆಚ್ಚು ಪಾರಾಯಣ ಮಾಡಬೇಕೆಂದು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[(ಸ)] ಉಪದೇಶಿಸಿದ್ದಾರೆ. ಒಬ್ಬ ಅಹ್ಮದೀ ಇತರ ದಿನಗಳಲ್ಲಿಯೂ ಪವಿತ್ರ ಖುರ್‌ಆನ್ ಕಡೆಗೆ ಹೆಚ್ಚು ಶ್ರದ್ಧೆ ನೀಡಬೇಕಾದುದು ಆವಶ್ಯಕವಾಗಿದೆ. ಆದರೆ ರಮಝಾನಿನಲ್ಲಿ ಅದರ ಬಗ್ಗೆ ವಿಶಿಷ್ಟ ಶ್ರದ್ಧೆ ನೀಡಬೇಕು. ಹಾಗೆ ಮಾಡದೆ ಕೇವಲ ಉಪವಾಸವನ್ನು ಅನುಷ್ಠಿಸುವುದರಿಂದ ಪ್ರಯೋಜನವಾಗಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಬಾಹ್ಯ ಜ್ಞಾನ ಮತ್ತು ಪವಿತ್ರ ಖುರ್‌ಆನಿನ ಜ್ಞಾನಗಳನ್ನು ಗಳಿಸುವುದರ ಮಧ್ಯೆ ಮಹತ್ವಪೂರ್ಣ ವ್ಯತ್ಯಾಸವಿದೆ. ಲೌಕಿಕ ವಿದ್ಯೆ ಗಳಿಸುವುದಕ್ಕೋಸ್ಕರ ತಖ್ವದ ಶರತ್ತಿರುವುದಿಲ್ಲ. ಆದರೆ ಆಕಾಶದ ಜ್ಞಾನ ಮತ್ತು ಪವಿತ್ರ ಖುರ್‌ಆನಿನ ಸೂಕ್ಷ್ಮಾರ್ಥವನ್ನು ಗಳಿಸಲು ತಖ್ವ ಪ್ರಥಮ ಶರತ್ತಾಗಿದೆ. ಪೂರ್ಣವಾದ ವಿನಯದಿಂದ ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವ ತನಕ, ಅಲ್ಲಾಹನ ಮಹೋನ್ನತ ಸ್ಥಾನವನ್ನು ಗುರುತಿಸಿ ನಡುಗಿಕೊಂಡು ನಿಸ್ಸಹಾಯಕನಾಗಿ ಅಲ್ಲಾಹನನ್ನು ಬೇಡಿಕೊಳ್ಳದಿದ್ದರೆ, ಪರಿಶುದ್ಧಾತ್ಮವನ್ನು ಹೊಂದದಿದ್ದರೆ ಪವಿತ್ರ ಖುರ್‌ಆನಿನ ಜ್ಞಾನದ ಪಾಲು ಸಿಗಲಾರದು. ಆದುದರಿಂದ ಅಹ್ಮದಿಯರು ಈ ವಿಷಯದ ಬಗ್ಗೆ ಚಿಂತಿಸಬೇಕು. ಕೇವಲ ಲೌಕಿಕ ವಿಚಾರಗಳಲ್ಲಿ ಮುಳುಗಬಾರದು. ಪವಿತ್ರ ಖುರ್‌ಆನಿನ ಜ್ಞಾನ ಗಳಿಸಲು ಪ್ರಯತ್ನಿಸಬೇಕು.

ಮೇಲಿನ ವಚನಗಳಲ್ಲಿ ಹೇಳಲಾದ ಮತ್ತೊಂದು ವಿಷಯ ಈ ಉಪವಾಸದ ದಿನಗಳಲ್ಲಿ ಅಲ್ಲಾಹನ ಮಹೋನ್ನತ ಸ್ಥಾನವನ್ನು ಸ್ತುತಿಸಬೇಕಲ್ಲದೆ ಧಿಕ್ರೆ ಇಲಾಹಿ ಮತ್ತು ಇತರ ಆರಾಧನೆಗಳಲ್ಲಿ ನಿರತರಾಗಬೇಕು ಎಂದಾಗಿದೆ. ಪರಿಪೂರ್ಣ ಸಮಗ್ರ ಮಾರ್ಗದರ್ಶಕ ಗ್ರಂಥವನ್ನು ಅಲ್ಲಾಹನು ಅವತೀರ್ಣಗೊಳಿಸಿದ ಬಗ್ಗೆ ಕೃತಜ್ಞತೆ ಸೂಚಿಸಬೇಕು. ಮುಂದುವರಿದು ಅಲ್ಲಾಹನು ಹೇಳುತ್ತಾನೆ – ನನ್ನ ದಾಸರು ನನ್ನನ್ನು ಅನ್ವೇಷಿಸುತ್ತಾ ಇರುತ್ತಾರೆ. ರಮಝಾನಿನಲ್ಲಿ ಬಹಳ ಹೆಚ್ಚಿಗೆ ಅನ್ವೇಷಿಸುತ್ತಾ ಇರುತ್ತಾರೆ. ನಾನು ಅವರ ಸಮೀಪವಾಗಿದ್ದು ಅವರ ಬೇಡಿಕೆಗಳನ್ನು ಆಲಿಸುತ್ತೇನೆ. ಅವರು ನಿಷ್ಠಾಪೂರ್ವಕವಾಗಿ ಬೇಡಿಕೊಂಡರೆ ಅವರ ಬೇಡಿಕೆ ಈಡೇರಿಸುತ್ತೇನೆ. ಆದರೆ ಬೇಡಿಕೊಳ್ಳುವವನು ನನ್ನ ಆಜ್ಞೆಗಳನ್ನು ಪಾಲಿಸುವುದು ಆವಶ್ಯಕವಾಗಿದೆ. ಆದುದರಿಂದ ನಾವು ಮೊತ್ತಮೊದಲು ನಮ್ಮನ್ನು ಸುಧಾರಣೆ ಮಾಡಬೇಕು. ನಮ್ಮ ಪ್ರಯತ್ನದೊಂದಿಗೆ ಪ್ರಾರ್ಥನೆ ಸಹ ಆವಶ್ಯಕವಾಗಿದೆ. ಆಗ ಅಲ್ಲಾಹನು ನಮಗೆ ಸಾಂತ್ವನ ದೊರಕುವ ವ್ಯವಸ್ಥೆ ಮಾಡುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಯೋಚಿಸಬೇಡಿರಿ, ನಾವು ಪ್ರತಿದಿನ ದುಆ ಮಾಡುತ್ತಾ ಇರುತ್ತೇವೆ. ನಮಾಝ್ ದುಆಗಳಿಂದಲೇ ತುಂಬಿದೆ ಎಂದು. ಏಕೆಂದರೆ ಸೂಕ್ಷ್ಮವಾದ ಜ್ಞಾನಗಳಿಸಿದ ನಂತರ ಮತ್ತು ಅಲ್ಲಾಹನ ಅನುಗ್ರಹ ಗಳಿಸಿದ ನಂತರ ಮಾಡುವ ದುಆ ಬೇರೆಯೇ ಬಣ್ಣವನ್ನೂ ಸ್ಥಿತಿಯನ್ನೂ ಹೊಂದಿರುತ್ತದೆ. ಅದು ಆತ್ಮಾರ್ಪಣೆ ಮಾಡುವ ಸ್ಥಿತಿಯಾಗಿರುತ್ತದೆ. ಅದು ಅಳಲಿನೊಂದಿಗೆ ಕೂಡಿದ ಅಗ್ನಿಯ ರೂಪದಲ್ಲಿದೆ. ಅದು ಅನುಗ್ರಹವನ್ನು ಆಕರ್ಷಿಸುವ ಚುಂಬಕ ಶಕ್ತಿಯಾಗಿದೆ. ಅದು ಒಂದು ಮೃತ್ಯು ಆಗಿದೆ, ಆದರೆ ಕೊನೆಗೆ ಅದು ಜೀವಂತಗೊಳಿಸುತ್ತದೆ. ಅದೊಂದು ನೆರೆ ಉಬ್ಬರವಾಗಿರುತ್ತದೆ. ಆದರೆ ಅದೇ ಕೊನೆಗೆ ನೌಕೆಯಾಗುತ್ತದೆ. ಅದರಿಂದ ಬಿಗಡಾಯಿಸಿದ ವಿಷಯ ಸರಿಯಾಗುತ್ತದೆ. ಪ್ರತಿಯೊಂದು ವಿಷ ಅದರಿಂದ ವಿಷ ನಿವಾರಕ ಅಮೃತವಾಗಿ ಮಾರ್ಪಡುತ್ತದೆ. ವಾಸ್ತವಿಕ ದುಆ ಆ ರೀತಿ ಪ್ರಭಾವಶಾಲಿಯಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ದುಆ ಮಾಡುವವರಿಗೆ ಅಲ್ಲಾಹನು ಅದ್ಭುತ ಪವಾಡ ತೋರಿಸುವನು. ಅವರಿಗೆ ಅಸಾಧಾರಣವಾದ ಅನುಗ್ರಹ ನೀಡಲ್ಪಡುವುದು. ದುಆ ಅಲ್ಲಾಹನಿಂದಲೇ ಬರುತ್ತದೆ ಮತ್ತು ಅವನ ಕಡೆಗೆಯೇ ಮರಳುತ್ತದೆ. ದುಆದಿಂದ ಅಲ್ಲಾಹನು ಎಷ್ಟು ಸಮೀಪವಾಗುತ್ತಾನೆಂದರೆ ನಿಮ್ಮ ಜೀವ ನಿಮಗೆ ಸಮೀಪವಾಗಿರುವ ಹಾಗೆ. ದುಆದ ಪ್ರಥಮ ಅನುಗ್ರಹವೇನೆಂದರೆ, ಅದರ ಮೂಲಕ ಮನುಷ್ಯರಲ್ಲಿ ಪರಿಶುದ್ಧ ಬದಲಾವಣೆ ಉಂಟಾಗುತ್ತದೆ. ಪ್ರಾರ್ಥನೆ ಮಣ್ಣನ್ನು ಚಿನ್ನವನ್ನಾಗಿ ಮಾಡುವ ಶಕ್ತಿಯುಳ್ಳ ವಸ್ತುವಾಗಿದೆ. ಅದು ಆಂತರಿಕ ಮಾಲಿನ್ಯವನ್ನು ತೊಳೆದು ಹಾಕುವ ನೀರಾಗಿದೆ. ಆ ದುಆದ ಮೂಲಕ ಆತ್ಮ ಕರಗುತ್ತದೆ. ನೀರಿನ ಹಾಗೆ ಹರಿದು ಅಲ್ಲಾಹನ ಆಸ್ಥಾನಕ್ಕೆ ಬೀಳುತ್ತದೆ. ಅದು

ಅಲ್ಲಾಹನ ಮುಂದೆ ನಿಲ್ಲುತ್ತದೆ, ಬಾಗುತ್ತದೆ, ಸಾಷ್ಟಾಂಗ ಪ್ರಣಾಮ ಮಾಡುತ್ತದೆ. ಇಸ್ಲಾಮ್ ಕಲಿಸಿರುವ ನಮಾಝ್ ಅದರ ನೆರಳಿನ ರೂಪದಲ್ಲಿದೆ. ಆತ್ಮ ನಿಲ್ಲುವುದು ಎಂದರೆ ಅಲ್ಲಾಹನಿಗೋಸ್ಕರ ಎಲ್ಲ ಕಷ್ಟಗಳನ್ನು ಸಹಿಸಲು ಮತ್ತು ಆಜ್ಞೆಗಳನ್ನು ಪಾಲಿಸಲು ಸಿದ್ಧನಾಗಿರುವುದನ್ನು ಸೂಚಿಸುವುದಾಗಿದೆ. ಅದರ ರುಕೂಅ್ (ಬಾಗುವುದು) ಎಂದರೆ ಎಲ್ಲ ಪ್ರೀತಿ ಸಂಬಂಧಗಳನ್ನು ಬಿಡುವುದು ಮತ್ತು ಅಲ್ಲಾಹನಿಗೆ ಸೇರಿದವನಾಗುವುದು. ಅದರ ಸುಜೂದ್ (ಸಾಷ್ಟಾಂಗ ಪ್ರಣಾಮ) ಮಾಡುವುದು ಎಂದರೆ ಅಲ್ಲಾಹನ ಆಸ್ಥಾನದಲ್ಲಿ ಬಿದ್ದು ತನ್ನನ್ನು ಸಂಪೂರ್ಣವಾಗಿ ಅಲ್ಲಾಹನಿಗೆ ಸೇರಿದವನನ್ನಾಗಿ ಮಾಡುವುದು ಆಗಿದೆ. ಇಂತಹ ನಮಾಝ್ ಅಲ್ಲಾಹನನ್ನು ಭೇಟಿಯಾಗುವಂತೆ ಮಾಡುತ್ತದೆ. ಇಸ್ಲಾಮೀ ಶರೀಅತ್ ಇದರ ಚಿತ್ರವನ್ನು ಸಾಮಾನ್ಯ ನಮಾಝ್‌ನಲ್ಲಿ ಚಿತ್ರಿಸಿದೆ – ಈ ಶಾರೀರಿಕ ನಮಾಝ್ ಆಧ್ಯಾತ್ಮಿಕ ನಮಾಝ್ ಕಡೆಗೆ ಪ್ರೇರೇಪಣೆ ನೀಡಲಿ ಎಂದು.

ಆದುದರಿಂದ ನಾವು ಪ್ರಾರ್ಥನೆಗಳ ಅಂಗೀಕಾರದ ದೃಶ್ಯಗಳನ್ನು ಕಾಣಲು ಈ ಸ್ಥಿತಿಯನ್ನು ನಮ್ಮಲ್ಲಿ ಸೃಷ್ಟಿಸಬೇಕು. ರಮಝಾನಿನ ಉಪವಾಸಗಳ ಜೊತೆಗೆ ಆರಾಧನೆಗಳ ವಾಸ್ತವಿಕ ಅನುಗ್ರಹ ಸಹ ಗಳಿಸಬೇಕು. ಪ್ರಾರ್ಥನೆಗಳ ಅಂಗೀಕಾರದ ದೃಶ್ಯಗಳನ್ನು ನಾವು ಕಾಣುವಂತಾಗಬೇಕು. ಅಲ್ಲಾಹನು ತನ್ನ ದಾಸರ ಸಮೀಪದಲ್ಲಿಯೇ ಇದ್ದಾನೆ, ಈ ದಿನಗಳಲ್ಲಿ ಇನ್ನೂ ಹೆಚ್ಚು ಸಮೀಪವಾಗಿದ್ದಾನೆ. ಆದುದರಿಂದ ನಾವು ನಮ್ಮ ಫರ್ಝ್ ಆರಾಧನೆಗಳ ಜೊತೆಗೆ ನಫ್ಲ್ ಆರಾಧನೆಗಳನ್ನು ಮಾಡಿ ಅಲ್ಲಾಹನ ಮುಂದೆ ನಿಷ್ಠೆಯಿಂದ ಬಾಗಬೇಕು.

ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಹೇಳಿದ್ದಾರೆ: ಈ ತಿಂಗಳ ಮೊದಲನೆಯ ಹತ್ತು ದಿವಸ ರಹ್ಮತ್ (ಕಾರುಣ್ಯ), ಮಧ್ಯದ ಹತ್ತು ದಿವಸ ಮಗ್‌ಫಿರತ್ (ಕ್ಷಮೆ) ದೊರಕುವಂತಹ ಕಾಲ, ಕೊನೆಯ ಹತ್ತು ದಿವಸ ನರಕದಿಂದ ವಿಮೋಚನೆ ನೀಡುವ ಕಾಲವಾಗಿದೆ ಎಂದು.

ಅಲ್ಲಾಹನು ನಮ್ಮನ್ನು ಅವನ ವಾಸ್ತವಿಕ ದಾಸರನ್ನಾಗಿ ಮಾಡಿ ರಹ್ಮತ್ ಮತ್ತು ಮಗ್‌ಫಿರತ್‌ಗಳ ಚಾದರದೊಳಗೆ ಇರಿಸುವವನಾಗಲಿ. ನಾವು ಈ ತಿಂಗಳಿಂದ ಅನುಗ್ರಹ ಗಳಿಸುವವರನ್ನಾಗಿ ಅಲ್ಲಾಹನು ಮಾಡಲಿ. ಈ ದಿನಗಳಲ್ಲಿ ವಿಶಿಷ್ಟವಾಗಿ ಜಮಾಅತ್‌ಗೋಸ್ಕರ ಪ್ರಾರ್ಥಿಸಿರಿ. ಅಹ್ಮದಿಯ್ಯತಿನ ಶತ್ರುಗಳ ಕೆಡುಕುಗಳನ್ನು ಅಲ್ಲಾಹನು ಅವರ ಮೇಲೆಯೇ ಮರಳಿಸಲಿ. ಮುಸ್ಲಿಮ್ ಸಮುದಾಯಕ್ಕೋಸ್ಕರ ಸಹ ಪ್ರಾರ್ಥಿಸಿರಿ. ಅಲ್ಲಾಹನು ಅವರನ್ನು ದೌರ್ಜನ್ಯದಿಂದ ಮತ್ತು ಪರಸ್ಪರ ಕತ್ತುಗಳನ್ನು ಕತ್ತರಿಸುವುದರಿಂದ ತಡೆಯುವವನಾಗಲಿ. ಈ ಕಾಲಘಟ್ಟದ ಇಮಾಮರನ್ನು ಅವರು ಅಂಗೀಕರಿಸುವವರಾಗಲಿ. ಲೋಕದ ಪರಿಸ್ಥಿತಿಯ ಸುಧಾರಣೆಗಾಗಿ ಪ್ರಾರ್ಥಿಸಿರಿ. ಬಹಳ ವೇಗವಾಗಿ ಬಹಳ ದೊಡ್ಡ ವಿನಾಶದ ಕಡೆಗೆ ಲೋಕ ಸಾಗುತ್ತಿದೆ. ಅಲ್ಲಾಹನು ಲೋಕಕ್ಕೆ ವಿವೇಕ ದಯಪಾಲಿಸಲಿ. ಅದು ಸೃಷ್ಟಿಕರ್ತನನ್ನು ಗುರುತಿಸಿ ಈ ವಿನಾಶದಿಂದ ರಕ್ಷಣೆ ಪಡೆಯಲಿ – ಆಮೀನ್.

## Statement about ownership and other particulars about the Newspaper Yugarashmi Quarterly (Form IV see Rule 8)

| | | |
|---|---|---|
| 1. | Place of publication | : Mangalore |
| 2. | Period of its publication | : Quarterly |
| 3. | Printer's Name | : Muhammad Yusuf |
| | Whether citizen of india | : Yes |
| | Address | : 10-23-1008/1, 1st Floor, Ansari Road, Bunder, Mangalore – 575001 |
| 4. | Publisher's Name | : Muhammad Yusuf |
| | Whether citizen of india | : Yes |
| | Address | : 10-23-1008/1, 1st Floor, Ansari Road, Bunder, Mangalore – 575001 |
| 5. | Editor's Name | : Muhammad Yusuf |
| | Whether citizen of india | : Yes |
| | Address | : 10-23-1008/1, 1st Floor, Ansari Road, Bunder, Mangalore - 575001 |
| 6. | Name and address of individuals who own the newspaper and partners or shareholders holding more than one percent of the Capital | : Jamath Ahmadiyya, "Darussalam", Near Railway Level Crossing, Pandeshwar, Mangalore – 575001 |

I, Muhammad Yusuf hereby declare that the particulars given above are true to the best of my knowledge and belief.

Sd/-
Muhammad Yusuf

Date : 1-5-2020

# ದೇವಾಸ್ತಿತ್ವದ ಹತ್ತು ಸಾಕ್ಷ್ಯಾಧಾರಗಳು – 2

* ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ (ಅಹ್ಮದಿಯಾ ಮುಸ್ಲಿಮ್ ಜಮಾಅತಿನ ದ್ವಿತೀಯ ಖಲೀಫರು)

## ಐದನೆಯ ಸಾಕ್ಷ್ಯಾಧಾರ

ದೇವಾಸ್ತಿತ್ವದ ಬಗ್ಗೆ ಪವಿತ್ರ ಖುರ್‌ಆನ್ ಮುಂದಿರಿಸುವ ಐದನೆಯ ಸಾಕ್ಷ್ಯಾಧಾರ ಮೇಲಿನ ಸಾಕ್ಷ್ಯಾಧಾರದ ಹಾಗೆ ಇದೆಯಾದರೂ ಇದು ಹೆಚ್ಚು ಬಲವತ್ತಾದುದಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **ತಬಾರಕಲ್ಲಧೀ ಬಿಯದಿಹಿಲ್ ಮುಲ್‌ಕು ವ ಹುವ ಅಲಾ ಕುಲ್ಲಿ ಶೈಇನ್ ಖದೀರ್. ಅಲ್ಲಧೀ ಖಲಖಲ್ ಮೌತ ವಲ್ ಹಯಾತ ಲಿಯಬ್‌ಲುವಕುಮ್ ಅಯ್ಯುಕುಮ್ ಅಹ್‌ಸನು ಅಮಲಾ ವ ಹೂವಲ್ ಅಝೀಝುಲ್ ಗ್‌ಫೂರ್. ಅಲ್ಲಧೀ ಖಲಖ ಸಬ್‌ಅ ಸಮಾವತಿನ್ ತಿಬಾಖಾ ಮಾ ತರಾ ಫೀ ಖಲ್‌ಖಿರ್ರಹ್ಮಾನಿ ಮಿನ್ ತಫಾಉತಿನ್ ಫರ್‌ಜಿಇಲ್ ಬಸರ ಹಲ್ ತರಾ ಮಿನ್ ಫುತೂರಿನ್. ಸುಮ್ಮರ್‌ಜಿಇಲ್ ಬಸರ ಕರ್‍ರತೈನಿ ಯನ್‌ಖಲಿಬ್ ಇಲೈಕಲ್ ಬಸರು ಖಾಸಿಅನ್ ವ ಹುವ ಹಸೀರ್.**

"ಯಾರ ಕೈಯಲ್ಲಿ ಪ್ರಭುತ್ವವಿದೆಯೋ ಅವನು ಅನುಗ್ರಹಪೂರ್ಣನು. (ತಾನಿಚ್ಛಿಸುವ) ಎಲ್ಲ ಕಾರ್ಯಗಳಲ್ಲಿ ಅವನು ಸರ್ವ ಸಾಮರ್ಥ್ಯವಂತನಾಗಿದ್ದಾನೆ. ನಿಮ್ಮ ಪೈಕಿ ಕೃತ್ಯ ನಿರ್ವಹಣೆಯಲ್ಲಿ ಯಾರು ಉತ್ತಮರೆಂದು ಪರೀಕ್ಷಿಸಲಿಕ್ಕೋಸ್ಕರ ಅವನು ಮರಣವನ್ನೂ ಜೀವನವನ್ನೂ ಸೃಷ್ಟಿಸಿದ್ದಾನೆ. ಅವನು ಪ್ರತಾಪವಂತನೂ ಕ್ಷಮಾಶೀಲನೂ ಆಗಿದ್ದಾನೆ. ಅವನು ಏಳು ಆಕಾಶಗಳನ್ನು ಕ್ರಮಬದ್ಧವಾಗಿ ಸೃಷ್ಟಿಸಿರುವನು. ಪರಮ ದಯಾವಂತನ (ಅಲ್ಲಾಹನ) ಸೃಷ್ಟಿಕಾರ್ಯದಲ್ಲಿ ಯಾವ ಅಸಂಬದ್ಧತೆಯನ್ನೂ ನೀನು ಕಾಣಲಾರೆ. ನೀನು ಪುನಃ ನೋಡು – ಏನಾದರೂ ಲೋಪದೋಷವಿದೆಯೇ? ಪುನಃ ಎರಡು ಸಲ ದೃಷ್ಟಿ ಹರಿಸಿ ನೋಡು. ದೃಷ್ಟಿ ಸೋತು, ಬಳಲಿ ನಿನ್ನೆಡೆಗೆಯೇ ಮರಳುವುದು." (67: 2–5).

ಈ ವಿಶ್ವ ಆಕಸ್ಮಿಕವಾಗಿ ಉಂಟಾಯಿತೆಂದು ಕೆಲವರು ಹೇಳುತ್ತಾರೆ. ಆಕಸ್ಮಿಕವಾಗಿ ಪದಾರ್ಥಗಳು ಮಿಶ್ರವಾದ ಕಾರಣ ಇವೆಲ್ಲವೂ ಉಂಟಾದುವು ಎಂದು ವಿಜ್ಞಾನದ ಮೂಲಕ ಸಾಬೀತುಗೊಳಿಸಲು ಪ್ರಯತ್ನಿಸುತ್ತಾರೆ. ಲೋಕವು ತಾನಾಗಿ ಅಸ್ತಿತ್ವಕ್ಕೆ ಬಂದು ಸ್ವತಃ ಚಲಿಸತೊಡಗಿತೆಂದು ಕೆಲವರು ಹೇಳುತ್ತಾರೆ. ಅದನ್ನು ಚಲಾಯಿಸುವವರು ಯಾರೂ ಇಲ್ಲ ಎಂದು ಹೇಳುತ್ತಾರೆ. ಅವರಿಗೆ ಉತ್ತರ ಅಲ್ಲಾಹನು ಮೇಲಿನ ಪವಿತ್ರ ಖುರ್‌ಆನ್ ವಚನಗಳಲ್ಲಿ ನೀಡುತ್ತಾನೆ. ಆಕಸ್ಮಿಕವಾಗಿ ಜೋಡನೆಯಾಗುವ ವಸ್ತುಗಳಲ್ಲಿ ಒಂದು ಕ್ರಮ ಬದ್ಧತೆ ಇರುವುದಿಲ್ಲ. ಅವುಗಳು ಪರಸ್ಪರ ಹೊಂದಿಕೆಯಾಗಲಾರವು. ವಿವಿಧ ಬಣ್ಣಗಳನ್ನು ಬಳಸಿ ಒಂದು ಚಿತ್ರ ತಯಾರಿಸಲ್ಪಡುತ್ತದೆ. ಆದರೆ ಕೆಲವು ಬಣ್ಣಗಳನ್ನು ಕಾಗದಕ್ಕೆ ಚೆಲ್ಲಿದರೆ ಒಂದು ಚಿತ್ರವಾಗುವುದೇ? ಇಟ್ಟಿಗೆಗಳಿಂದ ಮನೆ ನಿರ್ಮಿಸಲ್ಪಡುತ್ತದೆ. ಆದರೆ ಇಟ್ಟಿಗೆಗಳನ್ನು ಒಂದರ ಮೇಲೆ ಇನ್ನೊಂದರಂತೆ ಎಸೆದರೆ ಮನೆ ನಿರ್ಮಿಸಲ್ಪಡುವುದೇ? ಕೆಲವು ಘಟನೆಗಳು ಆಕಸ್ಮಿಕವಾಗಿ ಸಂಭವಿಸುತ್ತವೆ ಎಂದು ಊಹಿಸುವುದಾದರೂ ಜಾಗತಿಕ ವ್ಯವಸ್ಥೆಯನ್ನು ನೋಡಿ ಮನುಷ್ಯನು ಈ ವ್ಯವಸ್ಥೆ ತಾನಾಗಿಯೇ ಸೃಷ್ಟಿಸಲ್ಪಟ್ಟಿತೆಂದು ಹೇಳಲು ಸಾಧ್ಯವಿಲ್ಲ. ಭೂಮಿ ಆಕಸ್ಮಿಕವಾಗಿ ಉಂಟಾಯಿತು, ಮನುಷ್ಯನು ಆಕಸ್ಮಿಕವಾಗಿ ಉಂಟಾದವನು ಎಂದು ಒಪ್ಪಿಕೊಳ್ಳೋಣ – ಆದರೆ ಮನುಷ್ಯನ ದೇಹದ ಬಗ್ಗೆ ಯೋಚಿಸಿರಿ. ಇಂತಹ ಪರಿಪೂರ್ಣ ಸೃಷ್ಟಿ ತಾನಾಗಿ ಆಗಲು ಸಾಧ್ಯವೇ ? ಲೋಕದಲ್ಲಿ ಒಬ್ಬನ ಕರಕೌಶಲದ ಮೂಲಕ ಒಂದು ವಸ್ತುವಿನ ನಿರ್ಮಾಪಕನ ಬಗ್ಗೆ ತಿಳಿಯುತ್ತದೆ. ಒಂದು ಉತ್ತಮ ಚಿತ್ರವನ್ನು ನೋಡಿದಾಗ ಒಬ್ಬ ದೊಡ್ಡ ಚಿತ್ರಗಾರ ಚಿತ್ರಿಸಿದನೆಂದು ಕೂಡಲೆ ಯೋಚಿಸುತ್ತೇವೆ. ಒಂದು ಸುಂದರ ಬರಹವನ್ನು ಕಂಡಾಗ ಒಬ್ಬ ದೊಡ್ಡ ಬರಹಗಾರ ಬರೆದುದೆಂದು ಊಹಿಸುತ್ತೇವೆ. ನಮ್ಮ ಸಂಬಂಧ ವರ್ಧಿಸಿದ ಹಾಗೆ ನಿರ್ಮಾಪಕನ ಅಥವಾ ಬರೆಯುವವನ ಶ್ರೇಷ್ಠತೆ ಚೆನ್ನಾಗಿ ಮನವರಿಕೆ ಆಗುತ್ತದೆ. ಹೀಗಿರುವಾಗ ಇಷ್ಟು ಕ್ರಮಬದ್ಧವಾಗಿರುವ ಲೋಕ ತಾನಾಗಿಯೇ ಅಸ್ತಿತ್ವಕ್ಕೆ ಬಂತೆಂದು ಹೇಳುವುದು ಹೇಗೆ? ನೀವು ಈ ವಿಷಯದ ಬಗ್ಗೆ ಚಿಂತಿಸಿರಿ. ಮನುಷ್ಯನಿಗೆ ಅಭಿವೃದ್ಧಿ ಹೊಂದಲು ಸಾಧ್ಯವಾಗುವ ಶಕ್ತಿ ನೀಡಲಾಗಿದೆ. ಅವನಿಗೆ ತನ್ನ ನಿರ್ಧಾರಗಳನ್ನು ಈಡೇರಿಸಲು ಬುದ್ಧಿ ನೀಡಲಾಗಿದೆ ಮತ್ತು ಅವನ ಶರೀರ ರಚನೆಯನ್ನು ಸಹ ಹಾಗೆ ಮಾಡಲಾಗಿದೆ. ಮನುಷ್ಯನು ದುಡಿದು ಆಹಾರ ಸಂಪಾದಿಸಬೇಕಾದ ಕಾರಣ ಅವನಿಗೆ ನಡೆದಾಡಿ ಆಹಾರ ಸಂಪಾದನೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ಮರಗಳು ಭೂಮಿಯಲ್ಲಿ ಸ್ಥಿರವಾಗಿ ನಿಲ್ಲಿಸಿದುದರಿಂದ ಅವುಗಳಿಗೆ ಆಹಾರ ಸಂಪಾದಿಸಲು ಬೇರುಗಳನ್ನು ನೀಡಲಾಗಿದೆ. ಸಿಂಹದ ಆಹಾರ ಮಾಂಸವಾದುದರಿಂದ ಅದಕ್ಕೆ ಬೇಟೆಯಾಡಲು ಪಂಜ ನೀಡಲಾಗಿದೆ. ಕುದುರೆ ಮತ್ತು ಪಶುಗಳ ಆಹಾರ ಹುಲ್ಲು ಆಗಿ ನಿಗದಿಪಡಿಸಿರುವುದರಿಂದ ಕತ್ತು ಚಾಚಿ ಹುಲ್ಲು ತಿನ್ನುವ ಹಾಗೆ ಅವುಗಳ ದೇಹರಚನೆ ಇದೆ. ಒಂಟೆಗಳಿಗೆ ಮರಗಳ ಎಲೆಗಳು ಆಹಾರವಾಗಿರುವುದರಿಂದ ಅವುಗಳ ಕೊರಳನ್ನು ಎತ್ತರಕ್ಕೆ ತಲಪುವಂತೆ ಮಾಡಲಾಗಿದೆ. ಇವುಗಳೆಲ್ಲ ಆಕಸ್ಮಿಕವಾಗಿ ಸಂಭವಿಸಿದುವೇ? ಒಂಟೆಗೆ ಉದ್ದ ಕೊರಳು, ಸಿಂಹಕ್ಕೆ ತಗ್ಗುವ ಕೊರಳು ಮತ್ತು ಮರಕ್ಕೆ ಬೇರು, ಮನುಷ್ಯನಿಗೆ ಕಾಲುಗಳು ಇವುಗಳೆಲ್ಲ ತಾನಾಗಿಯೇ ಸಂಭವಿಸಿದುವೇ? ಇದರಲ್ಲಿ ಎಷ್ಟು ಸುವ್ಯವಸ್ಥೆ ಕಂಡು ಬರುತ್ತದೆ! ಮನುಷ್ಯನಿಗೆ ಶ್ವಾಸಕೋಶ ನೀಡಿ ಅದರೊಂದಿಗೆ ವಾಯು ವ್ಯವಸ್ಥೆ ಸಹ ಮಾಡಲಾಗಿದೆ. ನೀರನ್ನು ಮನುಷ್ಯನಿಗೆ ಜೀವದಾಯಕವನ್ನಾಗಿ ಮಾಡಿ ಅದನ್ನು ಸೂರ್ಯನ ಮೂಲಕ ಮೇಘಗಳಲ್ಲಿ ಸೃಷ್ಟಿಸಿ ಮಳೆ ಸುರಿಸಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಕಣ್ಣನ್ನು ಕಾಣುವಂತೆ ಮಾಡಲು ಸೂರ್ಯನ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಕಿವಿ ನೀಡಿರುವಾಗ ಸುಶ್ರಾವ್ಯ ಧ್ವನಿಯನ್ನು ಸಹ ಸೃಷ್ಟಿಸಲಾಗಿದೆ. ನಾಲಗೆ ನೀಡಿರುವಾಗ ರುಚಿಕರವಾದ ಪದಾರ್ಥಗಳನ್ನೂ ಸೃಷ್ಟಿಸಲಾಗಿದೆ. ಮೂಗು ನೀಡಿರುವಾಗ ಸುವಾಸನೆಯನ್ನೂ ಸೃಷ್ಟಿಸಲಾಗಿದೆ. ಆಕಸ್ಮಿಕವಾಗಿ ಶ್ವಾಸಕೋಶ ನಿರ್ಮಾಣಗೊಂಡರೆ ಅದರೊಂದಿಗೆ ವಾಯು ಸೃಷ್ಟಿಸಲ್ಪಟ್ಟದ್ದು ಹೇಗೆ? ಕಣ್ಣು ಆಕಸ್ಮಿಕವಾಗಿ ಸೃಷ್ಟಿಸಲ್ಪಟ್ಟಿದ್ದರೆ ಅದು ಕಾಣುವಂತೆ ಮಾಡಲು ಕೋಟಿಗಟ್ಟಲೆ ಮೈಲು ದೂರದಲ್ಲಿ ಸೂರ್ಯನ ಸೃಷ್ಟಿಯಾದುದು ಹೇಗೆ? ಕಿವಿ ಆಕಸ್ಮಿಕವಾಗಿ ಸೃಷ್ಟಿಸಲ್ಪಟ್ಟಿದ್ದರೆ ಅದು ಕೇಳುವಂತೆ ಧ್ವನಿಯನ್ನು ಸೃಷ್ಟಿಸಿದುದು ಯಾರು? ಹಿಮಾಚ್ಛಾಧಿತ ದೇಶಗಳಲ್ಲಿ ನಾಯಿಗಳು ಮತ್ತು ಚಮರಿ ಮೃಗಗಳು ಆಕಸ್ಮಿಕವಾಗಿ ಸೃಷ್ಟಿಸಲ್ಪಟ್ಟಿದ್ದರೆ ಅವು ಚಳಿಯಿಂದ ರಕ್ಷಣೆ ಪಡೆಯಲು ಅವುಗಳ ರೋಮಗಳು ಉದ್ದವಾಗಿ ಬೆಳೆಯುವಂತೆ ಮಾಡಿದವರು ಯಾರು? ಆಕಸ್ಮಿಕವಾಗಿ

ಸಾವಿರಾರು ರೋಗಗಳು ತಲೆದೋರಿದುವು ಮತ್ತು ಅವುಗಳ ಚಿಕಿತ್ಸೆಗೋಸ್ಕರ ಗಿಡಮೂಲಿಕೆಗಳು ಸೃಷ್ಟಿಸಲ್ಪಟ್ಟದ್ದು ಆಕಸ್ಮಿಕವಾಗಿಯೇ? ಒಂದು ಗಿಡವನ್ನು ಸ್ಪರ್ಶಿಸುವಾಗ ತುರಿಕೆ ಉಂಟಾಗುವುದು ಆಕಸ್ಮಿಕವಾಗಿದ್ದರೆ ಅದರ ಚಿಕಿತ್ಸೆಗೆ ಪಾಲಕ್ ಗಿಡ ಸೃಷ್ಟಿಸಿದುದು ಆಕಸ್ಮಿಕವೇ? ನಾಸ್ತಿಕರ ಆಕಸ್ಮಿಕವೆಂಬ ಸಿದ್ಧಾಂತ ವಿಚಿತ್ರವಾಗಿದೆ.

ಯಾವ ವಸ್ತುಗಳಿಗೆ ಮೃತ್ಯು ವಿಧಿಸಲಾಗಿದೆಯೋ ಅವುಗಳಲ್ಲಿ ಜನನ ವ್ಯವಸ್ಥೆಯನ್ನೂ ಮಾಡಲಾಗಿದೆ. ಯಾವ ವಸ್ತುಗಳಿಗೆ ಮೃತ್ಯು ವಿಧಿಸಲಾಗಿಲ್ಲವೋ ಅವುಗಳಲ್ಲಿ ಜನನ ವ್ಯವಸ್ಥೆ ಸಹ ಇರಿಸಲಾಗಿಲ್ಲ. ಮನುಷ್ಯನು ಹುಟ್ಟುತ್ತಲೇ ಇದ್ದು ಮೃತನಾಗದೆ ಇರುತ್ತಿದ್ದರೆ ಕೆಲವೇ ವರ್ಷಗಳಲ್ಲಿ ಲೋಕ ವ್ಯವಸ್ಥೆ ಕೊನೆಗೊಳ್ಳುತ್ತಿತ್ತು. ಆದುದರಿಂದ ಮನುಷ್ಯನನ್ನು ಜನನ ಮರಣ ವ್ಯವಸ್ಥೆಗೆ ಒಳಪಡಿಸಲಾಗಿದೆ. ಆದರೆ ಸೂರ್ಯ, ಚಂದ್ರ, ಭೂಮಿ ನಾಶವಾಗುವುದಿಲ್ಲವಾದುದರಿಂದ ಹೊಸದು ಹುಟ್ಟುವುದೂ ಇಲ್ಲ. ಭೂಮಿ ಮತ್ತು ಸೂರ್ಯನಲ್ಲಿ ಗುರುತ್ವಾಕರ್ಷಣ ಶಕ್ತಿ ಇರುವುದರಿಂದ ಅವು ಪರಸ್ಪರ ಡಿಕ್ಕಿ ಹೊಡೆಯದ ಹಾಗೆ ಅವುಗಳನ್ನು ಬಹಳ ದೂರ ದೂರವಾಗಿ ಇರಿಸಲಾಗಿದೆ ಎನ್ನುವುದು ಆಶ್ಚರ್ಯಕರವಾದ ವ್ಯವಸ್ಥೆ ಅಲ್ಲವೇ? ಇವುಗಳೆಲ್ಲ ಒಬ್ಬ ಸೃಷ್ಟಿಕರ್ತನ ಅಸ್ತಿತ್ವವನ್ನು ಸೂಚಿಸುವುದಿಲ್ಲವೇ? ಅವನು ಎಲ್ಲವನ್ನು ತಿಳಿದವನಾಗಿದ್ದಾನೆ. ಅವನ ಜ್ಞಾನ ಅಪರಿಮಿತವಾಗಿದೆ. ಅವನು ರೂಪಿಸಿದ ನಿಯಮಗಳು ಬಲಿಷ್ಠವೂ ವೈರುಧ್ಯವಿಲ್ಲದವೂ ಆಗಿವೆ. ಅವುಗಳಲ್ಲಿ ಯಾವುದೇ ಕುಂದುಕೊರತೆಗಳಿಲ್ಲ. ನನಗೆ ನನ್ನ ಕೈ ಬೆರಳುಗಳು ಸಹ ಸೃಷ್ಟಿಕರ್ತನ ಅಸ್ತಿತ್ವಕ್ಕೆ ಸಾಕ್ಷ್ಯಾಧಾರವಾಗಿವೆ. ನನಗೆ ಸಿಂಹದ ಹಾಗೆ ಪಂಜವನ್ನು ನೀಡಿದ್ದರೆ ನನಗೆ ಬರೆಯಲು ಸಾಧ್ಯವಿತ್ತೇ? ಸಿಂಹಕ್ಕೆ ಪಂಜ ನೀಡಿದರೂ ಜ್ಞಾನ ನೀಡಿಲ್ಲ. ಆದರೆ ನನಗೆ ಜ್ಞಾನ ನೀಡಿ ಬರೆಯಲು ಬೆರಳುಗಳನ್ನೂ ನೀಡಲಾಗಿದೆ.

ದೊರೆಗಳ ಸರಕಾರಗಳಲ್ಲಿ ಸಾವಿರಾರು ನಿಷ್ಣಾತರು ಸರಕಾರದ ವ್ಯವಸ್ಥೆಯ ಸುಧಾರಣೆಗೆ ರಾತ್ರಿ ಹಗಲು ಕಾರ್ಯನಿರತರಾಗುತ್ತಾರೆ. ಹೀಗಿದ್ದರೂ ಅವರಿಂದ ಸಂಭವಿಸುವ ತಪ್ಪುಗಳಿಂದ ಸರಕಾರಕ್ಕೆ ಹಾನಿ ಉಂಟಾಗುತ್ತದೆ. ಆದರೆ ಲೋಕದ ವ್ಯವಸ್ಥೆ ಆಕಸ್ಮಿಕವಾಗಿ ಸಂಭವಿಸಿದುದೆಂದು ಹೇಳುವ ಜನರು ಈ ಆಕಸ್ಮಿಕ ವ್ಯವಸ್ಥೆಯಲ್ಲಿ ಯಾವುದೇ ತಪ್ಪಿಲ್ಲದಿರುವುದು ಕಾಣುತ್ತಾರೆ. ವಾಸ್ತವಿಕ ಸಂಗತಿ ಏನೆಂದರೆ ಈ ಎಲ್ಲ ಸೃಷ್ಟಿ ವ್ಯವಸ್ಥೆಯನ್ನು ಸೃಷ್ಟಿಸಿದ ಸೃಷ್ಟಿಕರ್ತನೊಬ್ಬನಿದ್ದಾನೆ. ಅವನು ವಿಶಾಲ ವಿಶ್ವದ ಒಡೆಯನಾಗಿದ್ದಾನೆ. ಅವನು ಶಕ್ತಿಶಾಲಿಯಾಗಿದ್ದಾನೆ. ಅವನ ಮೂಲಕವೇ ಈ ವಿಶ್ವ ವ್ಯವಸ್ಥೆ ಜಾರಿಯಲ್ಲಿದೆ. ನೀವು ವಿಶ್ವದ ಯಾವ ಕಡೆಗೆ ದೃಷ್ಟಿ ಹಾಯಿಸಿದರೂ ಪವಿತ್ರ ಖುರ್‌ಆನಿನಲ್ಲಿ ಹೇಳಿದ ಹಾಗೆ ನೀವು ಯಾವುದೇ ಕುಂದುಕೊರತೆ ಕಾಣದೆ ಸೋತು ಬಳಲುವಿರಿ. ಎಲ್ಲದರಲ್ಲೂ ಒಂದು ಸುವ್ಯವಸ್ಥೆ ಕಾಣುವಿರಿ. ಒಳ್ಳೆಯವರು ಉತ್ತಮಗತಿ ಕಾಣುತ್ತಾರೆ. ಕೆಟ್ಟವರು ಶಿಕ್ಷೆ ಪಡೆಯುತ್ತಾರೆ. ಪ್ರತಿಯೊಂದು ವಸ್ತು ತನಗೆ ವಹಿಸಿಕೊಟ್ಟ ಕೆಲಸ ಮಾಡುತ್ತಿದೆ. ಒಂದು ಕ್ಷಣಕಾಲ ಕೂಡ ಕರ್ತವ್ಯ ಚ್ಯುತಿ ಮಾಡುವುದಿಲ್ಲ. ಇದು ಬಹಳ ವಿಶಾಲವಾಗಿ ಪ್ರತಿಪಾದಿಸಬೇಕಾದ ವಿಷಯವಾಗಿದೆ. ನಾನು ಇಲ್ಲಿ ಮುಕ್ತಾಯಗೊಳಿಸುತ್ತೇನೆ. ಬುದ್ಧಿಶಾಲಿಗೆ ಸೂಚನೆ ಸಾಕಾಗುತ್ತದೆ.

## ಆರನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನಿನಿಂದ ತಿಳಿಯುವುದೇನೆಂದರೆ, ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವವರು ಯಾವಾಗಲೂ ಕೀಳು ಅವಸ್ಥೆಗೆ ತಲಪುತ್ತಾರೆ. ಇದು ಅವರು ಸುಳ್ಳುಗಾರರೆಂಬುದಕ್ಕೆ ಸಾಕ್ಷ್ಯವಾಗಿದೆ. ಅಲ್ಲಾಹನನ್ನು ನಂಬುವವರಿಗೆ ಯಾವಾಗಲೂ ಅಲ್ಲಾಹನು ಜಯ ನೀಡುತ್ತಾನೆ. ಅವರು ತಮ್ಮ ವಿರೋಧಿಗಳ ವಿರುದ್ಧ ಜಯ ಗಳಿಸುತ್ತಾರೆ. ದೇವನಿಲ್ಲದಿದ್ದರೆ ಈ ಸಹಾಯ ಮತ್ತು ಬೆಂಬಲ ದೊರಕುವುದು ಹೇಗೆ? ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ – ಫಿರ್‌ಔನ್ ಹಝ್ರತ್ ಮೂಸಾ ಅಲೈಹಿಸ್ಸಲಾಮರೊಂದಿಗೆ ಹೇಳಿದನು: **ಫಖಾಲ ಅನ ರಬ್ಬುಕುಮುಲ್ ಅಅ್‌ಲಾ ಫ ಅಖಧಹುಲ್ಲಾಹು ನಕಾಲಲ್ ಆಖಿರ ವಲ್ ಊಲಾ.** "ನಾನೇ ಮಹೋನ್ನತನಾದ ನಿಮ್ಮ ಪ್ರಭು ಎಂದು ಅವನು (ಫಿರ್‌ಔನ್) ಹೇಳಿದನು. ಆದುದರಿಂದ ಅಲ್ಲಾಹನು ಅವನನ್ನು ಹಿಡಿದು ಪರಲೋಕದ ಮತ್ತು ಇಹಲೋಕದ ಶಿಕ್ಷೆಗೆ ಗುರಿಪಡಿಸಿದನು." (79 : 25,26).

ಹಝ್ರತ್ ಮೂಸಾ(ಅ) ಫಿರ್‌ಔನ್‌ನೊಂದಿಗೆ ಅಲ್ಲಾಹನನ್ನು ಅನುಸರಿಸಲು ಹೇಳಿದಾಗ – ಅವನು ಅಹಂಭಾವದಿಂದ ಹೇಳಿದನು: "ನಾನೇ ದೇವನು." ಆದುದರಿಂದ ಅಲ್ಲಾಹನು ಅವನನ್ನು ಇಹ–ಪರ ಲೋಕಗಳಲ್ಲಿ ಅಪಮಾನಕ್ಕೀಡು ಮಾಡಿದನು. ಫಿರ್‌ಔನನ ಘಟನೆ ಒಂದು ಸ್ಪಷ್ಟ ಉದಾಹರಣೆಯಾಗಿದೆ – ದೇವನು ತನ್ನನ್ನು ನಿರಾಕರಿಸುವವರನ್ನು ಹೇಗೆ ಶಿಕ್ಷಿಸುತ್ತಾನೆಂದು. ಲೋಕದಲ್ಲಿ ನಿರೀಶ್ವರವಾದಿಗಳ ರಾಜ್ಯಭಾರ ಎಂದೂ ಸ್ಥಾಪಿಸಲ್ಪಡಲಿಲ್ಲ. ಲೋಕದ ಜಯಶಾಲಿಗಳು, ಚರಿತ್ರೆಯನ್ನು ನಿರ್ಮಿಸಿದವರು ದೇವನನ್ನು ನಂಬುವವರೇ ಆಗಿದ್ದಾರೆ. ಅವರು ಜನಾಂಗದ ದೃಷ್ಟಿಯಲ್ಲಿಯೂ ಹೀನೈಸಲ್ಪಡದುದು ಅರ್ಥಗರ್ಭಿತವಾಗಿಲ್ಲವೇ?

## ಏಳನೆಯ ಸಾಕ್ಷ್ಯಾಧಾರ

ಅಲ್ಲಾಹನ ಅಸ್ತಿತ್ವವನ್ನು ನಂಬುವವರು, ನೈಜ ವಿಶ್ವಾಸ ಹೊಂದಿರುವವರು ಯಾವಾಗಲೂ ಜಯಶಾಲಿಗಳಾಗುತ್ತಾರೆ. ಜನರು ಅವರನ್ನು ವಿರೋಧಿಸುತ್ತಾ ಇದ್ದರೂ ಅವರ ಮೇಲೆ ವಿಪತ್ತು ಬಂದೆರಗುವುದಿಲ್ಲ. ದೇವನ ಅಸ್ತಿತ್ವವನ್ನು ಪ್ರತಿಪಾದಿಸುವವರು ಪ್ರತಿಯೊಂದು ದೇಶದಲ್ಲಿ ಜನಿಸಿದರು. ಅವರನ್ನು ಬಹಳ ಜನರು ವಿರೋಧಿಸಿದರು. ಆದರೆ ಅವರ ಕೆಲಸ ತಡೆಯಲು ಸಾಧ್ಯವಾಗಲಿಲ್ಲ. ಶ್ರೀರಾಮರಿಗೆ ವನವಾಸದ ಶಿಕ್ಷೆ ನೀಡಿದವರಿಗೆ ಲಭಿಸಿದ ಸುಖವಾದರೂ ಏನು? ರಾವಣನು ಅನುಭವಿಸಿದ ಸುಖವೇನು? ಶ್ರೀರಾಮರ ಹೆಸರು ಸಾವಿರಾರು ವರ್ಷ ಜೀವಂತವಾಗಿಲ್ಲವೇ? ರಾವಣ ಯಾವಾಗಲೂ ಅಪಕೀರ್ತಿಗೆ ಗುರಿಯಾಗಲಿಲ್ಲವೇ? ಶ್ರೀಕೃಷ್ಣ ನೀಡಿದ ಉಪದೇಶವನ್ನು ತಿರಸ್ಕರಿಸಿ ಕೌರವರು ಗಳಿಸಿದ ಲಾಭವಾದರೂ ಏನು? ಅವರು ಕುರುಕ್ಷೇತ್ರ ರಣಾಂಗಣದಲ್ಲಿ ನಾಶವಾಗಲಿಲ್ಲವೇ? ಬನೀ ಇಸ್ರಾಯೇಲ್ ಜನರಿಂದ ಇಟ್ಟಿಗೆ ಮಾಡಿಸುತ್ತಿದ್ದ ಫಿರ್‌ಔನ್ ಎಂಬ ದೊರೆ ಹಝ್ರತ್ ಮೂಸಾ ಅಲೈಹಿಸ್ಸಲಾಮರಂತಹ ಬಲಹೀನ ಮನುಷ್ಯನನ್ನು ವಿರೋಧಿಸಿದನು. ಆದರೆ ಅವರಿಗೆ ಹಾನಿ ಉಂಟುಮಾಡಲು ಅವನಿಗೆ ಸಾಧ್ಯವಾಯಿತೇ? ಅವನು ನೀರಿನಲ್ಲಿ ಮುಳುಗಿದನು. ಹಝ್ರತ್ ಮೂಸಾ(ಅ) ದೊರೆಯಾದರು. ಹಝ್ರತ್ ಈಸಾ ಮಸೀಹ್‌ರನ್ನು(ಅ) ಲೋಕವು ವಿರೋಧಿಸಿದುದು ಪ್ರಕಟವಾಗಿದೆ. ಅವರ ಸಮುದಾಯ ಗಳಿಸಿದ ಅಭಿವೃದ್ಧಿ ರಹಸ್ಯವಾದುದೇನೂ ಅಲ್ಲ. ಅವರ ಶತ್ರುಗಳು ನಾಶವಾದರು; ಅವರ ಸೇವಕರು ದೇಶಗಳ ದೊರೆಗಳಾದರು. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲ್(ಸ) ಲೋಕದಲ್ಲಿ ಅಲ್ಲಾಹನ ಪರಿಶುದ್ಧ ನಾಮ ಹರಡುವವರಾಗಿದ್ದರು. ಅವರ ಬಗ್ಗೆ

ಯುರೋಪಿನ ಒಬ್ಬ ಲೇಖಕ ಹೇಳುತ್ತಾರೆ: ಅವರಿಗೆ ದೇವನ ಹುಚ್ಚು ಹಿಡಿದಿತ್ತು. (ನಊಧುಬಿಲ್ಲಾಹ್ – ಅಲ್ಲಾಹನ ಅಭಯ ಯಾಚಿಸುತ್ತೇವೆ.) ಅವರು ಯಾವಾಗಲೂ ಅಲ್ಲಾಹ್, ಅಲ್ಲಾಹ್ ಎಂದು ಹೇಳುತ್ತಾ ಇದ್ದರು.

ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಅವರ ಸ್ವಂತ ಕೋಮಿನ ಜನರೂ ಅನ್ಯರೂ ವಿರೋಧಿಸಿದರು. ಹೀಗಿದ್ದರೂ ಅವರಿಗೆ ಲೋಕದ ಖಜಾನೆಗಳನ್ನು ಜಯಿಸಲು ಸಾಧ್ಯವಾಗಲಿಲ್ಲವೇ? ದೇವನಿಲ್ಲವಾದರೆ ಅವರಿಗೆ ಸಹಾಯ ಮಾಡಿದವರು ಯಾರು? ಇವುಗಳೆಲ್ಲ ಆಕಸ್ಮಿಕವಾಗಿರಲಾರದು. ಹಾಗಿದ್ದರೆ ಅಂತಹವನನ್ನು ಲೋಕವು ಕೆಳಕ್ಕೆ ತಳ್ಳುತ್ತಿತ್ತು. ಆದರೆ ಅಲ್ಲಾಹನ ಹೆಸರನ್ನು ಉನ್ನತಗೊಳಿಸಲು ಆಗಮಿಸಿದವನು ಯಾವಾಗಲೂ ಜಯಶಾಲಿಯಾದನು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **ಮನ್ ಯತವಲ್ಲಲ್ಲಾಹ ವ ರಸೂಲಹೂ ವಲ್ಲದೀನ ಆಮನೂ ಫ ಇನ್ನ ಹಿಝ್‌ಬಲ್ಲಾಹಿ ಹುಮುಲ್ ಗಾಲಿಬೂನ್**. **"**ಅಲ್ಲಾಹನನ್ನೂ ಅವನ ಸಂದೇಶವಾಹಕನನ್ನೂ ಸತ್ಯವಿಶ್ವಾಸಿಗಳನ್ನೂ ಯಾರು ಮಿತ್ರರನ್ನಾಗಿ ಮಾಡುತ್ತಾರೋ (ಅವರು ತಿಳಿದುಕೊಳ್ಳಲಿ) ಖಂಡಿತವಾಗಿಯೂ ಅಲ್ಲಾಹನ ಪಕ್ಷದವರೇ ವಿಜಯಿಗಳಾಗುತ್ತಾರೆ.**"** (5 : 57).

## ಎಂಟನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನಿನ ಮೂಲಕ ಅಲ್ಲಾಹನ ಅಸ್ತಿತ್ವದ ಬಗ್ಗೆ ದೊರಕುವ ಇನ್ನೊಂದು ಸಾಕ್ಷ್ಯಾಧಾರ ಅಲ್ಲಾಹನು ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ ಎನ್ನುವುದಾಗಿದೆ. ಅಲ್ಲಾಹನು ಪ್ರಾರ್ಥನೆಗಳನ್ನು ಸ್ವೀಕರಿಸುವ ದೃಶ್ಯಗಳು ಪ್ರತಿಯೊಂದು ಕಾಲಘಟ್ಟದಲ್ಲಿ ಕಂಡು ಬರುತ್ತವೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **ಇಧಾ ಸಅಲಕ ಇಬಾದೀ ಅನ್ನೀ ಫ ಇನ್ನೀ ಕರೀಬುನ್ ಉಜೀಬು ದಅ್‌ವತ ದಾಇ ಇಧಾ ದಆನಿ ಫಲ್ ಯಸ್ತಜೀಬೂ ಲೀ ವಲ್ ಯುಮಿನೂ ಬೀ ಲಅಲ್ಲಹುಮ್ ಯರ್‌ಶುದೂನ್**. **"**(ಹೇ ಪ್ರವಾದಿ) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು) – ಖಂಡಿತವಾಗಿಯೂ ನಾನು ಸಮೀಪದಲ್ಲಿಯೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥ ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.**"** (2 :187).

ಪ್ರಾರ್ಥನೆಗಳು ಅಲ್ಲಾಹನಿಂದ ಸ್ವೀಕರಿಸಲ್ಪಡುವ ಬಗ್ಗೆ ಯಾರಾದರೂ ಹೀಗೆ ಆಕ್ಷೇಪಿಸಬಹುದು: ಕೆಲವರ ಪ್ರಾರ್ಥನೆಗಳು ಮಾತ್ರ ಸ್ವೀಕರಿಸಲ್ಪಡುತ್ತವೆ. ಆದುದರಿಂದ ಅವುಗಳು ಆಕಸ್ಮಿಕವೆಂದು ಏಕೆ ಭಾವಿಸಬಾರದು? ಎಲ್ಲರ ಪ್ರಾರ್ಥನೆ ಸ್ವೀಕರಿಸಲ್ಪಡುವುದಾದರೆ ಮಾತ್ರ ದೇವನ ಅಸ್ತಿತ್ವವನ್ನು ಒಪ್ಪಬಹುದು. ಇದಕ್ಕೆ ಉತ್ತರವೇನೆಂದರೆ, ಪ್ರಾರ್ಥನೆಯ ಸ್ವೀಕಾರ ಸಹ ಒಂದು ದೈವಿಕ ದೃಷ್ಟಾಂತವಾಗಿದೆ. ವಾಗ್ದತ್ತ ಮಹ್‌ದೀ ಮಸೀಹ್ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ದೇವನ ಅಸ್ತಿತ್ವದ ಸಾಕ್ಷ್ಯಾಧಾರ ನೀಡುವ ಬಗ್ಗೆ ಹೀಗೆ ಹೇಳಿದ್ದರು: ಕಠಿಣ ರೋಗ ಬಾಧಿತರಾಗಿರುವ ಕೆಲವು ರೋಗಿಗಳನ್ನು ಜಮಾಯಿಸಬೇಕು. ಅವರನ್ನು ಎರಡು ಭಾಗಗಳಾಗಿ ವಿಂಗಡಿಸಬೇಕು. ಒಂದು ಭಾಗದ ರೋಗಿಗಳಿಗೆ ಡಾಕ್ಟರ್‌ಗಳು ಚಿಕಿತ್ಸೆ ನೀಡಲಿ. ಇನ್ನೊಂದು ಭಾಗದ ರೋಗಿಗಳ ಪರವಾಗಿ ನಾನು ಪ್ರಾರ್ಥಿಸುವೆನು. ಅನಂತರ ನೋಡಿರಿ ಯಾವ ಭಾಗದ ರೋಗಿಗಳು ಗುಣಹೊಂದುತ್ತಾರೆಂದು.

ಇಂತಹ ಪರೀಕ್ಷೆ ಬಗ್ಗೆ ಸಂಶಯಕ್ಕೆ ಆಸ್ಪದವೇನಿದೆ? ಹುಚ್ಚು ನಾಯಿ ಕಡಿದ ಒಬ್ಬ ಹುಡುಗನಿಗೆ ರೋಗಬಾಧಿಸಿದಾಗ ಕಸೌಲಿಯ ಚಿಕಿತ್ಸಾಲಯದವರು ಆ ರೋಗಕ್ಕೆ ಮದ್ದಿಲ್ಲವೆಂದು ಹೇಳಿದರು. ಅವನಿಗೋಸ್ಕರ ವಾಗ್ದತ್ತ ಮಹ್‌ದೀ ಮಸೀಹ್ ಪ್ರಾರ್ಥಿಸಿದಾಗ ಅವನಿಗೆ ರೋಗ ನಿವಾರಣೆ ಆಯಿತು. ಆದರೆ ಹುಚ್ಚು ನಾಯಿ ಕಚ್ಚಿದ ನಂತರ ಹುಚ್ಚು ಹಿಡಿದವರಿಗೆ ಚಿಕಿತ್ಸೆಯೇ ಇರುವುದಿಲ್ಲ. ಆದುದರಿಂದ ಪ್ರಾರ್ಥನೆಗಳು ಸ್ವೀಕರಿಸಲ್ಪಡುವುದು ಸಾಬೀತುಗೊಳಿಸುವುದೇನೆಂದರೆ ಪ್ರಾರ್ಥನೆ ಸ್ವೀಕರಿಸುವಂತಹ ಒಂದು ಅಸ್ತಿತ್ವವಿದೆ. ಪ್ರಾರ್ಥನೆಯ ಸ್ವೀಕಾರ ಒಂದು ನಿರ್ದಿಷ್ಟ ಕಾಲಘಟ್ಟಕ್ಕೆ ಸಂಬಂಧಿಸಿರುವುದಿಲ್ಲ. ಪ್ರತಿಯೊಂದು ಕಾಲದಲ್ಲಿ ಅದರ ಉದಾಹರಣೆ ಕಂಡು ಬರುತ್ತದೆ. ಹಿಂದಿನ ಕಾಲದಲ್ಲಿ ಪ್ರಾರ್ಥನೆಗಳು ಸ್ವೀಕರಿಸಲ್ಪಡುತ್ತಿದ್ದ ಹಾಗೆಯೇ ಈಗಲೂ ಸ್ವೀಕರಿಸಲ್ಪಡುತ್ತವೆ.

## ಒಂಬತ್ತನೆಯ ಸಾಕ್ಷ್ಯಾಧಾರ

ಅಲ್ಲಾಹನು ಅವತೀರ್ಣಗೊಳಿಸುವ ಸಂದೇಶವಾಣಿಗಳು ಇನ್ನೊಂದು ಸಾಕ್ಷ್ಯಾಧಾರವಾಗಿದೆ ಎಂದು ಪವಿತ್ರ ಖುರ್‌ಆನಿನಿಂದ ತಿಳಿಯುತ್ತದೆ. ಇದನ್ನು ನಾನು ಒಂಬತ್ತನೆಯ ಸಾಕ್ಷ್ಯಾಧಾರವೆಂದು ಪ್ರಸ್ತಾಪಿಸಿದ್ದರೂ ಇದು ಅತ್ಯಂತ ವೈಭವಶಾಲಿ ಸಾಕ್ಷ್ಯಾಧಾರವಾಗಿದೆ ಮತ್ತು ಅಲ್ಲಾಹನ ಅಸ್ತಿತ್ವವನ್ನು ದೃಢವಾಗಿ ಸಾಬೀತುಗೊಳಿಸುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ಯುಸಬ್ಬಿತುಲ್ಲಾಹುಲ್ಲದೀನ ಆಮನೂ ಬಿಲ್ ಖೌಲಿಸ್ಸಾಬಿತಿ ಫಿಲ್ ಹಯಾತಿದ್ದುನ್‌ಯಾ ವ ಫಿಲ್ ಆಖಿರತಿ**. **"**ಅಲ್ಲಾಹನು ಸತ್ಯ ವಿಶ್ವಾಸಿಗಳಿಗೆ ಐಹಿಕ ಜೀವಿತದಲ್ಲೂ ಪರಲೋಕದಲ್ಲೂ ಸ್ಥಿರವಾದ ವಚನ ಮೂಲಕ ಶಕ್ತಿ ನೀಡುತ್ತಾನೆ.**"** (14 : 28).

ಪ್ರತಿಯೊಂದು ಕಾಲಘಟ್ಟದಲ್ಲಿ ಅಲ್ಲಾಹನು ಬಹಳ ಜನರೊಂದಿಗೆ ಮಾತನಾಡುತ್ತಾ ಇರುತ್ತಾನೆ ಎನ್ನುವುದನ್ನು ನಿರಾಕರಿಸುವುದು ಹೇಗೆ ತಾನೆ ಸಾಧ್ಯ? ಪ್ರವಾದಿಗಳೊಂದಿಗೂ ಸಂದೇಶವಾಹಕರೊಂದಿಗೆ ಮಾತ್ರವಲ್ಲ ಅವನು ಸಂತರಾದವರೊಂದಿಗೂ ಮಾತನಾಡುತ್ತಾನೆ. ಕೆಲವು ಸಾರಿ ಅವನು ತನ್ನ ಬಡ ದಾಸನ ಮೇಲೆ ದಯೆದೋರಿ ಅವನನ್ನು ಸಮಾಧಾನಪಡಿಸಲು ಅವನೊಂದಿಗೆ ಮಾತನಾಡುತ್ತಾನೆ. ಅಲ್ಲಾಹನು ವಿನೀತನಾದ ನನ್ನೊಂದಿಗೆ ಸಹ ಮಾತನಾಡಿರುವವನು ಮತ್ತು ತನ್ನ ಅಸ್ತಿತ್ವವನ್ನು ಸಾಕ್ಷ್ಯಾಧಾರಗಳಿಂದ ಸಾಬೀತುಗೊಳಿಸಿರುವವನು. ಕೆಲವು ಸಾರಿ ಕೆಟ್ಟ ಅಂತರಂಗ ಹೊಂದಿದವರೊಂದಿಗೂ ಅವರಿಗೆ ತನ್ನ ಅಸ್ತಿತ್ವದ ಸಾಕ್ಷ್ಯಾಧಾರವಾಗಿ ಮಾತನಾಡುತ್ತಾನೆ. ಕೆಲವು ಸಾರಿ ಕಸ ಗುಡಿಸುವವರಿಗೂ ಚಮ್ಮಾರರಿಗೂ ನೃತ್ಯಗಾರ್ತಿಯರಿಗೂ ಸ್ವಪ್ನಗಳು ಮತ್ತು ವಾಣಿಗಳು ಲಭಿಸುತ್ತವೆ. ಒಬ್ಬ ಶಕ್ತಿಶಾಲಿ ಅಸ್ತಿತ್ವದ ಮೂಲಕ ಇವು ದೊರೆಯುತ್ತವೆ ಎನ್ನುವುದಕ್ಕೆ ಸಾಕ್ಷ್ಯವಾಗಿ ಕೆಲವು ಸಾರಿ ಭವಿಷ್ಯತ್ ಕಾಲದ ಘಟನೆಗಳು ಸೂಚಿಸಲ್ಪಡುತ್ತವೆ ಮತ್ತು ಅವು ಈಡೇರುತ್ತವೆ. ಅವು ಸಾಬೀತು ಪಡಿಸುವುದೇನೆಂದರೆ ಅವು ಯಾರಾದರೂ ಊಹಿಸಿ ಹೇಳಿದುದಲ್ಲ ಅಥವಾ ಅಜೀರ್ಣ ರೋಗಬಾಧೆಯ ಪರಿಣಾಮವಾಗಿ ಅಲ್ಲ ಎಂದು ಸಾಬೀತಾಗುತ್ತದೆ. ಕೆಲವು ಸಾರಿ ನೂರಾರು ವರ್ಷಗಳ ನಂತರದ ಸಮಾಚಾರಗಳು ನೀಡಲ್ಪಡುತ್ತವೆ. ಇದರಿಂದ ತಿಳಿಯುವುದೇನೆಂದರೆ

ಕನಸಿನಲ್ಲಿ ಕಂಡದ್ದು ಆಕಸ್ಮಿಕವಾಗಿ ಈಡೇರಿತು ಎಂದು ಭಾವಿಸಬಾರದು ಎಂದಾಗಿದೆ. ಕ್ರೈಸ್ತ ಜನಾಂಗಗಳ ಅಭಿವೃದ್ಧಿಯನ್ನು ಕಂಡು ಲೋಕವು ಆಶ್ಚರ್ಯಗೊಳ್ಳುತ್ತಿದೆ. ಇದರ ಬಗ್ಗೆ ಭವಿಷ್ಯವಾಣಿಗಳು ಪವಿತ್ರ ಖುರ್‌ಆನ್‌ನಲ್ಲೂ ತೌರಾತ್‌ನಲ್ಲೂ ಸ್ಪಷ್ಟವಾಗಿ ಪ್ರಸ್ತಾಪಿಸಲ್ಪಟ್ಟಿವೆ. ಮುಂದೆ ಸಂಭವಿಸಲಿರುವ ಅನೇಕ ವಿಷಯಗಳ ಭವಿಷ್ಯವಾಣಿಗಳಿವೆ. ಉದಾಹರಣೆಗೆ ಪವಿತ್ರ ಖುರ್‌ಆನಿನ ಈ ಕೆಳಗಿನ ಭವಿಷ್ಯವಾಣಿಯನ್ನು ನೋಡಿರಿ.

1. **ವ ಇಧಲ್ ಇಶಾರು ಉತ್ತಿಲತ್ –** "ಹತ್ತು ಮಾಸ ಗರ್ಭವುಳ್ಳ ಒಂಟೆಗಳು ತ್ಯಜಿಸಲ್ಪಡುವಾಗ" (81 : 5). ಇದರ ವ್ಯಾಖ್ಯಾನವಾಗಿ ಹದೀಸಿನಲ್ಲಿ ಹೀಗೆ ಬರೆಯಲಾಗಿದೆ: "ವಲಯುತ್‌ರಕನ್ನಲ್ ಖಿಲಾಸು ಫಲಾ ಯುಸ್‌ಆ ಅಲೈಹಾ" ಎಂದರೆ ಒಂಟೆಗಳನ್ನು ಉಪಯೋಗಿಸದ ಕಾಲವು ಬರುವುದು. ರೈಲು ಬಂಡಿಗಳು ಜಾರಿಗೊಂಡು ಈ ಭವಿಷ್ಯವಾಣಿ ಈಡೇರಿದೆ. ರೈಲು ಬಂಡಿಯ ಬಗ್ಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಹದೀಸುಗಳಲ್ಲಿ ಎಂತಹ ಸೂಚನೆಗಳಿವೆ ಎಂದರೆ ರೈಲು ಬಂಡಿಯ ಚಿತ್ರ ನಮ್ಮ ಕಣ್ಣಮುಂದೆ ಬರುತ್ತದೆ. ಉಗಿಯಿಂದ ಚಲಿಸುವ ಮತ್ತು ಹೊಗೆಯ ಪರ್ವತವನ್ನೇ ಹೊಂದಿರುವ ಸವಾರಿ ಸಾಧನದ ಬಗ್ಗೆ ಸೂಚಿಸಲಾಗಿದೆ. ಅದು ಭಾರ ಹೊರುವ ಕತ್ತೆಯ ಹಾಗಿರುವುದು, ಪ್ರಯಾಣ ಕಾಲದಲ್ಲಿ ಧ್ವನಿ ಹೊರಡಿಸುವುದು ಎಂದೆಲ್ಲ ಹೇಳಲಾಗಿದೆ.

2. ಇನ್ನೊಂದು ಭವಿಷ್ಯವಾಣಿ **"ವ ಇಧಸ್ಸುಹುಫು ನುಶಿರತ್" –** ಪುಸ್ತಕಗಳು ವಿಪುಲವಾಗಿ ಪ್ರಚರಿಸಲ್ಪಡುವಾಗ. (81:11). ಮುದ್ರಣಾಲಯಗಳ ಕಾರಣದಿಂದ ಪುಸ್ತಕಗಳು ಎಷ್ಟು ಹೆಚ್ಚು ಹೆಚ್ಚಾಗಿ ಪ್ರಕಟಿಸಲ್ಪಡುತ್ತಿವೆ ಎಂದರೆ ಅದರ ಬಗ್ಗೆ ವಿವರಣೆ ಅನಾವಶ್ಯಕವಾಗಿದೆ.

3. ಇನ್ನೊಂದು ಭವಿಷ್ಯವಾಣಿ **"ವ ಇಧನ್ನುಫೂಸು ಝುವ್ವಿಜತ್" –** ಜನರು ಒಂದು ಗೂಡಿಸಲ್ಪಡುವಾಗ. (81 :8). ಇದು ಲೋಕದಲ್ಲಿ ಜನರು ಪರಸ್ಪರ ಸಂಬಂಧ ಸ್ಥಾಪಿಸುವ ಬಗ್ಗೆ ಮತ್ತು ಸಂಪರ್ಕ ಸುಲಭವಾಗುವ ಬಗ್ಗೆ ಸೂಚಿಸುತ್ತದೆ.

4. ಇನ್ನೊಂದು ಭವಿಷ್ಯವಾಣಿ ಹೀಗಿದೆ : **"ಯೌಮತರ್‌ಜುಫು ರ್‍ರಾಜಿಫತು ತತ್‌ಬಉಹಾರ್‍ರಾದಿಫ"** ಕಂಪಿಸುವಂಥದ್ದು ತೀವ್ರವಾಗಿ ಕಂಪಿಸುವ ದಿನದಂದು ಬೆನ್ನಟ್ಟುವ ಇನ್ನೊಂದು (ಕಂಪನ) ಅದನ್ನು ಬೆನ್ನಟ್ಟುವುದು. (79 :7,8). ಅಸಾಧಾರಣ ಭೂಕಂಪಗಳು ಸಂಭವಿಸುವ ಬಗ್ಗೆ ಈ ವಚನಗಳಲ್ಲಿ ಸೂಚಿಸಲಾಗಿದೆ.

5. ಇನ್ನೊಂದು ಭವಿಷ್ಯವಾಣಿ ಹೀಗಿದೆ : **"ವ ಇನ್‌ಮ್ಮಿನ್ ಖರ್‌ಯತಿನ್ ಇಲ್ಲಾ ನಹ್‌ನು ಮುಹ್‌ಲಿಕೂಹಾ ಖಬ್‌ಲ ಯೌಮಿಲ್ ಖಿಯಾಮತಿ ಅವ್ ಮುಅಧ್ಧಿಬೂಹಾ"** – ಪುನರುತ್ಥಾನ ದಿನಕ್ಕೆ ಮುಂಚೆ ನಾವು ನಾಶಪಡಿಸದ ಅಥವಾ ಶಿಕ್ಷಿಸದ ಯಾವುದೇ ನಾಡಿಲ್ಲ. (17 :59).

ಇಂದಿನ ಕಾಲಘಟ್ಟದಲ್ಲಿ ಪ್ಲೇಗ್ ರೋಗ, ಭೂಕಂಪಗಳು, ಬಿರುಗಾಳಿ, ಅಗ್ನಿಪರ್ವತಗಳ ವಿಪತ್ತುಗಳು ಬಂದೆರಗುತ್ತವೆ. ಮಹಾಯುದ್ಧಗಳಿಂದಲೂ ಜನರು ಸಾಯುತ್ತಿದ್ದಾರೆ. ಇಂದಿನ ಕಾಲದಲ್ಲಿ ಮೃತ್ಯು ಬರಿಸುವ ಎಂತಹ ಕಾರಣಗಳು ಇವೆ ಎಂದರೆ ಹಿಂದೆಂದೂ ಇಂತಹ ಪರಿಸ್ಥಿತಿ ಉಂಟಾಗಿರಲಿಲ್ಲ. ಇಸ್ಲಾಮ್ ಎಂತಹ ಧರ್ಮವೆಂದರೆ ಪ್ರತಿಯೊಂದು ಶತಮಾನದಲ್ಲಿ ಈ ಧರ್ಮಾವಲಂಬಿಗಳಲ್ಲಿ ಎಂತಹ ಜನರು ಜನಿಸುತ್ತಾರೆಂದರೆ ಅವರು ದೇವವಾಣಿ ಗಳಿಸುತ್ತಾರೆ. ಅವರು ಅಸಾಧಾರಣ ಚಿಹ್ನೆಗಳನ್ನು ತೋರಿಸುತ್ತಾರೆ ಮತ್ತು ತನ್ನ ನಿರ್ಧಾರಗಳನ್ನು ಈಡೇರಿಸುವ ಒಬ್ಬ ಶಕ್ತಿಶಾಲಿ ದೇವನ ಪರಿಚಯ ಮಾಡಿಸುತ್ತಾರೆ. ಇಂದಿನ ಕಾಲದಲ್ಲಿ ದೇವನಿಂದ ನಿಯೋಜಿತರಾದ ವಾಗ್ದತ್ತ ಮಸೀಹರಿಗೆ ಅವರು ಯಾವ ಪ್ರಸಿದ್ಧಿಯನ್ನೂ ಗಳಿಸದ ಸಂದರ್ಭದಲ್ಲಿ ಅಲ್ಲಾಹನು ಹೀಗೆ ತಿಳಿಸಿದನು:

1. **ಯಅ್‌ತೀಕ ಮಿನ್ ಕುಲ್ಲಿ ಫಜ್ಜಿನ್ ಅಮೀಖ್ ಯನ್‌ಸುರುಕ ರಿಜಾಲುನ್ ನೂಹೀ ಇಲೈಹಿಮ್ ಮಿನಸ್ಸಮಾಇ ವಲಾ ತುಸಯ್ಯರ್ ಲಿ ಖಲ್‌ಖಿಲ್ಲಾಹಿ ವಲಾ ತಸ್ ಅಮ ಮಿನನ್ನಾಸ್.** (ಬರಾಹೀನ್ ಅಹ್ಮದಿಯಾ 1881ರಲ್ಲಿ ಮುದ್ರಿತ ಪುಟ 241. ರೂಹಾನಿ ಖಝಾಇನ್ ಸಂಪುಟ–1 ಪುಟ 267 ಹಾಶಿಯ)

ಅರ್ಥ : ಪ್ರತಿಯೊಂದು ಮಾರ್ಗದಲ್ಲಿ ಸಂಚರಿಸಿ ಜನರು ನಿನ್ನ ಬಳಿಗೆ ಆಗಮಿಸುವರು. ಅವರು ಎಷ್ಟು ಹೆಚ್ಚು ಹೆಚ್ಚಾಗಿ ಆಗಮಿಸುವರೆಂದರೆ ಮಾರ್ಗಗಳಲ್ಲಿ ಕುಳಿ ಬೀಳುವುವು. ನಿನಗೆ ಎಂತಹ ಜನರು ಸಹಾಯ ಮಾಡುವರೆಂದರೆ ಅವರ ಹೃದಯಗಳನ್ನು ನಾವು ಪ್ರೇರೇಪಿಸುವೆವು. ನಿನ್ನ ಬಳಿಗೆ ಆಗಮಿಸುವವರೊಂದಿಗೆ ನೀನು ಕೆಟ್ಟ ರೀತಿಯಲ್ಲಿ ವರ್ತಿಸಬಾರದು. ನೀನು ಅವರನ್ನು ಭೇಟಿಯಾಗುವುದರಿಂದ ಬಳಲಬಾರದು.

ಈ ಸಂದೇಶವಾಣಿಗಳು ಎಂತಹ ವ್ಯಕ್ತಿಗೆ ಲಭಿಸಿತೆಂದರೆ ಆ ವ್ಯಕ್ತಿ ಜೀವಿಸುತ್ತಿದ್ದ ಗ್ರಾಮದ ಹೆಸರು ಅಂದಿನ ನಾಗರಿಕ ಜಗತ್ತಿಗೆ ತಿಳಿದಿರಲಿಲ್ಲ. ಆ ವ್ಯಕ್ತಿಯನ್ನು ಎಲ್ಲರೂ ವಿರೋಧಿಸುತ್ತಿದ್ದರೂ ಲೋಕವು ಕಂಡಿತು. ಅಮೇರಿಕ, ಆಫ್ರಿಕದಿಂದ ಪ್ರಾರಂಭಿಸಿ ಲೋಕದ ಎಲ್ಲ ಪ್ರದೇಶಗಳಿಂದ ಜನರು ಇಲ್ಲಿಗೆ ಆಗಮಿಸುತ್ತಿದ್ದಾರೆ. ಎಷ್ಟು ಹೆಚ್ಚು ಜನರು ಆಗಮಿಸುತ್ತಾರೆಂದರೆ ಅವರಿಗೆ ಹಸ್ತಲಾಘವ ಮಾಡಿ ಭೇಟಿಯಾಗುವುದು ಸಾಮಾನ್ಯ ಮನುಷ್ಯನಿಗೆ ಸಾಧ್ಯವಾಗುವುದಿಲ್ಲ. ಶ್ರೀಮಂತರಾದ ಅನೇಕರು ತಮ್ಮ ಸ್ವಂತ ಪ್ರಿಯ ಊರನ್ನು ಬಿಟ್ಟು ಇಲ್ಲಿಗೆ ಬಂದು ವಾಸಿಸುತ್ತಿದ್ದಾರೆ. ಖಾದಿಯಾನ್ ಎಂಬ ಹೆಸರು ಲೋಕದಲ್ಲಿ ಪ್ರಸಿದ್ಧವಾಗುತ್ತದೆ. ಇದು ಚಿಕ್ಕ ವಿಷಯವೇನು? ಇದು ಎಂತಹ ದೃಷ್ಟಾಂತವೆಂದರೆ ಇದು ಸಾಮಾನ್ಯವಾಗಿ ವೀಕ್ಷಿಸಿ ಕಡೆಗಣಿಸುವಂತಹದ್ದಲ್ಲ.

2. ಕ್ರೈಸ್ತಧರ್ಮದ ಡೂಯಿ ಎಂಬವನು ತಾನು ಪ್ರವಾದಿ ಎಂದು ವಾದಿಸಿ ಹೀಗೆ ತನ್ನ ಕೊಳಕು ಭಾಷೆಯಲ್ಲಿ ಪ್ರಕಟಿಸಿದನು – "ಇಸ್ಲಾಂ ಲೋಕದಿಂದ ಬೇಗನೆ ಅಳಿದು ಹೋಗಲಿ ಎಂದು ನಾನು ದೇವನೊಂದಿಗೆ ಪ್ರಾರ್ಥಿಸುತ್ತೇನೆ. ಹೇ ದೇವಾ, ನೀನು ಹೀಗೆಯೇ ಮಾಡು. ಹೇ ದೇವಾ ನೀನು ಇಸ್ಲಾಮನ್ನು ನಾಶಮಾಡು." ಇದನ್ನು ವಿರೋಧಿಸಿ ಪ್ರಕಟಣೆ ನೀಡಿದವರು ನಮ್ಮ ಇಮಾಮರಾದ ವಾಗ್ದತ್ತ ಮಸೀಹರು ಮಾತ್ರವಾಗಿದ್ದರು. ಅವರು ಹೀಗೆ ಪಂಥಾಹ್ವಾನ ನೀಡಿದರು: "ಹೇ ಪ್ರವಾದಿತ್ವವಾದಿ, ನನ್ನೊಂದಿಗೆ ಪ್ರಾರ್ಥನೆಯ ಸಮರದಲ್ಲಿ ಭಾಗವಹಿಸು. ನಾವಿಬ್ಬರೂ ಪ್ರಾರ್ಥನೆ ಮೂಲಕ ಎದುರಾಗೋಣ. ನಾವು ಪ್ರಾರ್ಥಿಸೋಣ – ನಮ್ಮ ಪೈಕಿ ಸುಳ್ಳುಗಾರನಾದವನು ಮೊದಲು ಸಾಯಬೇಕು ಎಂದು." (ಟೆಲಿಗ್ರಾಫ್ ಪತ್ರಿಕೆ 5–7–1903).

ಆದರೆ ಅವನು ಅಹಂಕಾರದಿಂದ ಹೇಳಿದನು: "ಏನು ಇಂತಹ ನುಸಿಗಳಿಗೂ ಸೊಳ್ಳೆಗಳಿಗೂ ನಾನು ಉತ್ತರ ಕೊಡುವೆನೆಂದು ನೀವು ಭಾವಿಸುತ್ತೀರಾ? ನಾನು ನನ್ನ ಕಾಲುಗಳನ್ನು ಅವುಗಳ ಮೇಲಿಟ್ಟರೆ

ಅವು ಸತ್ತು ಹೋಗುವುವು." (ಡೂಯಿ 1903 ಡಿಸೆಂಬರ್‌ನಲ್ಲಿ ಪ್ರಕಟಿಸಿದ ಕರಪತ್ರ). ವಾಗ್ದತ್ತ ಮಸೀಹರು 23–8–1903ರ ಪ್ರಕಟಣೆ ಪತ್ರಿಕೆಯಲ್ಲಿ ಹೀಗೆ ಹೇಳಿದ್ದರು: "ಡೂಯಿ ಪ್ರಾರ್ಥನೆಯ ಸಮರದಿಂದ ಓಡಿ ಹೋದರೂ ಅವನು ಸ್ಥಾಪಿಸಿದ ಝಿಯೋನ್ ಸಂಸ್ಥೆಯ ಮೇಲೆ ಬೇಗನೆ ವಿಪತ್ತು ಬಂದೆರಗುವುದು." ಅವರು ಹೀಗೆ ಪ್ರಾರ್ಥಿಸಿದ್ದರು: "ಹೇ ದೇವಾ, ನೀನು ಬೇಗನೆ ತೀರ್ಪು ನೀಡು. ಡೂಯಿಯ ಸುಳ್ಳುವಾದ ಜನರಿಗೆ ತಿಳಿಯುವಂತೆ ಮಾಡು."

ಅನಂತರ ಏನಾಯಿತೆಂದು ನೋಡಿರಿ. ಡೂಯಿ ರಾಜ ಠೀವಿಯಿಂದ ಜೀವಿಸುತ್ತಿದ್ದನು. ಅವನ ಬಳಿ ಏಳು ಕೋಟಿ ನಗದು ಹಣವಿತ್ತು. ಅವನ ಪತ್ನಿ ಮತ್ತು ಮಗ ಅವನ ಶತ್ರುವಾದರು. ತಂದೆ ಮಗನ ಬಗ್ಗೆ ಅವನು ವ್ಯಭಿಚಾರ ಪುತ್ರ ಎಂದು ಪ್ರಕಟಿಸಿದನು. ಅವನಿಗೆ ಲಕ್ವರೋಗ ಬಾಧಿಸಿತು. ಅವನು ಹುಚ್ಚನಾದನು. ಅನಂತರ 1907ರ ಮಾರ್ಚ್ ತಿಂಗಳಲ್ಲಿ ಬಹಳ ಕಷ್ಟ ಪೀಡಿತನಾಗಿ ಸತ್ತನು. ಅವನ ಬಗ್ಗೆ ವಾಗ್ದತ್ತ ಮಸೀಹರು 20–2–1907ರಲ್ಲಿ ಒಂದು ಪ್ರಕಟಣೆ ಪತ್ರಿಕೆಯಲ್ಲಿ ಹೇಳಿದ್ದರು: "ದೇವನು ನನ್ನೊಂದಿಗೆ ಹೇಳಿರುವನು: ಒಂದು ಹೊಸ ದೃಷ್ಟಾಂತ ತೋರಿಸುವೆನು. ಅದು ಬೃಹತ್ತಾದ ಜಯವಾಗುವುದು. ಲೋಕಕ್ಕೆಲ್ಲ ಅದೊಂದು ದೃಷ್ಟಾಂತವಾಗುವುದು." ಡೂಯಿ ಸತ್ತು ದೇವನ ಅಸ್ತಿತ್ವಕ್ಕೆ ಸಾಕ್ಷ್ಯ ನೀಡಿದನು. ಇದು ಕ್ರೈಸ್ತ ಲೋಕ, ಹಳೆಯ ಲೋಕ ಮತ್ತು ಹೊಸ ಲೋಕಗಳ ಮೇಲೆ ವಾಗ್ದತ್ತ ಮಸೀಹರ ಜಯವಾಗಿತ್ತು.

3. ಈ ದೇಶದಲ್ಲಿ ಆರ್ಯಾ ಸಮಾಜದವರ ಪ್ರಭಾವ ಬಹಳ ಇತ್ತು. ಅವರ ನಾಯಕ ಲೇಖ್‌ರಾಮ್ ಆಗಿದ್ದನು. ವಾಗ್ದತ್ತ ಮಸೀಹರ ಕರಾಮಾತುಸ್ಸಾದಿಖೀನ್ ಎಂಬ ಪುಸ್ತಕದಲ್ಲಿ (1311 ಹಿಜರಿ ಸಫರ್ ತಿಂಗಳಲ್ಲಿ ಮುದ್ರಿತ) ಹೀಗೆ ಭವಿಷ್ಯವಾಣಿ ನುಡಿದಿದ್ದರು: "ಲೇಖ್‌ರಾಮನ ಬಗ್ಗೆ ನನ್ನ ಪ್ರಾರ್ಥನೆ ಸ್ವೀಕರಿಸಲಾಗಿದೆ ಎಂದು ನನಗೆ ಅಲ್ಲಾಹನು ತಿಳಿಸಿರುವನು. ಅವನು ಆರು ವರ್ಷಗಳೊಳಗೆ ಸತ್ತು ಹೋಗುವನು. ಅವನು ಮಾಡಿದ ಅಪರಾಧ ಇದಾಗಿದೆ: ಅಲ್ಲಾಹನ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅವನು ಬೈಯ್ಯುತ್ತಾ ಇರುತ್ತಾನೆ. ಕೆಟ್ಟ ಶಬ್ದಗಳನ್ನು ಬಳಸಿ ಅಪಹಾಸ್ಯ ಮಾಡುತ್ತಾ ಇರುತ್ತಾನೆ."

22–2–1893ರಲ್ಲಿ ಪ್ರಕಟಿಸಿದ ವಿಜ್ಞಾಪನೆಯಲ್ಲಿ ಲೇಖ್‌ರಾಮ್ ಸಾಯುವ ಬಗ್ಗೆ ಹೀಗೆ ಪ್ರಕಟಿಸಲಾಗಿತ್ತು: **ಇಜ್‌ಲುನ್ ಜಸದುನ್ ಲ್ಲಹೂ ಖುವಾರುನ್‌ಲ್ಲಹೂ ನಸಬುನ್ ವ ಅದ್ಹಾಬುನ್.** – ಲೇಖ್‌ರಾಮ್ ಸಾಮಿರಿಯ ಕರುವಿನ ಹಾಗಿದ್ದಾನೆ. ಅದು ಜೀವ ರಹಿತವಾಗಿದೆ. ಅದರಲ್ಲಿ ಎಂತಹ ಧ್ವನಿ ಇದೆ ಎಂದರೆ ಅದರಲ್ಲಿ ಆಧ್ಯಾತ್ಮಿಕತೆ ಇಲ್ಲ. ಆದುದರಿಂದ ಅವನಿಗೆ ಶಿಕ್ಷೆ ನೀಡಲ್ಪಡುವುದು. ಸಾಮಿರಿಯ ಕರುವಿಗೆ ನೀಡಲಾದ ಶಿಕ್ಷೆಯ ಹಾಗೆ. ಸಾಮಿರಿಯ ಕರುವಿನ ರೂಪವನ್ನು ತುಂಡು ತುಂಡು ಮಾಡಲಾಗಿತ್ತು, ಅನಂತರ ಬೆಂಕಿಯಲ್ಲಿ ಸುಡಲಾಯಿತು ಮತ್ತು ಸಮುದ್ರಕ್ಕೆ ಹಾಕಲಾಗಿತ್ತು ಎಂದು ಎಲ್ಲರಿಗೂ ತಿಳಿದಿದೆ.

12–4–1893ರಂದು ವಾಗ್ದತ್ತ ಮಸೀಹರು ಒಂದು ದಿವ್ಯ ದರ್ಶನ ಕಂಡರು. (ಬರಕಾತುದ್ದುಆ ಹಾಶಿಯ ನೋಡಿರಿ. ರೂಹಾನೀ ಖಝಾಇನ್ ಸಂಪುಟ 6 ಪುಟ 33). ಒಬ್ಬ ಶಕ್ತಿಶಾಲಿ ಭೀಕರ ವ್ಯಕ್ತಿ ಮನುಷ್ಯನಾಗಿರದೆ ಮಲಕ್‌ಗಳ ಗುಂಪಿಗೆ ಸೇರಿದವನು ವಾಗ್ದತ್ತ ಮಸೀಹರೊಂದಿಗೆ ಕೇಳುತ್ತಾನೆ: "ಲೇಖ್‌ರಾಮ್ ಎಲ್ಲಿ?" ಎಂದು. ಕರಾಮಾತುಸ್ಸಾದಿಖೀನ್‌ನಲ್ಲಿ ಹೀಗೆ ಅರಬಿ ಪದ್ಯ ಬರೆಯಲಾಗಿತ್ತು:

ಬಶ್ಶರನೀ ರಬ್ಬೀ ವ ಖಾಲ ಮುಬಶ್ಶಿರನ್
ಸತಅ್‌ರಿಫು ಯೌಮಲ್ ಈದಿ ವಲ್ ಈದಿ ಅಖ್‌ರಬು
ನನ್ನ ಪ್ರಭು ನನಗೆ ಶುಭವಾರ್ತೆ ನೀಡಿರುವನು.
ಈದ್ ದಿವಸದ ಮರುದಿನ ಈದ್ ಸಮೀಪವಾಗಿರುವುದು
ಈದ್ ದಿನದ ಮರುದಿನ ಘಟನೆ ಸಂಭವಿಸುವುದು ಎಂದು ತಿಳಿಸಲಾಗಿತ್ತು.

ಇನ್ನೊಂದು ಪದ್ಯ ಐದು ವರ್ಷ ಮೊದಲು ಹೀಗೆ ಸೂಚಿಸಿತು:

ಅಲಾ ಅಯ ದುಶ್ಮನ್ ನಾದಾನೋ ಬೇರಾಹ್
ಬತರಸ್ ಅರಫ್ ತೇಗೇ ಬರ್‍ರಾನೆ ಮುಹಮ್ಮದ್
ದಾರಿ ತಪ್ಪಿದ ಅವಿವೇಕಿ ಶತ್ರುವೇ,
ಮುಹಮ್ಮದರ ಖಡ್ಗಧಾರಿಗಳ ಖಡ್ಗದ ಬಗ್ಗೆ ಭಯಪಡು.

ಲೇಖ್‌ರಾಮ್ 6–3–1897ರಂದು ಕೊಲ್ಲಲ್ಪಟ್ಟನು. ವಾಗ್ದತ್ತ ಮಸೀಹರ ಭವಿಷ್ಯವಾಣಿ ಬಹಳ ಸ್ಪಷ್ಟವಾಗಿ ಈಡೇರಿ ಅಲ್ಲಾಹನ ಅಸ್ತಿತ್ವದ ಬಗ್ಗೆ ಸಾಕ್ಷ್ಯಾಧಾರವಾಯಿತು. ಆದುದರಿಂದ ಅಲ್ಲಾಹನ ಸಂದೇಶವಾಣಿ ಸತ್ಯವಾಗಿದೆ. ಇಂತಹ ಸಂದೇಶವಾಣಿಗಳು ಈಡೇರುವುದನ್ನು ಕಂಡ ನಂತರ ಸಹ ದೇವನ ಅಸ್ತಿತ್ವ ನಿರಾಕರಿಸುವುದು ಲಜ್ಜೆಗೇಡಿನ ಮಾತಾಗಿದೆ.

## ಹತ್ತನೆಯ ಸಾಕ್ಷ್ಯಾಧಾರ

ಪವಿತ್ರ ಖುರ್‌ಆನ್ ಪ್ರಸ್ತಾಪಿಸುವ ಹತ್ತನೆಯ ಸಾಕ್ಷ್ಯಾಧಾರವೇನೆಂದರೆ, ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ: **"ವಲ್ಲಧೀನ ಜಾಹದೂ ಫೀನ ಲನಹ್‌ದಿಯನ್ನಹುಮ್ ಸುಬುಲನಾ."** – ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನ ಮಾಡುತ್ತಾರೋ ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. (29 :70).

ಪವಿತ್ರ ಖುರ್‌ಆನಿನ ಈ ವಚನ ಪ್ರಕಾರ ಕಾರ್ಯ ನಿರತರಾದವರು ಯಾವಾಗಲೂ ಲಾಭ ಪಡೆದರು. ದೇವನ ಅಸ್ತಿತ್ವವನ್ನು ನಿರಾಕರಿಸುವವನು ಆವಶ್ಯಕವಾಗಿಯೂ ಹೀಗೆ ಚಿಂತಿಸಬೇಕು: ದೇವನು ವಾಸ್ತವಿಕವಾಗಿಯೂ ಅಸ್ತಿತ್ವದಲ್ಲಿದ್ದರೆ ನನಗೆ ಬಹಳ ಕಷ್ಟ ಉಂಟಾಗುವುದು. ಈ ಯೋಚನೆ ಹೊಂದಿ ಸತ್ಯವನ್ನು ಅನ್ವೇಷಿಸುವ ಅಭಿಲಾಷೆ ಅವನ ಹೃದಯದಲ್ಲಿ ಉಂಟಾದರೆ ಅವನು ಅಳುತ್ತಾ ಮತ್ತು ಬಹಳ ತೀವ್ರವಾಗಿ ನೊಂದು ಹೀಗೆ ಪ್ರಾರ್ಥಿಸಬೇಕು: "ಹೇ ದೇವಾ, ನಿನ್ನನ್ನು ನಂಬುವವರು ಹೇಳುವ ಹಾಗೆ ನೀನು ಅಪರಿಮಿತ ಶಕ್ತಿವಂತನಾಗಿದ್ದರೆ ನೀನು ನನ್ನ ಮೇಲೆ ದಯೆದೋರು ಮತ್ತು ನಿನ್ನ ಕಡೆಗೆ ಮಾರ್ಗದರ್ಶನ ನೀಡು. ನನ್ನ ಹೃದಯದಲ್ಲಿಯೂ ದೃಢವಾದ ವಿಶ್ವಾಸವನ್ನು ಉಂಟುಮಾಡು. ನಾನು ನಿನ್ನ ಕರುಣೆಯಿಂದ ವಂಚಿತನಾಗದಿರುವಂತೆ ಮಾಡು." ಈ ರೀತಿ ಹೃತ್ಪೂರ್ವಕವಾಗಿ ಯಾರಾದರೂ ಪ್ರಾರ್ಥಿಸುವವರಾದರೆ ಕನಿಷ್ಠ ಪಕ್ಷ ನಲ್ವತ್ತು ದಿನ ಕಾಲ ಹೀಗೆ ಪ್ರಾರ್ಥನೆ ಮಾಡುವವರಾದರೆ ಹಾಗೆ ಪ್ರಾರ್ಥಿಸುವವನು ಯಾವ ಧರ್ಮಕ್ಕೆ ಸೇರಿದವನಾದರೂ ಅವನು ಯಾವ ದೇಶವಾಸಿಯಾದರೂ ಸಕಲ ಲೋಕಗಳ ಪ್ರಭುವಾದ ಅಲ್ಲಾಹನು ಖಂಡಿತವಾಗಿಯೂ

**38ನೇ ಪುಟ ನೋಡಿ**

# ಅಹ್ಮದಿಯತ್ ಎಂದರೇನು ?



**ಅಹ್ಮದಿಯತ್** ಯಾವುದೇ ರಾಜಕೀಯ ಚಳುವಳಿಯೂ ಅಲ್ಲ; ಯಾವುದೇ ಲೌಕಿಕ ಉದ್ದೇಶ ಸಾಧನೆಗೆ ಸ್ಥಾಪಿತವಾದದ್ದೂ ಅಲ್ಲ. ಬದಲಾಗಿ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಅವರು (1835 – 1908) ಮಾರ್ಚ್ 23, 1889ರಂದು ಲುಧಿಯಾನದಲ್ಲಿ ಒಂದು ಜಮಾಅತಿಗೆ ಅಡಿಪಾಯ ಹಾಕಿದರು. ಅನಂತರ ಅದಕ್ಕೆ "ಜಮಾಅತ್ ಅಹ್ಮದಿಯಾ ಮುಸ್ಲಿಮ" ಎಂದು ಹೆಸರಿಸಲಾಯಿತು. ಅಹ್ಮದಿಯತಿನ ಸ್ಥಾಪನೆಯ ಉದ್ದೇಶ "ಇಸ್ಲಾಮ್ ಧರ್ಮ" ದ ಸೌಂದರ್ಯವನ್ನು ಸ್ಪಷ್ಟವಾದ ರೀತಿಯಲ್ಲಿ ಲೋಕದ ಮುಂದೆ ಇರಿಸುವುದು ಹಾಗೂ "ಇಸ್ಲಾಮ್ ಧರ್ಮ" ಶಾಂತಿ ಮತ್ತು ಸಮಾಧಾನದ ಧರ್ಮವಾಗಿದೆ ಎಂದು ಜನಸಾಮಾನ್ಯರಿಗೆ ಮನವರಿಕೆ ಮಾಡಿಸುವುದಾಗಿದೆ.

ಆದರಣೀಯ ಓದುಗರೇ, ಹಝ್ರತ್ ಮುಹಮ್ಮದ್[ಸ] ತಂದ ಧರ್ಮದ ಯಥಾರ್ಥ ಬೋಧನೆಗಳನ್ನು ಲೋಕದ ಮುಂದೆ ಇರಿಸಲು, ಈ ಧರ್ಮಕ್ಕೆ ಸಂಬಂಧಿಸಿ ಆಗುತ್ತಿರುವ ತಪ್ಪು, ನಿರಾಧಾರ ಮತ್ತು ಸುಳ್ಳು ವಿಶ್ವಾಸಗಳನ್ನು ಇಸ್ಲಾಮಿಕ ಅಧ್ಯಾಪನೆಗಳ ಬೆಳಕಿನಲ್ಲಿಯೇ ರದ್ದುಗೊಳಿಸಲು, ಇಸ್ಲಾಮಿನ ಸುಂದರ ಹಾಗೂ ಮನೋಹರವಾದ ಪಾಠಗಳನ್ನು ಲೋಕಕ್ಕೆ ಪರಿಚಯಿಸಲು ಹಾಗೂ ಜಿಹಾದಿನ ಹೆಸರಿನಲ್ಲಿ ಕೊಲೆ ಮತ್ತು ಸುಲಿಗೆಗಳನ್ನು ಇಸ್ಲಾಮಿಗೆ ಸಂಬಂಧಿಸಿ ಹೇಳುವವರ ತಪ್ಪಾದ ದೃಷ್ಟಿಕೋನವನ್ನು ಕಿತ್ತೆಗೆದು ಇಸ್ಲಾಮ್ ಶಾಂತಿದಾಯಕ ಧರ್ಮವೆಂದೂ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಸಕಲ ಮಾನವಕುಲಕ್ಕೆ ಅನುಗ್ರಹವೆಂದೂ ಸಾಬೀತುಪಡಿಸಲು ಇಂದಿನ ಕಾಲದಲ್ಲಿ ಅಲ್ಲಾಹನು ಅಹ್ಮದಿಯತನ್ನು ಸ್ಥಾಪಿಸಿದ್ದಾನೆ.

ಮುಸ್ಲಿಮರ ವಿಶ್ವಾಸಾದರ್ಶಗಳು ಬಿಗಡಾಯಿಸುವುದರ ಕುರಿತು ಸಯ್ಯದ್‌ನಾ ಹಝ್ರತ್ ಮುಹಮ್ಮದ್ ಮುಸ್ತಫಾ[ಸ] ಬಹಳ ಹಿಂದೆಯೇ ಮುನ್ನೆಚ್ಚರಿಕೆ ಹೊಂದಿರುವ ಭವಿಷ್ಯವಾಣಿ ಹೀಗೆ ನೀಡಿದ್ದರು : "ಇಸ್ಲಾಮಿನ ಹೆಸರು ಮಾತ್ರ ಬಾಕಿಯಾಗಿ ಉಳಿದು ಅದರ ನೈಜ ಬೋಧನೆಗಳ ಪ್ರಕಾರ ನಡೆಯುವುದನ್ನು ಉಪೇಕ್ಷಿಸುವ ಕಾಲ ಸಹ ಜನರಲ್ಲಿ ಬರುವುದು." (ಮಿಶ್ಕಾತ್ – ಕಿತಾಬುಲ್ ಇಲ್ಮ್)

ಈಮಾನ್ (ವಿಶ್ವಾಸ) ಕೃತಿಕಾ (ಸುರಯ್ಯ) ನಕ್ಷತ್ರಕ್ಕೆ ಹೋದರೂ ಹಝ್ರತ್ ವಾಗ್ದತ್ತ ಮಸೀಹ್ ಮತ್ತು ಮಹ್ದೀ ಅದನ್ನು ಮರಳಿ ತಂದು ಮಾನವಕುಲದ ಹೃದಯ ಮತ್ತು ಮನಸ್ಸಲ್ಲಿ ಇಳಿಸುವರು ಎಂಬ ಸುವಾರ್ತೆಯನ್ನು ಸಹ ಇದರೊಂದಿಗೆ ನೀಡಿದ್ದರು.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ವಿಶ್ವಾಸ ಪ್ರಕಾರ ಅಲ್ಲಾಹನು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು(ಅ) ವಾಗ್ದತ್ತ ಮಸೀಹ್ ಮತ್ತು ಮಹ್ದೀಯನ್ನಾಗಿ ಮಾಡಿ ಕಳುಹಿಸಿದನು. ಅವರು ಹೀಗೆ ಘೋಷಿಸಿದರು:

1. "ಆ ಎಲ್ಲ ತಪ್ಪುಗಳನ್ನು ದೂರ ಮಾಡಿ ನೈಜ ಇಸ್ಲಾಮನ್ನು ಲೋಕದಲ್ಲಿ ಸ್ಥಾಪಿಸಲು ಅಲ್ಲಾಹನು ನನ್ನನ್ನು ನಿಯೋಜಿಸಿದ್ದಾನೆ." (ಅಹ್ಮದಿ ಔರ್ ಗೈರ್ ಅಹ್ಮದಿ ಮೆ ಕ್ಯಾ ಫರಕ್ ಹೇ – ಪುಟ 16)

2. "ದೇವನು ನನ್ನನ್ನು ಯಾವ ಕೆಲಸಕ್ಕಾಗಿ ನಿಯೋಜಿಸಿರುವನೋ ಅದು ಇದಾಗಿದೆ: ದೇವನು ಮತ್ತು ಅವನ ಸೃಷ್ಟಿಗಳ ಸಂಬಂಧದಲ್ಲಿ ಸಂಭವಿಸಿರುವ ಮಾಲಿನ್ಯವನ್ನು ದೂರಮಾಡಿ ಸ್ನೇಹ ಮತ್ತು ನಿಷ್ಠೆಯ ನಂಟು ಪುನಃ ಸ್ಥಾಪಿಸುವುದು, ಸತ್ಯದ ಪ್ರಕಟನೆಯಿಂದ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಿ ಮೈತ್ರಿಗೆ ಅಡಿಪಾಯ ಹಾಕುವುದು, ಲೋಕದಿಂದ ಕಣ್ಮರೆಯಾದ ಧಾರ್ಮಿಕ ಸತ್ಯತೆಗಳನ್ನು ಪ್ರಕಟಿಸುವುದು, ದೇಹೇಚ್ಛೆಯ ಅಂಧಕಾರದ ಅಡಿಯಲ್ಲಿ ಅದುಮಿರುವ ಆಧ್ಯಾತ್ಮಿಕತೆಯ ಮಾದರಿಯನ್ನು ತೋರಿಸುವುದು, ಮನುಷ್ಯನ ಒಳಗೆ ಪ್ರವೇಶಿಸಿ ಶ್ರದ್ಧೆ ಅಥವಾ ಪ್ರಾರ್ಥನೆ ಮೂಲಕ ಪ್ರಕಟಗೊಳ್ಳುವ ದೈವಿಕ ಶಕ್ತಿಗಳನ್ನು ಕೇವಲ ಮಾತುಗಳಿಂದಲ್ಲದೆ, ಕಾರ್ಯತಃ ಅದರ ವಾಸ್ತವಿಕತೆಯನ್ನು ಪ್ರಕಟಿಸುವುದು."(ಲೆಕ್ಚರ್ ಲಾಹೋರ್–ಪುಟ 34, ಪ್ರಥಮ ಮುದ್ರಣ)

"ಅಹ್ಮದಿಯತ್" (ಅಂದರೆ ಯಥಾರ್ಥ ಇಸ್ಲಾಮ್), ಎಂಬುದು ಅಲ್ಲಾಹನು ಈಗಿನ ಕಾಲದಲ್ಲಿ ಮನುಷ್ಯಕುಲದ ಆಧ್ಯಾತ್ಮಿಕ ಮತ್ತು ಧಾರ್ಮಿಕ ಫಲವತ್ತತೆಗಾಗಿ ಜಾರಿ ಮಾಡಿದ ಆಧ್ಯಾತ್ಮಿಕ ಚಿಲುಮೆ ಆಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಸ್ಥಾಪಕರು ಈ ಚಿಲುಮೆಯಿಂದ ಫಲ ಪಡೆಯಲಿಕ್ಕಾಗಿ ಹತ್ತು ನಿಬಂಧನೆಗಳನ್ನು ಘೋಷಿಸಿದರು. ಈ ಬೋಧನೆ (ಶರತ್ತು)ಗಳಂತೆ ನಡೆದರೆ ಮನುಷ್ಯನು ತನ್ನ ಲೌಕಿಕ ಜೀವನವನ್ನು ಪಾಪಗಳಿಂದ ಮುಕ್ತಗೊಳಿಸಬಹುದು, ಮಾತ್ರವಲ್ಲ, ಅಲ್ಲಾಹನ ಪ್ರಿಯ ಮತ್ತು ಸ್ವೀಕೃತ ದಾಸನಾಗಿ ಅವನ ಸಂಪ್ರೀತಿ ಗಳಿಸಿ ತನ್ನ ಪರಲೋಕ ಜೀವನವನ್ನು ಸಹ ಉತ್ತಮಗೊಳಿಸಬಹುದು. ಸಂಕ್ಷಿಪ್ತವಾದ ವಿವರಣೆ ನೀಡಲಾಗುತ್ತಿರುವ ಕಾರಣದಿಂದ ಅಹ್ಮದಿಯತಿನ ಆಧಾರವಾದ ಈ ಹತ್ತು ಬೈಅತ್(ನಿಷ್ಠೆಯ ಪ್ರತಿಜ್ಞೆ) ನಿಬಂಧನೆಗಳನ್ನು ಇಲ್ಲಿ ಉಲ್ಲೇಖಿಸಲಾಗದು. ಆದರೂ ಅವುಗಳಿಂದ ಕೇವಲ ನಾಲ್ಕನ್ನು ಇಲ್ಲಿ ಪ್ರಸ್ತಾಪಿಸಲಾಗುತ್ತದೆ:

1. ಬೈಅತ್ ಮಾಡುವವನು (ಅಹ್ಮದಿಯಾ ಜಮಾಅತಿಗೆ ಸೇರಲಿಚ್ಛಿಸುವವನು) ಈ ನಿಬಂಧನೆಗಳಿಗೆ ಪ್ರಾಮಾಣಿಕವಾಗಿ ಬದ್ಧರಾಗಿರಬೇಕಾಗಿದೆ: ಜೀವಾಂತ್ಯದ ವರೆಗೆ ಆತನು/ಆಕೆ ಬಹುದೇವಾರಾಧನೆ (ಶಿರ್ಕ್)ಯಿಂದ ದೂರವಿರಬೇಕು.

2. ಸಂತಾಪ ಮತ್ತು ಸಂತೋಷ ವೇಳೆಗಳಲ್ಲಿ, ಸುಖ ಮತ್ತು ದುಃಖಗಳಲ್ಲಿ, ಅನುಗ್ರಹ ಲಬ್ಧಿ ಸಂದರ್ಭಗಳಲ್ಲಿ ಮತ್ತು ಆಪತ್ಕಾಲದಲ್ಲಿ, ಎಲ್ಲ ಅವಸ್ಥೆಗಳಲ್ಲೂ ಅಲ್ಲಾಹನೊಡನೆ ನಿಷ್ಠೆಯಿಂದ ಇದ್ದುಕೊಂಡು ದೇವೇಚ್ಛೆಗೆ ಶಿರಬಾಗಿ ಸಂತೃಪ್ತಿಯಿಂದಿರಬೇಕು. ದೇವಮಾರ್ಗದಲ್ಲಿ ಎಲ್ಲ ತರದ ಮಾನಹಾನಿ ಮತ್ತು ಕ್ಲೇಶಗಳನ್ನು ಸಹಿಸಲಿಕ್ಕೆ ಸಿದ್ಧನಿರಬೇಕು. ವಿಪತ್ತುಗಳು ಬಂದೆರಗುವಾಗ ಮುಖ ತಿರುಗಿಸದೆ ಮುಂದಕ್ಕೆ ಹೆಜ್ಜೆ ಇಡಬೇಕು.

3. ಅಲ್ಲಾಹನ ಎಲ್ಲ ಸೃಷ್ಟಿಗಳೊಡನೆ ಪ್ರಾಮಾಣಿಕವಾದ ಸಹಾನುಭೂತಿ ತೋರಿಸುವುದರಲ್ಲಿ ಮಗ್ನನಾಗಿರುವುದಲ್ಲದೆ, ತನ್ನ ಶಕ್ತಿಯಾನುಸಾರ ದೇವದತ್ತ ಸಾಮರ್ಥ್ಯಗಳ ಮತ್ತು ಅನುಗ್ರಹಗಳ ಮೂಲಕ ಮನುಷ್ಯಕುಲಕ್ಕೆ ಉಪಕಾರಗಳನ್ನು ಮಾಡುತ್ತಲಿರಬೇಕು.

4. ಒಳ್ಳೆಯ ಕಾರ್ಯಗಳಲ್ಲಿ ಅನುಸರಣೆ ಮಾಡುವುದಾಗಿ ಒಪ್ಪುವುದರೊಂದಿಗೆ ಕುಟುಂಬ ಸಂಬಂಧಗಳಲ್ಲಾಗಲಿ, ಸೇವಕ ಭಾವಗಳಲ್ಲಾಗಲಿ ಕಾಣಿಸಲ್ಪಡದ ರೀತಿಯ ಒಂದು ಸುದೃಢ ಸಾಹೋದರ್ಯ

ಸಂಬಂಧವನ್ನು ದೇವಮಾರ್ಗದಲ್ಲಿ ಈ ವಿನೀತನೊಂದಿಗೆ (ಹಝ್ರತ್ ಅಹ್ಮದ್‌ರೊಂದಿಗೆ) ಸ್ಥಾಪಿಸುವುದಲ್ಲದೆ ಅದನ್ನು ಮರಣದ ವರೆಗೆ ನೆಲೆನಿಲ್ಲಿಸಬೇಕಾಗಿದೆ. (ಇಶ್ತಿಹಾರ್ ತಕ್‌ಮೀಲೆ ತಬ್‌ಲೀಗ್ – 12, ಜನವರಿ 1889)

ಆದರಣೀಯ ಓದುಗರೇ, "ಅಹ್ಮದಿಯತ್" (ಯಥಾರ್ಥ ಇಸ್ಲಾಮ್) ಒಂದು ಕಡೆ ಮನುಷ್ಯನ ಸಂಬಂಧವನ್ನು ದೇವನೊಂದಿಗೆ ಸರಿಯಾದ ರೀತಿಯಲ್ಲಿ ಸುದೃಢಗೊಳಿಸುತ್ತದೆ. ಮತ್ತೊಂದೆಡೆಯಲ್ಲಿ ಮನುಷ್ಯನು ಮನುಷ್ಯನನ್ನು ಪ್ರೀತಿಸಲು ತಾಕೀತು ಮಾಡುತ್ತದೆ. ಅದರಂತೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಮತ್ತು ಗೌರವಾನ್ವಿತ ಖಲೀಫರು ತಮ್ಮ ಬೋಧನೆಗಳ ಮೂಲಕ ಲಕ್ಷಗಟ್ಟಲೆ ದಾರಿತಪ್ಪಿದ ಜನರನ್ನು ಸರಿ ದಾರಿಗೆ ತಂದು ಅವರ ಸಂಬಂಧ ತಮ್ಮ ದೇವನೊಂದಿಗೆ ಸ್ಥಾಪಿಸಿದರು. ಹೀಗೆ ಅವರಿಗೆ ದೇವ ಸಾಮೀಪ್ಯದ ಅನುಭವ ಉಂಟಾಯಿತು. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಹೀಗೆ ಉಪದೇಶಿಸಿದರು:

1. "ನಮ್ಮ ತತ್ವ ಸಂಪೂರ್ಣ ಮನುಷ್ಯಕುಲದೊಂದಿಗೆ ಸಹಾನುಭೂತಿ ತೋರಿಸುವುದಾಗಿದೆ. ಒಬ್ಬ ವ್ಯಕ್ತಿ ಒಬ್ಬ ಹಿಂದು ನೆರೆಯವನ ಮನೆಗೆ ಬೆಂಕಿ ಹತ್ತಿದ್ದಾಗಿ ನೋಡಿಯೂ ಬೆಂಕಿ ನಂದಿಸುವುದರಲ್ಲಿ ನೆರವಾಗಲು ಮುಂದಾಗುವುದಿಲ್ಲವಾದರೆ, ನಾನು ಸತ್ಯವಾಗಿಯೂ ಹೇಳುತ್ತೇನೆ – ಅವನು ನನ್ನವನಲ್ಲ. ಒಬ್ಬ ಕ್ರೈಸ್ತನನ್ನು ಯಾರಾದರೂ ಕೊಲೆ ಮಾಡುತ್ತಿರುವುದಾಗಿ ನಮ್ಮ ಶಿಷ್ಯರಲ್ಲಿ ಓರ್ವನು ನೋಡಿಯೂ ಅವನನ್ನು ರಕ್ಷಿಸಲು ಪ್ರಯತ್ನಿಸುವುದಿಲ್ಲವಾದರೆ, ಅವನು ನಮ್ಮವನಲ್ಲ ಎಂದು ನಾನು ಖಚಿತವಾಗಿ ಹೇಳುತ್ತೇನೆ." (ರೂಹಾನಿ ಖಜಾಇನ್ ಭಾಗ – 12, ಸಿರಾಜುಮುನೀರ್ ಪುಟ – 28)

2. "ನನಗೆ ಲೋಕದಲ್ಲಿ ಯಾವ ಶತ್ರುವೂ ಇಲ್ಲ ಎಂಬ ಸಂಗತಿಯನ್ನು ನಾನು ಎಲ್ಲ ಮುಸ್ಲಿಮರೊಂದಿಗೂ ಕ್ರೈಸ್ತರೊಂದಿಗೂ ಆರ್ಯರೊಂದಿಗೂ ವ್ಯಕ್ತಪಡಿಸುತ್ತೇನೆ. ಕೃಪಾಳುವಾದ ತಾಯಿ ತನ್ನ ಮಕ್ಕಳನ್ನು ಪ್ರೀತಿಸುವ ಹಾಗೆ ಅಥವಾ ಅದಕ್ಕೂ ಮಿಗಿಲಾಗಿ ನಾನು ಮನುಷ್ಯಕುಲವನ್ನು ಪ್ರೀತಿಸುತ್ತಿರುವೆನು. ನಾನು ಕೇವಲ ಸತ್ಯದ ಕೊಲೆ ಮಾಡುವಂತಹ ಮಿಥ್ಯ ವಿಶ್ವಾಸಗಳ ಶತ್ರುವಾಗಿದ್ದೇನೆ. ಮಾನವರೊಂದಿಗೆ ಸಹಾನುಭೂತಿ ತೋರಿಸುವುದು ನನ್ನ ಕರ್ತವ್ಯವಾಗಿದೆ ಹಾಗೂ ಸುಳ್ಳು, ಬಹುದೇವಾರಾಧನೆ, ದೌರ್ಜನ್ಯ, ಎಲ್ಲ ತರದ ದುವರ್ತನೆ, ಅನ್ಯಾಯ, ದುನರ್ಡತೆಗಳಿಂದ ಉಪೇಕ್ಷೆ ನನ್ನ ತತ್ವವಾಗಿದೆ." (ರೂಹಾನೀ ಖಜಾಇನ್ – ಭಾಗ 17, ಅರ್‌ಬಈನ್ ಪುಸ್ತಕ ಸಂಖ್ಯೆ 1, ಪುಟ 344)

ಅಹ್ಮದಿಯಾ ಜಮಾಅತಿನ ಎರಡನೆಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) ಮನುಷ್ಯಕುಲದೊಂದಿಗೆ ತಮ್ಮ ಸ್ನೇಹವನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ:

> ನಾನು ಏನು ಇಚ್ಛಿಸುತ್ತೇನೆ ಎಂದು ನಿಮ್ಮೊಡನೆ ಹೇಳಲೇ, ನಾನು ಕೇವಲ ಒಬ್ಬ ದಾಸನಾಗಿದ್ದೇನೆ,
> ಆದರೆ ದೇವನನ್ನು ಬಯಸುತ್ತೇನೆ. ನನಗೆ ಯಾರೊಂದಿಗೂ ವೈರವಿಲ್ಲ,
> ನಾನು ಲೋಕದಲ್ಲಿ ಎಲ್ಲರ ಕ್ಷೇಮವನ್ನು ಬಯಸುತ್ತೇನೆ.

ಅಹ್ಮದಿಯಾ ಜಮಾಅತಿನ ಮೂರನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹಿಬ್(ರಹ್) ಮನುಷ್ಯಕುಲದೊಂದಿಗೆ ತಮ್ಮ ಸ್ನೇಹವನ್ನು ಜಮಾಅತಿಗೆ ಈ ಘೋಷಣಾ ವಾಕ್ಯ ನೀಡುತ್ತಾ ಹೀಗೆ ಪ್ರಕಟಿಸಿದರು:

## LOVE FOR ALL HATRED FOR NONE

ಎಲ್ಲರೊಂದಿಗೂ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ.

ಅಹ್ಮದಿಯಾ ಜಮಾಅತಿನ ಈಗಿನ ಇಮಾಮರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್(ಅಯ್ಯದಹುಲ್ಲಾಹ್) ಜಮಾಅತನ್ನು ಸಂಬೋಧಿಸುತ್ತಾ ಹೇಳಿದರು:

## Love For Honesty And Hatred For Dishonesty

ಪ್ರಾಮಾಣಿಕತೆಯ ಬಗ್ಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯ ಬಗ್ಗೆ ದ್ವೇಷ.

ಈ ಲೇಖನದ ಕೊನೆಯಲ್ಲಿ ಅಹ್ಮದಿಯಾ ಜಮಾಅತಿಗೆ ಸೇರದ ಮುಸ್ಲಿಮರೊಂದಿಗೆ ವಿನಂತಿಸುವುದೇನೆಂದರೆ, ಇಸ್ಲಾಮ್ ತನ್ನ ಅನುಯಾಯಿಗಳನ್ನು ಇತರ ಧರ್ಮದ ವ್ಯಕ್ತಿಗಳೊಂದಿಗೆ ಪ್ರೀತಿ, ಸಹಾನುಭೂತಿ ಮತ್ತು ಸನ್ನಡತೆಯಿಂದ ವ್ಯವಹರಿಸಲು ಕಲಿಸುತ್ತದೆ. ಆದ್ದರಿಂದ ಈ ಕಾಲದಲ್ಲಿ ಈ ಮನೋಭಾವದ ಬಹಳ ಆವಶ್ಯಕತೆಯಿದೆ. ಇಸ್ಲಾಮಿನ ಕುರಿತು ಇತರರ ಹೃದಯಗಳಲ್ಲಿ ಉಂಟಾಗಿರುವ ತಪ್ಪುಗ್ರಹಿಕೆಯನ್ನು ತಮ್ಮ ಉತ್ತಮ ವರ್ತನೆಗಳಿಂದ ದೂರಮಾಡಬೇಕೆಂದು ಸ್ಥಿತಿಗತಿಗಳು ಅವಶ್ಯಪಡುತ್ತಿವೆ. ಮುಸ್ಲಿಮರು ಹೀಗೆ ಮಾಡುವುದಿಲ್ಲವಾದರೆ, ಅವರು ತಿಳಿದೋ ತಿಳಿಯದೆಯೋ ಇತರರನ್ನು ಇಸ್ಲಾಮಿನ ಶಾಂತಿದಾಯಕ ಅಧ್ಯಾಪನೆಗಳಿಂದ ದೂರ ಮಾಡಲಿಕ್ಕೆ ಕಾರಣೀಭೂತರಾಗಿ ತಮ್ಮ ದೇವನ ಅಸಂತುಷ್ಟಿಗೆ ತುತ್ತಾಗುವರು. ದೇವನು ಹಾಗೆ ಮಾಡದಿರಲಿ.

ಈಗಿನ ಕಾಲದಲ್ಲಿ ಇಸ್ಲಾಮನ್ನು ಯಥಾರ್ಥ ರೂಪದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಮುಂದಿರಿಸಿದ್ದಾರೆ. ನೀವು ಅಹ್ಮದಿಯಾ ಜಮಾಅತಿನ ಸಾಹಿತ್ಯಗಳನ್ನು ಅಧ್ಯಯನ ಮಾಡಿರಿ. ನಮ್ಮ ವಿಶ್ವಾಸ ಪ್ರಕಾರ, ಮನುಷ್ಯನು ಸುಲಭವಾಗಿ ತನ್ನ ಸೃಷ್ಟಿಕರ್ತನ ಸಂತೃಪ್ತಿ ಗಳಿಸಬಹುದಾದ ಮತ್ತು ತನ್ನ ಜೀವಿತದ ಉದ್ದೇಶವನ್ನು ಪಡೆಯಬಹುದಾದ ಧರ್ಮ ಇದೇ ಆಗಿದೆ.

ಅಲ್ಲಾಹನು ನಮ್ಮೆಲ್ಲರಿಗೂ ಇಸ್ಲಾಮಿನ ಸತ್ಯತೆ ಅರಿತು ಸೃಷ್ಟಿಕರ್ತನನ್ನು ಅನುಸರಿಸಲು ಮತ್ತು ಸೃಷ್ಟಿಗಳೊಂದಿಗೆ ಸಹಾನುಭೂತಿ ತೋರಿಸಲು ಸೌಭಾಗ್ಯ ನೀಡಲಿ.

**Contact Details:** Ahmadiyya Muslim Jama'at India

**Head Office**

Nazarat Dawat Ilallah
Qadian, Dist. Gurdaspur, Punjab. 143516.

***Branch Office :***

**No.1 3rd Cross Wilson Garden, Bangalore - 560027**

**Darussalam, Near Railway Level Crossing, Pandeshwar, Mangalore - 575001.**

**www.alislam.org /www.ahmadiyyamuslimjamaat.in**

Feedback **www.ahmadiyyamuslimjamaat.in/feedback**

**National Toll Free Number: 1800 3010 2131 (9:00AM to 10:30PM)**

**MUSLIM TELEVISION AHMADIYYA INTERNATIONAL**

**www.mta.tv**

Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna
EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2, KU Band 2 feet Dish Antenna

**Printed by : Fazl-e-Umar Printing Press Qadian**

# ಹಝ್‌ರತ್ ಈಸಾ ಮಸೀಹ್(ಅ) ಪುನಃ ಇಳಿದು ಬರಲಾರರು

ಪವಿತ್ರ ಖುರ್‌ಆನಿನ **"ಫಲಮ್ಮಾ ತವಪ್ಫೈತನೀ"** (ನೀನು ನನ್ನನ್ನು ಮೃತಪಡಿಸಿದಾಗ) ಎಂಬ ವಚನ (ಪವಿತ್ರ ಖುರ್‌ಆನ್ 5 :118). ಹಝ್‌ರತ್ ಈಸಾ ಮಸೀಹರು ಮೃತರಾದುದನ್ನು ಸಾಬೀತುಗೊಳಿಸಲು ಮೊದಲು ವಿವರಿಸಲಾಗಿದೆ. ಆ ವಚನವನ್ನು ಈ ವಿಷಯಕ್ಕೆ ಸಂಬಂಧಿಸಿ ಸಹ ಪ್ರಸ್ತಾಪಿಸಬಹುದಾಗಿದೆ. **"ಫಲಮ್ಮಾ ತವಪ್ಫೈತನೀ"** ಎಂಬ ವಾಕ್ಯಕ್ಕೆ ಅಸಾಧ್ಯವೇ ಆಗಿರುವ ಅರ್ಥ "ನೀನು ನನ್ನನ್ನು ಪೂರ್ಣವಾಗಿ ಎತ್ತಿಕೊಂಡಾಗ" ಎನ್ನುವುದು ಸರಿ ಎಂದು ಊಹಿಸುವುದಾದರೆ ಅದರ ಅರ್ಥ ಆಕಾಶಕ್ಕೆ ಎತ್ತಿಕೊಂಡಾಗ ಎಂದು ಸಹ ಊಹಿಸಬಹುದು. ಹೀಗೆ ಸಂಭವಿಸುವುದು ಅಸಾಧ್ಯವಾದರೂ ನಾವು ಹಾಗೆ ಅರ್ಥವಿದೆ ಎಂದು ಊಹಿಸಿದರೂ ಹಝ್‌ರತ್ ಈಸಾ ಮಸೀಹ್ ಆಕಾಶದಿಂದ ಇಳಿದು ಬರಲಾರರೆಂದು ಖಂಡಿತವಾದ ಸಾಕ್ಷ್ಯಾಧಾರವಾಗುತ್ತದೆ. ಏಕೆಂದರೆ ಹಝ್‌ರತ್ ಈಸಾ ಮಸೀಹ್ ಪುನರುತ್ಥಾನದ ದಿನ ಅಲ್ಲಾಹನೊಂದಿಗೆ, ತನ್ನ ಸಮುದಾಯ ಬಿಗಡಾಯಿಸಿದುದು ತನಗೆ ತಿಳಿದಿಲ್ಲವೆಂದು ಹೇಳುವರು ಎನ್ನುವುದು ಸರ್ವರೂ ಸಮ್ಮತಿಸಿರುವ ವಿಷಯವಾಗಿದೆ. ಇದರಿಂದ ತಿಳಿಯುವುದೇನೆಂದರೆ, ಅವರು ಖಿಯಾಮತ್ ದಿನದ ಮೊದಲು ತನ್ನ ಸಮುದಾಯ ಬಿಗಡಾಯಿಸಿದುದನ್ನು ಎಂದೂ ಕಾಣಲಾರರು. ಪುನರುತ್ಥಾನದ ದಿನದ ಮೊದಲು ಹಝ್‌ರತ್ ಈಸಾ ಮಸೀಹರಿಗೆ ತನ್ನ ಸಮುದಾಯ ತನ್ನನ್ನು ದೇವನೆಂದು ಆರಾಧಿಸುತ್ತಾರೆಂದು ಎಂದೂ ತಿಳುವಳಿಕೆಗೆ ಬರಲಾರದು ಎಂದು ನಾವು ಇದರ ಮೊದಲು ವಿವರಿಸಿದ್ದೇವೆ. ಹಝ್‌ರತ್ ಈಸಾ ಮಸೀಹರೇ ಇಳಿದು ಬರುವವರಾದರೆ ತನ್ನ ಸಮುದಾಯ ಬಿಗಡಾಯಿಸಿದ ಬಗ್ಗೆ ಅವರಿಗೆ ನಿಶ್ಚಯವಾಗಿಯೂ ತಿಳಿಯುವುದು. ಮಸೀಹರ ಕೆಲಸವೇ ಶಿಲುಬೆಯನ್ನು ಒಡೆಯುವುದಾಗಿರುವಾಗ ಅದರ ಬಗ್ಗೆ ತಿಳಿದಿಲ್ಲ ಎಂದು ಹೇಳುವುದಾದರೂ ಹೇಗೆ? ಆದುದರಿಂದ ದೃಢವಾಗಿ ತಿಳಿಯುವುದೇನೆಂದರೆ, ಹಝ್‌ರತ್ ಈಸಾ ಮಸೀಹ್ ಆಕಾಶವನ್ನೇರಿ ಹೋಗಿರುವರೆಂಬುದು ಅಸಂಭವ್ಯವಾದರೂ ಹಾಗೆಯೇ ಸಂಭವಿಸಿತೆಂದು ಊಹಿಸುವುದಾದರೂ ಆಗಮಿಸಲಿರುವ ವಾಗ್ದತ್ತ ಮಸೀಹ್ ನಿಶ್ಚಯವಾಗಿಯೂ ಬೇರೆಯೇ ಮಹಾನುಭಾವರು ಆಗಿರುವರು ಮತ್ತು ಹಝ್‌ರತ್ ಈಸಾ ಮಸೀಹ್ ಆಕಾಶದಲ್ಲಿ ಎಲ್ಲಿಯಾದರೂ ಮೃತನಾಗಿ ದಫನು ಗೊಳಿಸಲ್ಪಟ್ಟಿರಬಹುದು. ಏಕೆಂದರೆ ಆಕಾಶದಲ್ಲಿದ್ದರೂ ಅವರು ಮೃತರಾಗದೆ ರಕ್ಷಿಸಲ್ಪಡಲು ಸಾಧ್ಯವಿಲ್ಲ. ಏಕೆಂದರೆ ಪವಿತ್ರ ಖುರ್‌ಆನ್ ಹೇಳುತ್ತದೆ: **ಕುಲ್ಲು ನಫ್‌ಸಿನ್ ದ್ಹಾಯಿಖತುಲ್ ಮೌತ್** – ಪ್ರತಿಯೊಂದು ಜೀವಿಯೂ ಮರಣದ ರುಚಿ ನೋಡಬೇಕಾಗಿದೆ. (3 :186). ಇನ್ನೊಂದು ವಚನ ಹೀಗಿದೆ: **ಅಯ್‌ನ ಮಾತಕೂನು ಯುದ್‌ರಿಕ್‌ಕುಮುಲ್ ಮೌತು ವ ಲವ್ ಕುನ್‌ತುಮ್ ಫೀ ಬುರೂಜಿನ್ ಮುಶಯ್ಯದ** – ನೀವು ಎಲ್ಲಿದ್ದರೂ – ಭದ್ರವಾಗಿ ನಿರ್ಮಿಸಲಾದ ಕೋಟೆಯಲ್ಲಿ ನೀವಿದ್ದರೂ – ಮರಣವು ನಿಮ್ಮನ್ನು ಹಿಡಿಯುವುದು. (4 :79).

**ಮಸೀಹ್ ಮೌಊದ್ ಮುಸ್ಲಿಮ್ ಸಮುದಾಯದಲ್ಲೇ ಜನಿಸುವರೆಂದು ಹದೀಸುಗಳು ಸ್ಪಷ್ಟವಾಗಿ ಹೇಳುತ್ತವೆ.**

ಪವಿತ್ರ ಖುರ್‌ಆನ್ ಮಾತ್ರವಲ್ಲ ಹದೀಸುಗಳು ಸಹ ಮಸೀಹ್ ಮೌಊದ್ ಮುಸ್ಲಿಮ್ ಸಮುದಾಯದಲ್ಲೇ ಜನಿಸುವರೆಂದು ಹೇಳುತ್ತವೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: **ಕೈಫ ಅನ್‌ತುಮ್ ಇದ್ಹಾ ನಝುಲಬ್ನು ಮರ್‌ಯಮ ಫೀಕುಮ್ ವ ಇಮಾಮುಕುಮ್ ಮಿನ್‌ಕುಮ್** – "ಇಬ್ನು ಮರ್‌ಯಮ್ ನಿಮ್ಮ ಬಳಿಗೆ ನಿಮ್ಮ ಇಮಾಮರಾಗಿ ಇಳಿದು ಬರುವಾಗ ನಿಮ್ಮ ಸ್ಥಿತಿ ಎಷ್ಟು ಉತ್ತಮವಾಗಿರುವುದು!" (ಬುಖಾರಿ ಕಿತಾಬು ಬರಉಲ್ ಖಲ್‌ಖ್). ಈ ಹದೀಸು* ಸ್ಪಷ್ಟವಾಗಿ ಮತ್ತು ಯಾವುದೇ ವ್ಯಾಖ್ಯಾನದ ಆವಶ್ಯಕತೆ ಇಲ್ಲದೆ ವಾಗ್ದತ್ತ ಮಸೀಹರು ಮುಸ್ಲಿಮರಲ್ಲಿಯೇ ಒಬ್ಬ ವ್ಯಕ್ತಿಯಾಗಿ ಮುಸ್ಲಿಮರ ಇಮಾಮರಾಗುವರು ಎಂದು ಹೇಳುತ್ತದೆ. **ಇಮಾಮುಕುಮ್ ಮಿನ್‌ಕುಮ್** (ನಿಮ್ಮ ಇಮಾಮ್ ನಿಮ್ಮಿಂದ) ಎಂದು ಸ್ಪಷ್ಟವಾಗಿ ಈ ಹದೀಸು ಹೇಳುತ್ತದೆ. ಆಗಮಿಸುವವರ ಹೆಸರನ್ನು ಇಬ್ನು ಮರ್‌ಯಮ್‌ಎಂಬ ಹೆಸರಿನಿಂದ ನಿಶ್ಚಯವಾಗಿಯೂ ಕರೆಯಲಾಗಿದೆ. ಆದರೆ ಮಿನ್‌ಕುಮ್ (ನಿಮ್ಮಿಂದಲೇ) ಎಂಬ ಪದ ಉಚ್ಚ ಧ್ವನಿಯಲ್ಲಿ ಹೀಗೆ ಹೇಳುತ್ತದೆ: ಈ ಇಬ್ನು ಮರ್‌ಯಮ್ ಹಿಂದೆ ಆಗಮಿಸಿದ ಇಬ್ನು ಮರ್‌ಯಮ್ ಅಲ್ಲ. ಈ ಇಬ್ನು ಮರ್‌ಯಮ್ ನಿಮ್ಮ ಪೈಕಿ ಒಬ್ಬರಾಗುವರು ಎಂದು ಮುಸ್ಲಿಮರೊಂದಿಗೆ ಹೇಳುತ್ತದೆ. ಆಗಮಿಸುವ ವಾಗ್ದತ್ತ ಮಸೀಹ್ ಹಿಂದೆ ಆಗಮಿಸಿದ ಹಝ್‌ರತ್ ಈಸಾ ಮಸೀಹರೇ ಆಗಿದ್ದರೆ ಮಿನ್‌ಕುಮ್ ಪದದ ಅರ್ಥವಾದರೂ ಏನು? ದೇವನಿಗೋಸ್ಕರ ತಂಪು ಹೃದಯದಿಂದ ಯೋಚಿಸಿರಿ. ಮಿನ್‌ಕುಮ್

*ಈ ಹದೀಸಿನ ಬಗ್ಗೆ ಕೆಲವರು ಈ ಹದೀಸಿನಲ್ಲಿರುವ ಇಮಾಮುಕುಮ್ ಮಿನ್‌ಕುಮ್ (ನಿಮ್ಮ ಇಮಾಮ್ ನಿಮ್ಮಿಂದ) ಎಂಬ ಪದಗಳು ಮಸೀಹರ ಬಗ್ಗೆ ಅಲ್ಲ; ಮಹ್‌ದಿಯ ಬಗ್ಗೆ ಪ್ರಸ್ತಾಪಿಸಲಾದುದು ಎಂದು ಹೇಳುತ್ತಾರೆ. ಮಹ್‌ದಿ, ಮಸೀಹರ ಕಾಲದಲ್ಲಿ ಆಗಮಿಸುವವರು ಎಂದೂ ಅವರು ಮುಸ್ಲಿಮರ ಇಮಾಮ್ ಆಗುವರೆಂದೂ ಅವರು ಹೇಳುತ್ತಾರೆ. ಗಮನಾರ್ಹವಾದ ವಿಷಯವೇನೆಂದರೆ, ಈ ಹದೀಸು ಸಹೀಹ್ ಬುಖಾರಿಯಲ್ಲಿರುವುದಾಗಿದೆ. ಆ ಗ್ರಂಥದಲ್ಲಿ ಇಮಾಮ್ ಮಹ್‌ದೀ ಬರುವ ಬಗ್ಗೆ ಒಂದು ಅಧ್ಯಾಯವಾಗಲಿ (ಬಾಬ್) ಇಲ್ಲ. ಇದರ ಕಾರಣವೇನೆಂದರೆ ಮಹ್‌ದಿಯ ಬಗ್ಗೆ ಹದೀಸುಗಳು ಎಷ್ಟು ವೈವಿಧ್ಯಪೂರ್ಣವಾಗಿದೆ ಎಂದರೆ ಯಾವುದೇ ಹದೀಸು ಬಗ್ಗೆ ಅದು ಸಹೀಹ್ (ಸರಿಯಾದುದು) ಎಂದು ದೃಢವಾಗಿ ಹೇಳಲು ಸಾಧ್ಯವಿಲ್ಲ. ಇಮಾಮುಕುಮ್ ಮಿನ್‌ಕುಮ್ ಎಂದು ಹೇಳಿದುದು ಮಹ್‌ದಿಯ ಬಗ್ಗೆ ಆಗಿದ್ದರೆ ಹದೀಸು ಪಂಡಿತರಲ್ಲಿ ಅಗ್ರಗಣ್ಯರಾದ ಬುಖಾರಿಯವರು ಮಹ್‌ದಿಯ ಆಗಮನ ಎಂಬ ಒಂದು ಶೀರ್ಷಿಕೆ ನೀಡಿ ಒಂದು ಅಧ್ಯಾಯದಲ್ಲಿ ಮಹ್‌ದಿಯ ಬಗ್ಗೆ ಈ ಹದೀಸನ್ನು ಉಲ್ಲೇಖಿಸುತ್ತಿದ್ದರು. ಆದರೆ ಬುಖಾರಿಯವರು ಈ ಹದೀಸನ್ನು ಮಸೀಹರಿಗೆ ಸಂಬಂಧಿಸಿ ಬರೆದಿರುವರು ಮತ್ತು ಮಹ್‌ದಿಯ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ. ಆದುದರಿಂದ ಇಮಾಮುಕುಮ್ ಮಿನ್‌ಕುಮ್ ಎಂಬ ಪದಗಳು ಮಹ್‌ದಿಯನ್ನು ಸೂಚಿಸುತ್ತವೆ ಎಂದು ಅವರು ಎಂದೂ ಪರಿಗಣಿಸಿಲ್ಲ. ಏಕೆಂದರೆ ಅವರು ಹಾಗೆ ಭಾವಿಸಿದ್ದರೆ ಈ ಹದೀಸನ್ನು ಮಹ್‌ದಿಯ ಆಗಮನದ ಸಾಕ್ಷ್ಯಾಧಾರವಾಗಿ ಮುಂದಿರಿಸುತ್ತಿದ್ದರು. ಇಮಾಮ್ ಮುಸ್ಲಿಮ್ ಎಂಬ ಹದೀಸು ಪಂಡಿತರು ಸಹ ಹೀಗೆಯೇ ಮಾಡಿರುವರು. ಅವರು ಇಮಾಮುಕುಮ್ ಮಿನ್‌ಕುಮ್‌ಗೆ ಬದಲಾಗಿ ಅಮ್ಮಕುಮ್ ಮಿನ್‌ಕುಮ್ ಎಂಬ ವರದಿ ನೀಡಿ ಇದರ ಬಗ್ಗೆ ತೀರ್ಪು ಹೇಳಿರುವರು.

ಎಂಬ ಪದ ಹಝ್ರತ್ ಈಸಾ ಅಲೈಹಿಸ್ಸಲಾಮರ ಪುನರಾಗಮನದ ಎಲ್ಲ ಪ್ರತೀಕ್ಷೆಗಳನ್ನೂ ನಿರಾಕರಿಸುವುದಿಲ್ಲವೇ? ಇಬ್ನು ಮರ್‌ಯಮ್ ಎಂಬ ಪದಗಳನ್ನು ಬಳಸಿದುದರ ಔಚಿತ್ಯವೇನೆಂದು ನಾನು ಮುಂದೆ ವಿವರಿಸುವೆನು.

**ಮಿನ್‌ಕುಮ್** ಎಂಬ ಪದ ಹಿಂದೆ ಆಗಮಿಸಿದ ಹಝ್ರತ್ ಈಸಾ ಅಲೈಹಿಸ್ಸಲಾಮರು ಪುನರಾಗಮಿಸುವರು ಎಂಬ ವಿಶ್ವಾಸದ ಬೇರನ್ನು ಕಡಿದು ಹಾಕಿಲ್ಲವೇ? ಎಂದು ನೋಡಿರಿ. ಜನರ ವರ್ತನೆ ನೋಡಿ ನಾನು ಆಶ್ಚರ್ಯದ ಕಡಲಲ್ಲಿ ಮುಳುಗಿ ಹೋಗುತ್ತಾ ಇದ್ದೇನೆ. ಜನರು ಒಳಿತುಗಳನ್ನು ತಮ್ಮ ಕಡೆಗೆ ಸಂಬಂಧಿಸಿ ಹೇಳಲು ಎಷ್ಟು ಉತ್ಸುಕರಾಗುತ್ತಾರೆಂದರೆ ಯಾವ ವಿಷಯಗಳ ಬಗ್ಗೆ ಅವು ತಮಗಿವೆ ಎಂದು ಹೇಳಲು ಅರ್ಹತೆ ಇಲ್ಲವೋ ಅಂತಹ ವಿಷಯಗಳನ್ನು ಕೂಡ ತಮಗೆ ಸಂಬಂಧಿಸಿವೆ ಎಂದು ಹೇಳಲು ಹಿಂಜರಿಯುವುದಿಲ್ಲ. ಆದರೆ ಮುಸ್ಲಿಮರು ಎಂತಹ ಸಮುದಾಯದವರಾಗಿದ್ದಾರೆಂದರೆ, ಅಲ್ಲಾಹನಿಂದ ನೀಡಲಾದ ಅನುಗ್ರಹವನ್ನು ಕೂಡ ತಮಗೆ ಅದು ಸಂಬಂಧಿಸಿದೆ ಎಂದು ಹೇಳಲು ಇಷ್ಟಪಡುವುದಿಲ್ಲ.

ನಮ್ಮ ಯಜಮಾನರಾದ ಪ್ರವಾದಿಗಳ ನಾಯಕರಾದ ಖಾತಮುನ್ನಬಿಯ್ಯೀನ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: "ಎಲೈ ಮುಸ್ಲಿಮರೇ, ನಿಮ್ಮಲ್ಲಿ ಒಬ್ಬ ಮಸೀಹ್ ಬರುವರು. ಅವರು ನಿಮ್ಮಿಂದಲೇ ನಿಮ್ಮ ಇಮಾಮ್ ಆಗಿ ಆಗಮಿಸುವರು."

ಆದರೆ ಮುಸ್ಲಿಮರು ಹೇಳುತ್ತಾರೆ: ಈ ಅನುಗ್ರಹ ಈ ಸಮುದಾಯಕ್ಕೆ ಸಿಗುವುದಾದರೂ ಹೇಗೆ? ಈ ಸಮುದಾಯಕ್ಕೆ ಹಝ್ರತ್ ಈಸಾ ಅಲೈಹಿಸ್ಸಲಾಮರೇ ಬರುವರೆಂದು ಬರೆದಿದೆ.

ನಾನು ಓದುಗರೊಂದಿಗೆ ಹೇಳಲು ಬಯಸುತ್ತೇನೆ – ಅವರು, **ಕೈಫ ಅನ್‌ತುಮ್ ಇಧಾ ನಝುಲಬ್ನು ಮರ್‌ಯಮ ಫೀಕುಮ್ ವ ಇಮಾಮುಕುಮ್ ಮಿನ್‌ಕುಮ್**. "ಇಬ್ನು ಮರ್‌ಯಮ್ ನಿಮ್ಮ ಬಳಿಗೆ ನಿಮ್ಮ ಇಮಾಮರಾಗಿ ಇಳಿದು ಬರುವಾಗ ನಿಮ್ಮ ಸ್ಥಿತಿ ಎಷ್ಟು ಉತ್ತಮವಾಗಿರುವುದು!" (ಬುಖಾರಿ) ಎಂಬ ಹದೀಸನ್ನು ಪುನಃ ನೋಡಲಿ.

ನೀವು ನೋಡಿರಿ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಮುದಾಯದಲ್ಲಿ ಒಬ್ಬ ವೈಭವಶಾಲಿ ಮಹಾನುಭಾವರು ಆಗಮಿಸುವುದು ತನ್ನ ಸಮುದಾಯಕ್ಕೆ ಶುಭದಾಯಕವಾಗುವುದೆಂದು ಸಂತೋಷ ಸೂಚಿಸುತ್ತಿದ್ದಾರೆ. ನೀವು ಚಿಂತಿಸಿರಿ, ಇಸ್ರಾಈಲ್ ಸಂತತಿಗಳಿಗೆ ಆಗಮಿಸಿದ ಮಸೀಹ್ ಮೂಲಕ ಮುಸ್ಲಿಮ್ ಸಮುದಾಯಕ್ಕೆ ಲಭಿಸುವ ಸಂತೋಷವಾದರೂ ಏನು? ಮುಸ್ಲಿಮ್ ಸಮುದಾಯದ ಸುಧಾರಣೆಗೆ ಅನ್ಯ ಸಮುದಾಯದ ವ್ಯಕ್ತಿಯ ಆವಶ್ಯಕತೆ ಉಂಟಾಗುವ ದಿನವು ದುಃಖದ ದಿನವಾಗಿರುವುದು. ಏಕೆಂದರೆ ನಮ್ಮ ಯಜಮಾನರಾದ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಆಧ್ಯಾತ್ಮಿಕ ಶಕ್ತಿಗೆ ಮುಸ್ಲಿಮ್ ಸಮುದಾಯದಿಂದ ಒಬ್ಬ ಸುಧಾರಕನನ್ನು ಹುಟ್ಟಿಸಲು ಸಾಧ್ಯವಾಗಲಿಲ್ಲ ಎಂದು ಇದರ ಅರ್ಥವಾಗುತ್ತದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು "ನನ್ನ ಸಮುದಾಯ ಕೆಟ್ಟು ಹೋಗುವಾಗ ನನ್ನ ಸಮುದಾಯದ ಸುಧಾರಣೆಯ ಕೆಲಸ ಮಾಡಲು ನನ್ನ ಸಮುದಾಯದಿಂದ ಹುಟ್ಟಿ ಬರಲು ಅರ್ಹತೆ ಯಾರೂ ಗಳಿಸದ ಕಾರಣ ಅಲ್ಲಾಹನು ಇಸ್ರಾಈಲ್ ಸಂತತಿಗಳಿಗೆ ಕಳುಹಿಸಿದ ಮಸೀಹರನ್ನು ಮುಸ್ಲಿಮ್ ಸಮುದಾಯಕ್ಕೆ ಕಳುಹಿಸಬೇಕಾದ ಆವಶ್ಯಕತೆ ಉಂಟಾಯಿತು" ಎಂದು ಸಂತೋಷಪಡುವರೇ? **ಲಾ ಹೌಲಾ ವಲಾ ಖುವ್ವತ ಇಲ್ಲಾ ಬಿಲ್ಲಾಹಿಲ್ ಅಝೀಂ.**

## ಹದೀಸಿನಲ್ಲಿ ಇಬ್ಬರು ಮಸೀಹರ ಬೇರೆ ಬೇರೆ ಛಾಯಾಚಿತ್ರಗಳು ಕಾಣಿಸುತ್ತವೆ

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು **"ಇಮಾಮುಕುಮ್ ಮಿನ್‌ಕುಮ್"** (ನಿಮ್ಮ ಇಮಾಮ್ ನಿಮ್ಮಿಂದಲೇ) ಎಂದು ಹೇಳಿ ಎಲ್ಲ ಜಗಳಗಳಿಗೆ ತೀರ್ಪು ಹೇಳಿದ್ದಾರೆ. ಯಾವುದೇ ಸಂಶಯವು ಬಾಕಿಯಾಗಿ ಉಳಿದಿಲ್ಲ. ಆದರೆ ಅವರಿಗೆ ತಮ್ಮ ಸಮುದಾಯದ ಬಗ್ಗೆ ಇರುವ ವಾತ್ಸಲ್ಯವನ್ನು ನೋಡಿರಿ! ವಾಗ್ದತ್ತ ಮಸೀಹ್ ನನ್ನ ಸಮುದಾಯದಿಂದಲೇ ಬರುವರು ಎಂದು ಸ್ಪಷ್ಟವಾಗಿ ಹೇಳಿದ ನಂತರ ಅವರು ಅದರ ಬಗ್ಗೆ ಹೆಚ್ಚು ವಿಶದೀಕರಿಸಿ ಸಹ ಹೇಳಿದ್ದಾರೆ. ಹಝ್ರತ್ ಈಸಾ ಮಸೀಹ್ ಲೋಕಕ್ಕೆ ಪುನರಾಗಮಿಸುವರೆಂಬ ಯೋಚನೆ ಮುಸ್ಲಿಮರ ಹೃದಯದಿಂದ ಸಂಪೂರ್ಣ ಹೊರಟು ಹೋಗುವಂತೆ ಮಾಡಿದ್ದಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವರು:

**ರಅಯ್‌ತು ಈಸಾ ವ ಮೂಸಾ ವ ಇಬ್ರಾಹೀಮ ಫ ಅಮ್ಮಾ ಫ ಅಹ್‌ಮರು ಜಅ್‌ದುನ್ ಅರೀಝುಸ್ಸದ್‌ರಿ ವ ಅಮ್ಮಾ ಮೂಸಾ ಫ ಆದಮ ಜಸೀಮುನ್ ಸಬ್‌ತಶ್ಶಅ್‌ರಿ ಕಅನ್ನಹು ಮಿನ್ ರಿಜಾಲಿಝ್ಝುತ್ತಿ ವ ಅಮಾ ಇಬ್ರಾಹೀಮು ಫನ್‌ಝುರೂ ಇಲಾ ಸಾಹಿಬಿಕುಮ್.**

"ನಾನು ಸ್ವಪ್ನದಲ್ಲಿ ಈಸಾ, ಮೂಸಾ, ಇಬ್ರಾಹೀಮ್‌ರನ್ನು ಕಂಡೆನು. ಈಸಾ ಕೆಂಪು ಬಣ್ಣದವರಾಗಿದ್ದರು. ಅವರು ಗುಂಗುರು ತಲೆಗೂದಲನ್ನು ಹೊಂದಿದ್ದರು. ಅವರ ಎದೆ ಅಗಲವಾಗಿತ್ತು. ಮೂಸಾ ಗೋದಿವರ್ಣದವರಾಗಿದ್ದರು. ಅವರ ಶರೀರ ದಷ್ಟಪುಷ್ಟವಾಗಿತ್ತು. ಝುತ್ ಗೋತ್ರದ ಒಬ್ಬನ ಹಾಗೆ ಅವರು ಕಾಣಿಸುತ್ತಿದ್ದರು. ಇಬ್ರಾಹೀಮರನ್ನು ನೋಡುವುದಾದರೆ ನನ್ನನ್ನು ನೋಡಿರಿ." (ಸಹೀಹ್ ಬುಖಾರಿ, ಕಿತಾಬು ಬದಉಲ್ ಖಲ್‌ಖ್).

ಈ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಈಸಾ ಮಸೀಹರ ಶರೀರ ಹೇಗಿತ್ತೆಂದು ವಿವರಿಸಿದ್ದಾರೆ: ಅವರು ಕೆಂಪು ಬಣ್ಣ ಮತ್ತು ಗುಂಗುರು ತಲೆಗೂದಲನ್ನು ಹೊಂದಿದ್ದರು. ಈ ಹದೀಸು ಹಝ್ರತ್ ಈಸಾ ಮಸೀಹರ ಬಗ್ಗೆ ವಿವರಿಸುತ್ತದೆ ಎಂಬ ವಿಷಯ ಈ ಹದೀಸಿನಿಂದಲೇ ಸ್ಪಷ್ಟವಾಗುತ್ತದೆ. ಹಿಂದೆ ಆಗಮಿಸಿದ ಹಝ್ರತ್ ಮೂಸಾ ಮತ್ತು ಹಝ್ರತ್ ಇಬ್ರಾಹೀಮರೊಂದಿಗೆ ಅವರ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಹಝ್ರತ್ ಈಸಾ ಮಸೀಹರ ಶರೀರ ಲಕ್ಷಣಗಳು ಮೇಲೆ ಉಲ್ಲೇಖಿಸಿದ ಹದೀಸಿನಲ್ಲಿ ವಿವರಿಸಲಾಗಿದೆ. ಅದನ್ನು ನೆನಪಿಡಿರಿ. ಇನ್ನೊಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್

ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: **ಬೈನಮಾ ಅನ ನಾಇಮುನ್ ಅತೂಫು ಬಿಲ್ ಕಅಬತಿ ಫಇದ್ಹಾ ರಜುಲುನ್ ಆದಮು ಸಬ್‌ತುಶ್ಶ್‌ಅ್‌ರಿ ಫ ಖುಲ್‌ತು ಮನ್‌ಹಾದ್ಹಾ ಖಾಲೂ ಹಾದ್ಹಾ ಮಸೀಹುಬ್ನು ಮರ್‌ಯಮ.**

"ನಾನು ಸ್ವಪ್ನದಲ್ಲಿ ಕಅ್‌ಬವನ್ನು ಪ್ರದಕ್ಷಿಣೆ ಮಾಡುವುದಾಗಿ ಕಂಡೆನು. ಅಚಾನಕವಾಗಿ ಒಬ್ಬ ವ್ಯಕ್ತಿ ನನ್ನ ಎದುರಿಗೆ ಬಂದರು. ಅವರ ಬಣ್ಣ ಗೋದಿ ಬಣ್ಣದಾಗಿತ್ತು. ತಲೆಗೂದಲು ನೇರವೂ ನೀಳವೂ ಆಗಿತ್ತು. ಇವರು ಯಾರೆಂದು ನಾನು ವಿಚಾರಿಸಿದೆ. ಅವರು ಇಬ್ನು ಮರ್‌ಯಮ್ ಎಂದು ನನಗೆ ತಿಳಿಸಲಾಯಿತು." (ಸಹೀಹ್ ಬುಖಾರಿ – ಬಾಬ್ ಧಿಕ್ರುದಜ್ಜಾಲ್).

ಈ ಹದೀಸಿನಲ್ಲಿ ಹಝ್ರತ್ ಪೈಗಂಬರರು(ಸ) ಆಗಮಿಸಲಿರುವ ಮಸೀಹರ ಶರೀರ ಲಕ್ಷಣಗಳನ್ನು ವಿವರಿಸಿರುವರು – ಗೋದಿ ವರ್ಣದವರಾಗಿದ್ದು ಅವರ ತಲೆಗೂದಲು ನೇರವಾಗಿಯೂ ನೀಳವಾಗಿಯೂ ಇರುವುದಾಗಿ. ಇಲ್ಲಿ ಮಸೀಹರೆಂದು ಹೇಳಿದುದು ವಾಗ್ದತ್ತ ಮಸೀಹರ ಬಗ್ಗೆ ಎಂಬುದಕ್ಕೆ ಪುರಾವೆ ಈ ಹದೀಸಿನ ಮುಂದಿನ ಭಾಗದಲ್ಲಿದೆ. ನಾನು ಆಗ ದಜ್ಜಾಲನನ್ನು ನೋಡಿದೆನೆಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾರೆ. ಆದುದರಿಂದ ದಜ್ಜಾಲನನ್ನು ಎದುರಿಸಲು ಪ್ರಕಟವಾಗುವ ಮಸೀಹರ ಬಗ್ಗೆಯೇ ಈ ಹದೀಸಿನಲ್ಲಿ ಪ್ರಸ್ತಾಪಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಈಗ ಎಲ್ಲವೂ ಚೆನ್ನಾಗಿ ಸ್ಪಷ್ಟವಾಯಿತು. ಬನೀ ಇಸ್ರಾಈಲರಿಗೆ ಆಗಮಿಸಿದ ಈಸಾ ಮಸೀಹರ ಶರೀರ ಲಕ್ಷಣವಾಗಿ ಅವರ ಬಣ್ಣ ಕೆಂಪು ಎಂದೂ ತಲೆಗೂದಲು ಗುಂಗುರು ಆಗಿರುವುದೆಂದೂ ಹೇಳಿರುವರು. ದಜ್ಜಾಲನ ಕಾಲಘಟ್ಟದಲ್ಲಿ ಆಗಮಿಸಲಿರುವ ವಾಗ್ದತ್ತ ಮಸೀಹರು ಗೋದಿ ವರ್ಣದವರು ಆಗಿರುವರೆಂದೂ ಅವರ ತಲೆಗೂದಲು ನೇರವೂ ನೀಳವೂ ಆಗಿರುವುದೆಂದೂ ಹೇಳಿರುವರು. ಇಬ್ಬರ ಶರೀರ ಲಕ್ಷಣಗಳ ವ್ಯತ್ಯಾಸ ಸ್ಪಷ್ಟವೂ ಯಾವುದೇ ವ್ಯಾಖ್ಯಾನದ ಆವಶ್ಯಕತೆ ಇಲ್ಲದುದೂ ಆಗಿದೆ. ಕೆಂಪು ಬಣ್ಣ ಮತ್ತು ಗೋದಿಯ ಬಣ್ಣ ಎಷ್ಟು ವ್ಯತ್ಯಾಸ ಹೊಂದಿವೆ! ಇದೇ ರೀತಿ ನೇರಗೂದಲು ಮತ್ತು ಗುಂಗುರು ಕೂದಲುಗಳ ವ್ಯತ್ಯಾಸವಿದೆ.

ಹಝ್ರತ್ ಪೈಗಂಬರ್(ಸ) ಮೇಲಿನ ವಿವರಣೆಗಳ ಮೂಲಕ ಹೀಗೆ ಹೇಳಲು ಬಯಸಿದ್ದರು: "ಎಲೈ ಮುಸ್ಲಿಮರೇ, ಇಬ್ನು ಮರ್‌ಯಮ್ ಎಂಬ ಹೆಸರಿನ ಕಾರಣ ಬನೀ ಇಸ್ರಾಈಲ್ ಜನರಿಗೆ ಆಗಮಿಸಿದ ಈಸಾ ಮಸೀಹರೇ ಆಗಮಿಸುವರೆಂದು ತಪ್ಪು ಗ್ರಹಿಕೆಗೆ ಈಡಾಗದಿರಿ. ಅವರ ಬಣ್ಣ ಕೆಂಪಾಗಿದ್ದು ತಲೆಗೂದಲು ಗುಂಗುರಾಗಿತ್ತು. ಆದರೆ ಬರಲಿರುವ ಮಸೀಹರು ಗೋದಿ ಬಣ್ಣದವರಾಗಿದ್ದು ಅವರ ತಲೆಗೂದಲು ನೇರವೂ ನೀಳವೂ ಆಗಿರುವುದು.

ಇದಕ್ಕಿಂತ ಹೆಚ್ಚಿನ ವಿವರಣೆ ಏನಿದೆ? ಇಬ್ಬರು ಮಸೀಹರ ಚಿತ್ರಗಳನ್ನು ಜನರ ಮುಂದಿರಿಸಲಾಗಿದೆ. ಆ ಚಿತ್ರಗಳು ಹಝ್ರತ್ ಪೈಗಂಬರರು(ಸ) ಸ್ವತಃ ವಿವರಿಸಿದವುಗಳಾಗಿವೆ. ಈ ಎರಡು ಚಿತ್ರಗಳಲ್ಲಿ ಒಬ್ಬ ವ್ಯಕ್ತಿಯ ರೂಪ ಮಾತ್ರ ಕಾಣಿಸುತ್ತದೆಯೇ ಎಂದು ನೋಡಿರಿ. ಕಣ್ಣಿರುವವರು ಎರಡು ಚಿತ್ರಗಳು ಒಬ್ಬನನ್ನೇ ತೋರಿಸುತ್ತವೆ ಎಂದು ಹೇಳಲಾರರು.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಒಂದು ಫಾರ್ಸಿ ಪದ್ಯದಲ್ಲಿ ಹೀಗೆ ಹೇಳಿದ್ದಾರೆ:

"ಹದೀಸುಗಳಲ್ಲಿ ವಿವರಿಸಲಾದ ಶರೀರ ಲಕ್ಷಣಗಳನ್ನು ಹೊಂದಿ ಆಗಮಿಸಿದ ವಾಗ್ದತ್ತ ಮಸೀಹ್ ನಾನೇ ಆಗಿರುವೆನು. ಕಣ್ಣಿದ್ದರೂ ನನ್ನನ್ನು ಕಾಣದೆ ಇರುವವರ ಬಗ್ಗೆ ಖೇದವಾಗುತ್ತದೆ. ನಾನು ಗೋದಿ ಬಣ್ಣವನ್ನು ಹೊಂದಿದ್ದೇನೆ. ನನ್ನ ತಲೆಗೂದಲು ಸಹ ಹಝ್ರತ್ ಪೈಗಂಬರ್(ಸ) ಹೇಳಿದ ವ್ಯಕ್ತಿಯ ತಲೆಗೂದಲಿಗಿಂತ ಬೇರೆಯೇ ರೀತಿಯಲ್ಲಿದೆ. ನಾನು ವಾಗ್ದತ್ತ ಮಸೀಹ್ ಎಂಬುದರ ಬಗ್ಗೆ ಯಾವುದೇ ಸಂಶಯಕ್ಕೆ ಆಸ್ಪದವಿಲ್ಲ. ಏಕೆಂದರೆ ಹಝ್ರತ್ ಪೈಗಂಬರರು(ಸ) ನನ್ನನ್ನು ಕೆಂಪು ಬಣ್ಣ ಹೊಂದಿದ್ದ ಈಸಾ ಮಸೀಹರಿಂದ ಬೇರೆಯಾಗಿಯೇ ಚಿತ್ರಿಸಿದ್ದಾರೆ."

## ಇನ್ನಹೂ ಲ ಇಲ್‌ಮುನ್ ಲಿಸ್ಸಾಅತ್ ಎಂಬ ವಚನದ ವ್ಯಾಖ್ಯಾನ

ಈ ವಿಷಯವನ್ನು ಮುಕ್ತಾಯಗೊಳಿಸುವ ಮೊದಲು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ಸಂಕ್ಷಿಪ್ತವಾಗಿ ವಿವರಿಸುವುದು ಪ್ರಯೋಜನಕರವಾಗುವುದು. **ಇನ್ನಹೂ ಲ ಇಲ್‌ಮುನ್ ಲಿಸ್ಸಾಅತಿ ಫಲಾತಮ್‌ತರುನ್ನಬಿಹಾ –** "ದಿಟವಾಗಿಯೂ ಇದು (ಈ ಖುರ್‌ಆನ್) ಆ ನಿಗದಿತ ವೇಳೆಯ ಬಗ್ಗೆ ಅರಿವು ನೀಡುತ್ತದೆ."(43 :62).

ನಮ್ಮ ವಿರೋಧಿಗಳಾದ ಮತಪಂಡಿತರು ಎಲ್ಲ ಕಡೆಗಳಲ್ಲೂ ನಿರಾಶರಾದ ನಂತರ ಕೆಲವು ಸಾರಿ ಪವಿತ್ರ ಖುರ್‌ಆನಿನ ಮೇಲೆ ಉಲ್ಲೇಖಿಸಿದ ವಚನವನ್ನು ಲೋಕದ ಅಂತಿಮ ಕಾಲಘಟ್ಟದಲ್ಲಿ ಹಝ್ರತ್ ಈಸಾ ಮಸೀಹರು ಆಗಮಿಸುವುದಕ್ಕೆ ಸಾಕ್ಷ್ಯವಾಗಿ ನೀಡುತ್ತಾರೆ. ನೀರಿನಲ್ಲಿ ಮುಳುಗಿ ಹೋಗುವಾಗ ಹುಲ್ಲು ಕಡ್ಡಿಯನ್ನು ಹಿಡಿಯುವುದರ ಮೂಲಕ ರಕ್ಷಣೆ ಪಡೆಯಲು ಪ್ರಯತ್ನಿಸುವ ಹಾಗೆ ಇದು ಇದೆ. ಈ ವಚನದ ಅರ್ಥ ವ್ಯಾಖ್ಯಾನದ ಬಗ್ಗೆ ಎಲ್ಲ ವ್ಯಾಖ್ಯಾನಗಾರರು ಒಮ್ಮತ ಹೊಂದಿಲ್ಲ. "ಇನ್ನಹೂ" ಎಂಬ ಶಬ್ದದ ಅರ್ಥ ನಿಶ್ಚಯವಾಗಿಯೂ ಅದು ಎಂದೂ ಅವನು ಎಂದೂ ಹೇಳಬಹುದಾಗಿದೆ. ಅನೇಕ ವ್ಯಾಖ್ಯಾನಗಾರರು ಇನ್ನಹೂ ಪದಕ್ಕೆ ನಿಶ್ಚಯವಾಗಿಯೂ ಅದು ಎಂದು ಅರ್ಥ ಹೇಳಿ 'ಹೂ' ಪದ ಪವಿತ್ರ ಖುರ್‌ಆನನ್ನು ಸೂಚಿಸುತ್ತದೆ ಎಂದು ಹೇಳಿದ್ದಾರೆ. ಈ ವಚನದ ಅರ್ಥ "ಪವಿತ್ರ ಖುರ್‌ಆನಿನಲ್ಲಿ ಖಿಯಾಮತಿನ ಸಾಕ್ಷ್ಯಾಧಾರವಿದೆ" ಎಂದಾಗಿದೆ. ಏಕೆಂದರೆ ಈ ವಚನವು ಇರುವ ಅಧ್ಯಾಯವಾದ ಝುಖ್‌ರುಫ್‌ನಲ್ಲಿ ಪವಿತ್ರ ಖುರ್‌ಆನ್ ಬಗ್ಗೆ ಪದೇ ಪದೇ ಪ್ರಸ್ತಾಪಿಸಲಾಗಿದೆ. ಅನೇಕ ಸಲ ಇನ್ನಹೂ (ನಿಶ್ಚಯವಾಗಿಯೂ ಅದು) ಎಂದು ಹೇಳಿ ಪವಿತ್ರ ಖುರ್‌ಆನನ್ನೇ ಸೂಚಿಸಿದೆ. ಇದೇ ಕಾರಣದಿಂದ ಅನೇಕ ವ್ಯಾಖ್ಯಾನಗಾರರು ಈ ವಚನ ಪವಿತ್ರ ಖುರ್‌ಆನನ್ನೇ ಸೂಚಿಸುತ್ತದೆ ಎಂದು ಹೇಳಿದ್ದಾರೆ. ಕೆಲವರು ಇನ್ನಹೂ ಎಂಬ ಪದ ಹಝ್ರತ್ ಈಸಾ ಮಸೀಹರನ್ನು ಸೂಚಿಸುತ್ತದೆ ಎಂದು ಹೇಳಿದ್ದಾರೆ. ಆದರೆ ಹೀಗೆ ಅರ್ಥ ಹೇಳಿದ ವ್ಯಾಖ್ಯಾನಗಾರರು ಎರಡು ಗುಂಪುಗಳಿಗೆ ಸೇರಿದ್ದಾರೆ. ಒಂದು ಗುಂಪಿನ ವ್ಯಾಖ್ಯಾನಗಾರರು ಹೀಗೆ ಹೇಳುತ್ತಾರೆ: ಹಝ್ರತ್ ಈಸಾ ಮಸೀಹ್ ಖಿಯಾಮತ್ ಸಂಭವಿಸುವ ಬಗ್ಗೆ ಒಂದು ಚಿಹ್ನೆಯಾಗಿದ್ದಾರೆ. ಎಂದರೆ ಅವರು ಖಿಯಾಮತ್ ಸಂಭವಕ್ಕೆ ಸಮೀಪ ಆಗಮಿಸುವರು. ಇನ್ನೊಂದು ಗುಂಪಿನ ಜನರು ಹೇಳುವುದು ಅವರು ಖಿಯಾಮತ್ ಸಂಭವಿಸುವುದಕ್ಕೆ ಒಂದು ಸಾಕ್ಷ್ಯಾಧಾರವಾಗಿದ್ದಾರೆ ಎಂದು. ಹಿಂದಿನ ಕಾಲದ ವ್ಯಾಖ್ಯಾನಗಾರರು ಮಾತ್ರವಲ್ಲ ಈಗಿನ ಕಾಲದ ಅಹ್ಮದಿಯೇತರ

ಮತಪಂಡಿತರು ಈ ವಚನಕ್ಕೆ ಅರ್ಥ ಹೇಳುತ್ತಾ ಹಝ್ರತ್ ಈಸಾ ಮಸೀಹ್ ಖಿಯಾಮತ್ ಸಂಭವಿಸುವುದಕ್ಕೆ ಒಂದು ಸಾಕ್ಷ್ಯಾಧಾರ ಎಂದು ಹೇಳಿದ್ದಾರೆ. ಉದಾಹರಣೆಗೆ, ಮೌಲವಿ ನಝೀರ್ ಅಹ್ಮದ್ ದೆಹ್ಲವೀ ಈ ವಚನಕ್ಕೆ ಮೇಲೆ ವಿವರಿಸಿದ ಅರ್ಥಗಳನ್ನು ಹೇಳಿದ್ದಾರೆ: ಅವರು ಹೀಗೆ ಟಿಪ್ಪಣಿ ಬರೆದಿದ್ದಾರೆ: "ಪಿತೃ ರಹಿತನಾಗಿ ಈಸಾ ಅಲೈಹಿಸ್ಸಲಾಮರನ್ನು ಹುಟ್ಟಿಸಲು ಸಾಮರ್ಥ್ಯವನ್ನು ಹೊಂದಿರುವ ಅಲ್ಲಾಹನು ಖಿಯಾಮತ್ ದಿನದಂದು ಮೃತರನ್ನು ಜೀವಂತಗೊಳಿಸಲು ಶಕ್ತಿ ಸಾಮರ್ಥ್ಯಗಳನ್ನು ಹೊಂದಿರುತ್ತಾನೆ. ಅಥವಾ ಈಸಾ ಅಲೈಹಿಸ್ಸಲಾಮ್ ಪುನಃ ಆಗಮಿಸುವುದು ಹದೀಸುಗಳಲ್ಲಿ ಹೇಳಿದ ಹಾಗೆ ಖಿಯಾಮತ್ ಸಮೀಪವಾಗಿರುವುದರ ಸಾಕ್ಷ್ಯಾಧಾರವಾಗಿದೆ."

ಮೌಲವಿ ನಝೀರ್ ಅಹ್ಮದ್ ದೆಹ್ಲವೀ ಈ ವಚನದ ಮೂಲ ಅರ್ಥವಾಗಿ ಹಝ್ರತ್ ಈಸಾ ಅಲೈಹಿಸ್ಸಲಾಮರ ಅದ್ಭುತಕರವಾದ ಜನನ ಖಿಯಾಮತ್‌ಗೆ ಒಂದು ಸಾಕ್ಷ್ಯಾಧಾರವಾಗಿ ಹೇಳಿದ್ದಾರೆ. ಅವರು ಇನ್ನೊಂದು ಅರ್ಥ ಸಹ ಬರೆದಿದ್ದರೂ ಅವರು ಈ ಅರ್ಥಕ್ಕೆ ಆದ್ಯತೆ ನೀಡಿದ್ದಾರೆ. ಹಝ್ರತ್ ಈಸಾ ಮಸೀಹರ ಜನನವೇ ಖಿಯಾಮತ್‌ಗೆ ಒಂದು ಸಾಕ್ಷ್ಯಾಧಾರ ಎಂದು ಹೇಳಿದ್ದಾರೆ. ಅವರ ದೃಷ್ಟಿಕೋನ ಪ್ರಕಾರ ಹೆಚ್ಚು ಅಂಗೀಕಾರ್ಹವಾದುದು ಇದೇ ಅರ್ಥವಾಗಿದೆ.

ಕೆಲವು ವ್ಯಾಖ್ಯಾನಗಾರರು "ಇನ್ನಹೂ" ಎಂದು ಹೇಳಿದುದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಎಂದು ಸಹ ಹೇಳಿದ್ದಾರೆ.

ಈ ಪರಿಸ್ಥಿತಿಯಲ್ಲಿ ಯೋಚಿಸಿರಿ. ಒಂದು ಮುಖ್ಯ ವಿಷಯದ ಬಗ್ಗೆ ಈ ವಚನವನ್ನು ಮೂಲಾಧಾರವಾಗಿ ಪರಿಗಣಿಸಲು ಸಾಧ್ಯವೇ? ಯಾವ ವಚನದ ಬಗ್ಗೆ ಅನೇಕ ವ್ಯಾಖ್ಯಾನಗಾರರು ಅದರಲ್ಲಿ ಹಝ್ರತ್ ಈಸಾ ಮಸೀಹರನ್ನು ಪ್ರಸ್ತಾಪಿಸಿಲ್ಲ, ಪವಿತ್ರ ಖುರ್‌ಆನ್ ಬಗ್ಗೆ ಪ್ರಸ್ತಾಪಿಸಲಾಗಿದೆ ಎಂದು ಹೇಳಿರುತ್ತಾರೋ ಅಂತಹ ವಚನ ಹಝ್ರತ್ ಈಸಾ ಮಸೀಹರ ಪುನರಾಗಮನವನ್ನು ಸೂಚಿಸುತ್ತದೆ ಎಂದು ನಿಮ್ಮ ಹೃದಯದ ಪ್ರಕಾಶ ಅಂಗೀಕರಿಸಲು ಸಿದ್ಧವಾಗುವುದೇ? ಇನ್ನೊಂದು ಗುಂಪಿನ ಪ್ರಕಾರ ಈ ವಚನದಲ್ಲಿ ಹಝ್ರತ್ ಈಸಾ ಮಸೀಹರ ಬಗ್ಗೆ ಪ್ರಸ್ತಾಪಿಸಿಲ್ಲ; ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗಿದೆ. ಒಂದು ಚಿಕ್ಕ ಗುಂಪಿನ ಜನರು ಈ ವಚನದಲ್ಲಿರುವ "ಇನ್ನಹೂ" ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ಸೂಚಿಸುತ್ತದೆ ಎಂದು ಹೇಳುತ್ತಾರೆ. ಈ ಗುಂಪಿನವರು ಕೂಡ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ. ಹಝ್ರತ್ ಈಸಾ ಅಲೈಹಿಸ್ಸಲಾಮರು ಅದ್ಭುತಕರವಾಗಿ ಪಿತೃರಹಿತರಾಗಿ ಜನಿಸಿದುದು ಖಿಯಾಮತ್‌ಗೆ ಒಂದು ಸಾಕ್ಷ್ಯಾಧಾರ ಎಂದು ಕೆಲವರು ಹೇಳುತ್ತಾರೆ. ಬೇರೆ ಕೆಲವರು, ಅವರು ಖಿಯಾಮತ್‌ಗೆ ಸಮೀಪ ಆಗಮಿಸುವ ಕಾರಣ ಅವರು ಖಿಯಾಮತ್‌ಗೆ ಒಂದು ಸಾಕ್ಷ್ಯವಾಗುತ್ತಾರೆಂದು ಹೇಳುತ್ತಾರೆ.

ದೆಹಲಿಯಲ್ಲಿ ಮೌಲವಿ ಮುಹಮ್ಮದ್ ಬಶೀರ್ ಭೋಪಾಲವಿಯೊಂದಿಗೆ ನಡೆದ ಬರಹ ಮೂಲಕ ವಾದ ಪ್ರತಿವಾದದಲ್ಲಿ ಈ ವಚನದ ಪ್ರಸ್ತಾಪವಾದಾಗ ವಾಗ್ದತ್ತ ಮಸೀಹರು ಹೀಗೆ ಉತ್ತರ ನೀಡಿದರು: "ನೀವು ನೀಡಿದ ನಾಲ್ಕನೆಯ ಸಾಕ್ಷ್ಯಾಧಾರದಲ್ಲಿ ಪವಿತ್ರ ಖುರ್‌ಆನಿನ ವಚನ 'ವ ಇನ್ನಹೂ ಲಇಲ್‌ಮುನ್ ಲಿಸ್ಸಾಅತಿ ಫಲಾತಮ್‌ತರುನ್ನಬಿಹಾ' ನೀಡಿರುವಿರಿ. ಈ ವಚನ ನಿಮ್ಮ ವಾದಕ್ಕೆ ಖಂಡಿತವಾದ ಸಾಕ್ಷ್ಯಾಧಾರ ನೀಡುವುದಿಲ್ಲ ಎಂದು ನೀವು ಒಪ್ಪಿಕೊಂಡಿರುವಿರಿ. ಅಲ್ಲಾಹನಿಗೋಸ್ಕರ ನಾನು ನೆನಪಿಸಿಕೊಡಲು ಬಯಸುತ್ತೇನೆ. ಹಝ್ರತ್ ಈಸಾ ಅಲೈಹಿಸ್ಸಲಾಮರ ಪುನರಾಗಮನದ ಕುರಿತು ಈ ವಚನ ಯಾವುದೇ ಸೂಚನೆ ಕೂಡ ನೀಡುವುದಿಲ್ಲ. ವಾಸ್ತವಿಕ ವಿಷಯವೇನೆಂದರೆ, ಹಝ್ರತ್ ಈಸಾ ಮಸೀಹರ ಕಾಲದಲ್ಲಿ ಯಹೂದಿಯರಲ್ಲಿ ಸದೂಖಿ ಎಂಬ ಒಂದು ಪಂಗಡ ಇತ್ತು. ಆ ಪಂಗಡ ಖಿಯಾಮತನ್ನು ನಿರಾಕರಿಸುತ್ತಿತ್ತು. ಪುನರುತ್ಥಾನವನ್ನು ನಿರಾಕರಿಸುವ ಜನರಿಗೆ ಅದನ್ನು ಮನವರಿಕೆ ಮಾಡಿಕೊಡಲು ಈಸಾ ಮಸೀಹರ ಜನನ ಪಿತೃ ಸಂಬಂಧವಿಲ್ಲದೆ ನಡೆಯುವುದೆಂದೂ ಅದು ಅವರಿಗೆ ದೃಷ್ಟಾಂತ ರೂಪದಲ್ಲಿರುವುದೆಂದೂ ಹಿಂದಿನ ಗ್ರಂಥಗಳಲ್ಲಿ ಬರೆದಿತ್ತು. ಅಲ್ಲಾಹನು ಇನ್ನೊಂದು ವಚನದಲ್ಲಿ "ವ ಲಿನಜ್‌ಅಲಹೂ ಆಯತನ್ ಲಿನ್ನಾಸ್" (ಅವನನ್ನು ಜನರಿಗೆ ದೃಷ್ಟಾಂತವನ್ನಾಗಿ ಮಾಡಲಿಕ್ಕೋಸ್ಕರ) ಎಂದು ಹೇಳಿರುವನು. ಈ ವಚನದಲ್ಲಿ ಅನ್ನಾಸ್ (ಜನರು) ಎಂದು ಹೇಳಿದುದು ಸದೂಖಿ ಪಂಗಡದವರ ಬಗ್ಗೆಯಾಗಿದೆ. ಆ ಪಂಗಡ ಆ ಕಾಲಘಟ್ಟದಲ್ಲಿ ಬಹುಸಂಖ್ಯಾತರಾಗಿದ್ದರು. ತೌರಾತಿನಲ್ಲಿ ಖಿಯಾಮತ್ ಬಗ್ಗೆ ಪ್ರಸ್ತಾಪ ಎಲ್ಲಿಯೂ ಪ್ರತ್ಯಕ್ಷವಾಗಿ ಕಾಣದುದರಿಂದ ಈ ಪಂಗಡದ ಜನರು ಮೃತರಾದವರು ಪುನರುತ್ಥಾನ ದಿನದಂದು ಜೀವಂತರಾಗುವುದನ್ನು ನಂಬುತ್ತಿರಲಿಲ್ಲ. ಈಸಾ ಮಸೀಹರು ತನ್ನ ಜನನದ ರೀತಿಯನ್ನು ಪರಿಗಣಿಸಿ ಅವರಿಗೆ ಪುನರುತ್ಥಾನದ ಜ್ಞಾನ ನೀಡುವವರಾಗಿದ್ದಾರೆ ಎಂದು ಬೈಬಲಿನ ಕೆಲವು ಪುಸ್ತಕಗಳಲ್ಲಿ ಬರೆಯಲಾಗಿದೆ. ಈ ವಚನವು ಹಝ್ರತ್ ಈಸಾ ಮಸೀಹರ ಇಳಿದು ಬರುವಿಕೆಯೊಂದಿಗೆ ಏನು ಸಂಬಂಧ ಹೊಂದಿದೆ? ವ್ಯಾಖ್ಯಾನಗಾರರು ಇದರ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಈ ಅರ್ಥ ಹೇಳಿದುದು ನಿಮಗೆ ತಿಳಿದಿದೆ. ಒಂದು ಗುಂಪಿನ ಜನರು 'ಇನ್ನಹೂ' ಸರ್ವನಾಮ ಪವಿತ್ರ ಖುರ್‌ಆನ್ ಕಡೆಗೆ ಸೂಚಿಸುತ್ತದೆ ಎಂದು ಹೇಳಿದ್ದಾರೆ. ಏಕೆಂದರೆ ಪವಿತ್ರ ಖುರ್‌ಆನ್ ಆಧ್ಯಾತ್ಮಿಕವಾಗಿ ಮೃತರಾದವರನ್ನು ಜೀವಂತಗೊಳಿಸುತ್ತದೆ. ನಿರರ್ಥಕವಾಗಿ ಇಲ್ಲಿ ಈಸಾಮಸೀಹರ ಇಳಿಯುವಿಕೆಯ ಅರ್ಥ ತೆಗೆದುಕೊಳ್ಳುವುದಾದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದ ಜನರಿಗೆ ಖಿಯಾಮತ್ ಬಗ್ಗೆ ಚಿಹ್ನೆ ಎಂದು ಹೇಳುವುದಾದರೆ, ಈ ಸಾಕ್ಷ್ಯಾಧಾರ ಖಿಯಾಮತ್ ಸಂಭವಿಸುವ ತನಕದ ಕಾಲದವರೆಗೆ ಹಾಸ್ಯಾಸ್ಪದವಾಗುವುದು. ಈಸಾ ಮಸೀಹರು ಅಂತಿಮ ಕಾಲಘಟ್ಟದಲ್ಲಿ ಇಳಿದು ಬಂದು ಖಿಯಾಮತ್‌ಗೆ ಚಿಹ್ನೆಯಾಗುವರು, ಇಷ್ಟು ದೊಡ್ಡ ದೃಷ್ಟಾಂತವನ್ನು ನೋಡಿ ಸಹ ನೀವು ಖಿಯಾಮತನ್ನು ನಿರಾಕರಿಸುತ್ತಿರುವಿರಿ ಎಂದು ಯಾರೊಂದಿಗೆ ಹೇಳಲಾಗುತ್ತಿದೆಯೋ ಅವರು ಹೀಗೆ ನೆವನ ಹೇಳಬಲ್ಲರು – ಈಸಾ ಮಸೀಹ್ ಆಗಮಿಸುವರೆಂಬ ಸಾಕ್ಷ್ಯಾಧಾರ ಈಡೇರಿಲ್ಲ. ಹೀಗಿರುವಾಗ ನೀವು ಖಿಯಾಮತನ್ನು ನಂಬಿರಿ, ಸಂಶಯ ಹೊಂದಬೇಡಿರಿ, ನಾವು ಖಿಯಾಮತ್ ಬಗ್ಗೆ ಸಾಕ್ಷ್ಯಾಧಾರ ನೀಡಿದೆವು ಎಂದು ಹೇಳುವುದು ವ್ಯರ್ಥ." (ಅಲ್‌ಹಕಮ್ ದೆಹ್ಲಿ ಪುಟ 38, 39).

ಓದುಗರೇ, ನೀವು ಯೋಚಿಸಿ ನೋಡಿರಿ. ಮುಂದೆ ಯಾವುದಾದರೂ ಕಾಲದಲ್ಲಿ ಸಂಭವಿಸುವ ಘಟನೆಯನ್ನು ಈಗ

**32ನೇ ಪುಟ ನೋಡಿ**

ಅಹ್ಮದಿಯಾ ವಾರ್ತೆಗಳು

## ಹೋಮಿಯೋಪತಿ ಚಿಕಿತ್ಸೆಯಿಂದ ಅಡ್ಡಪರಿಣಾಮ ರಹಿತ ಸೋವಿ ಸ್ವಾಸ್ಥ್ಯ: ಡಾ॥ ಪ್ರಕಾಶ ರಾಜಾಪೂರ

ಯಾದಗಿರಿ: ಹೋಮಿಯೋಪತಿ ಪದ್ಧತಿಯ ಚಿಕಿತ್ಸೆಯಿಂದ ಉತ್ತಮ ಆರೋಗ್ಯ ಸಾಧ್ಯವಿದ್ದು ಹೆಚ್ಚು ಹೆಚ್ಚು ಈ ಪದ್ಧತಿಯಲ್ಲಿ ಚಿಕಿತ್ಸೆ ಪಡೆದುಕೊಂಡರೆ ಸ್ವಾಸ್ಥ್ಯ ಮತ್ತು ಅಡ್ಡಪರಿಣಾಮ ರಹಿತ ಚಿಕಿತ್ಸೆಯಿಂದ ನೆಮ್ಮದಿಯಿಂದ ಬಾಳಬಹುದು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ॥ ಪ್ರಕಾಶ ರಾಜಾಪೂರ ಅಭಿಪ್ರಾಯಪಟ್ಟರು.

ನಗರದ ಚಕ್ರಕಟ್ಟೆಯ ಆರಾಧನಾ ಭವನದಲ್ಲಿ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಸಂಘಟನೆ ಹಾಗೂ ಜಿಲ್ಲಾ ಆಯುಷ್ ಇಲಾಖೆಯ ಆಶ್ರಯದಲ್ಲಿ ಹೋಮಿಯೋಪತಿ ಪದ್ಧತಿಯ ಉಚಿತ ಚಿಕಿತ್ಸಾ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂದು ಮನುಷ್ಯರಿಗೆ ಬರಿ ಹಣ ಇದ್ದರೆ ಪ್ರಯೋಜನವಿಲ್ಲ, ಜೀವನ ಇರಬೇಕು, ಆದರೆ 100 ವರ್ಷ ಜೀವನ ಆಯುಷ್ಯ ಸಿಕ್ಕರೂ ಪ್ರಯೋಜನವಿಲ್ಲ ಎಂಬಂತೆ ನಾವುಗಳು ಏನೆ ಪಡೆದುಕೊಂಡಿದ್ದರೂ ಆರೋಗ್ಯ ಭಾಗ್ಯವಿಲ್ಲದೇ ಇದ್ದರೆ ಎಲ್ಲವೂ ವ್ಯರ್ಥ. ಆದ್ದರಿಂದ ಆರೋಗ್ಯಕ್ಕೆ ಆದ್ಯತೆ ಕೊಡಬೇಕೆಂದು ಅವರು ಕಿವಿಮಾತು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಜಮಾತೆ ಅಹ್ಮದಿಯಾ ಸಂಘಟನೆಯ ಜಿಲ್ಲಾಧ್ಯಕ್ಷ ಅಸದ್ ಸುಲ್ತಾನ್ ಘೋರಿ ಸರ್ವರನ್ನು ಸ್ವಾಗತಿಸಿದರು. ಮೌಲ್ವಿ ಸಮೀರ್ ಅಹ್ಮದ್, ನಯಿಮ್ ಸಗರಿ ಪ್ರಾಸ್ತಾವಿಕ ಮಾತನಾಡಿ ಪ್ರತಿಯೊಬ್ಬನು ಇನ್ನೊಬ್ಬರಿಗೆ ಸಾಧ್ಯವಾದಷ್ಟು ಒಳಿತನ್ನು ಮಾಡಬೇಕೆಂದು ಖುರ್‌ಆನ್‌ನಲ್ಲಿ ಪ್ರವಾದಿಗಳು ತಿಳಿಸಿದ್ದು, ಪರೋಪಕಾರ ಮಾಡುವ ಕಾರ್ಯ ನಿಮಿತ್ತ ಮಜ್ಲಿಸ್ ಖುದ್ದಾಮುಲ್ ನಿಂದ ಜಾತಿ ಮತ ಭೇದವಿಲ್ಲದೆ ಸರ್ವ ಜನಾಂಗದವರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ಏರ್ಪಡಿಸಿರುವುದು ಮಾದರಿಯಾಗಿದೆ ಎಂದರು.

ಯಾದಗಿರಿ ಟೈಮ್ಸ್ ಸಂಪಾದಕ, ವೀರಭಾರತಿ ಪ್ರತಿಷ್ಠಾನ ಅಧ್ಯಕ್ಷರೂ ಆದ ವೈಜನಾಥ ಹಿರೇಮಠ ಮಾತನಾಡಿ ಪರೋಪಕಾರ ಮಿದಮಿತ್ಥಂ ಶರೀರಂ ಎಂಬ ಉಪನಿಷತ್ ವಾಣಿ ಹಾಗೂ ಖುರಾನ್ ವಾಣಿ ಎರಡೂ ಒಂದೇ ಮಾತನ್ನು ಹೇಳುತ್ತಿವೆ ಎಂದು ತಿಳಿಸಿ, ಪರೋಪಕಾರವನ್ನೇ ಮಾಡಬೇಕು, ಜನೋಪಯೋಗಿ ಕಾರ್ಯ ಮಾಡಬೇಕು ಎಂದು ಹೇಳಿದ ಧರ್ಮಗ್ರಂಥಗಳ ಆದೇಶದಂತೆ ಎಲ್ಲರೂ ನಡೆಯಬೇಕು.

ಈ ನಿಟ್ಟಿನಲ್ಲಿ ಅಹ್ಮದಿಯಾ ಸಮುದಾಯ ಎಲ್ಲ ಸಮುದಾಯದವರಿಗೆ ಉಚಿತ ಚಿಕಿತ್ಸೆಯಂತಹ ಪರೋಪಕಾರಿ ಕೆಲಸ ಮಾಡುತ್ತಿದೆ. ಲವ್ ಫಾರ್ ಆಲ್ ಹೇಟ್ರಡ್ ಫಾರ್ ನನ್ ಎಂಬ ಘೋಷವಾಕ್ಯ ತನ್ನ ಧ್ಯೇಯವಾಗಿಸಿಕೊಂಡಿದೆ. ಈ ಘೋಷವಾಕ್ಯ ವಿಶ್ವಸಂಸ್ಥೆಯಿಂದ ಅನುಮೋದನೆಗೊಂಡು ಜಗತ್ತಿನಾದ್ಯಂತ ಈ ಘೋಷವಾಕ್ಯ ಎಲ್ಲೆಡೆ ಪಸರಿಸಬೇಕಿದೆ ಎಂದರು.

ಡಾ॥ ವಾಸಿಮ್ ಸಗರಿ, ಡಾ॥ ಖಾನಿತಾ ಮೆಹೆಮೂನಾ, ಪ್ರಯೋಗಾಲಯ ತಜ್ಞ ನಾಸಿರ್ ಅಹ್ಮದ್, ಡಾ॥ ಶ್ರೀನಿವಾಸ ಕುಲಕರ್ಣಿ, ಡಾ॥ ಹನಮಂತ್ರಾಯ, ಡಾ॥ ಪ್ರೇಮಾ ರಾಜಾಪೂರ, ಡಾ॥ ಫಜಿಲತ್ ನಾಹಿದ, ಡಾ॥ ದೀಪಾ, ಸೇರಿದಂತೆ ಅನೇಕರು ಇದ್ದರು. ಜಮಾಅತೆ ಅಹ್ಮದಿಯಾ ಸಂಘಟನೆಯ ಯುವ ಅಧ್ಯಕ್ಷ ತಾಹಿರ್ ಅಹ್ಮದ್ ಸೌದಾಗರ ವಂದಿಸಿದರು. 400 ಜನರ ತಪಾಸಣೆ ಮಾಡಲಾಯಿತು ಎಂದು ಜಮಾಅತೆ ಅಹ್ಮದಿಯಾ ಸಂಘಟನೆ ತಿಳಿಸಿದೆ. **(ಯಾದಗಿರಿ ಟೈಮ್ಸ್ 18.02.2020)**

## ಹುಮ್ಯಾನಿಟಿ ಫಸ್ಟ್ ಅಡಿ ರೋಗಿಗಳಿಗೆ ಹಣ್ಣು ವಿತರಣೆ

ಯಾದಗಿರಿ: ಗಣರಾಜ್ಯೋತ್ಸವ ಅಂಗವಾಗಿ ಭಾರತದಾದ್ಯಂತ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸಮುದಾಯದ ಯುವ ಸಂಘಟನೆಯ 'ಹುಮ್ಯಾನಿಟಿ ಫಸ್ಟ್' (ಬಿಗ್ರೇಡ್) ಶಾಖೆಯ ವತಿಯಿಂದ ವಿವಿಧ ಜನೋಪಯೋಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ನಗರ ಘಟಕದಿಂದಲೂ ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಬ್ರೆಡ್ ವಿತರಿಸಲಾಯಿತು. ಕಾರ್ಯಕ್ರಮಕ್ಕೆ ಯಾದಗಿರಿ-ವಿಜಯಪುರ ಜಿಲ್ಲೆ ಯುವ ಘಟಕದ ಅಧ್ಯಕ್ಷರಾದ ಫಜಲ್ ಮೊಹಮ್ಮದ್ ಸೌದಾಗರ ಚಾಲನೆ ನೀಡಿ ಮಾತನಾಡಿ ನಮ್ಮ ಸಂಘಟನೆಯ 'ಹುಮ್ಯಾನಿಟಿ ಫಸ್ಟ್' ಶೀರ್ಷಿಕೆಯಡಿ ದೇಶದಾದ್ಯಂತ ರಾಷ್ಟ್ರೀಯ ಹಬ್ಬಗಳು ಹಾಗೂ ಧಾರ್ಮಿಕ ಹಬ್ಬಗಳ ವೇಳೆ ಸಮಾಜಿಕ ಕಾರ್ಯ ಕೈಗೊಳ್ಳಲಾಗುತ್ತಿದ್ದು ಇದರನ್ವಯ ಭಾರತದ ರಾಷ್ಟ್ರೀಯ ಹಬ್ಬವಾದ ಗಣತಂತ್ರ ದಿನದಂದು ಒಳರೋಗಿಗಳಿಗೆ ಹಣ್ಣು ಹಂಪಲು, ಬ್ರೆಡ್, ಬಿಸ್ಕಿಟ್ ಉಚಿತವಾಗಿ ವಿತರಿಸುವ ಮೂಲಕ ಹಬ್ಬ ಆಚರಿಸುವುದು ವಿಶೇಷ ಎಂದರು. ಈ ಸಂದರ್ಭದಲ್ಲಿ ನಗರಾಧ್ಯಕ್ಷ ನಯೀಮ್ ಅಹ್ಮದ್ ಸಗರಿ, ಪ್ರಚಾರಕ ಸಮೀರ್ ಅಹ್ಮದ್, ಯುವ ಮುಖಂಡ ತಯಾಬ್ ಅಹ್ಮದ್ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ರೋಗಿಗಳಿಗೆ ಶೀಘ್ರ ಗುಣಮುಖರಾಗಲು ಹಾರೈಸಿದರು. **(ಯಾದಗಿರಿ ಟೈಮ್ಸ್ 30.1.20.)**

## ಅಹ್ಮದಿಯಾ: ವಿಕಲಚೇತ ಮಕ್ಕಳಲ್ಲಿ ಅನ್ನದಾನ

ಜನವರಿ 13 ಸೋಮವಾರ ಅಹ್ಮದಿಯಾ ಮುಸ್ಲಿಂ ಜಮಾಅತ್, ಜಕ್ಕೂರ್, ಬೆಂಗಳೂರು ಇದರ ಉಪ ಘಟಕ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ವತಿಯಿಂದ ಬೆಂಗಳೂರು ನಗರದ ಸಮರ್ಥನಂ ಅಂಗವಿಕಲ ಮಕ್ಕಳ ಸಂಸ್ಥೆಗೆ ಭೇಟಿ ನೀಡಿ ಸುಮಾರು 400 ಮಕ್ಕಳಿಗೆ ಮಧ್ಯಾಹ್ನ ಅನ್ನದಾನ ಮಾಡಲಾಯಿತು.

ಸಂಘಟನೆಯ ಅಧ್ಯಕ್ಷ ಮುಹಮ್ಮದ್ ಸಿದ್ದೀಖ್, ಮುಹಮ್ಮದ್ ಇರ್ಫಾನ್ ಜಮಾಅತ್ ಅಧ್ಯಕ್ಷರು, ಮುನವ್ವರ್ ಅಹ್ಮದ್, ಮೌಲ್ವಿ ಕೆ.ವಿ. ಮುಹಮ್ಮದ್ ತಾಹಿರ್ ಸಾಹಿಬ್, ನಸೀರ್ ಅಹ್ಮದ್ ಜಿಲ್ಲಾ ಖಾಯಿದ್ ಬೆಂಗಳೂರು, ಕಾಶಿಫ್ ಅಹ್ಮದ್ ಖಾಲಿದ್, ಇಫ್ತಿಖಾರ್ ಹಲೀಮ್, ಮುಹಮ್ಮದ್ ಇಸ್ಮಾಈಲ್ ಮೊದಲಾದವರಿದ್ದರು.

ಮಧ್ಯಾಹ್ನ ಉಪಹಾರದ ನಂತರ ಸಂಸ್ಥೆಯ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳೊಡನೆ ಜಮಾಅತಿನ ಪರಿಚಯ ನೀಡುತ್ತಾ ಜಮಾಅತಿನ ಸಾಹಿತ್ಯ "ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ", "ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ" ಹಾಗೂ ಕಿರುಹೊತ್ತಗೆಗಳನ್ನು ವಿತರಿಸಲಾಯಿತು.

ಅಂಗವಿಕಲ ಮಕ್ಕಳ ತರಗತಿಗಳಿಗೆ ಹೋಗಿ ಅವರೊಡನೆ ಬೆರೆತು ಅವರ ಪಾಠ ಪ್ರವಚನಗಳನ್ನು ಸಂದರ್ಶಿಸಲಾಯಿತು. ಸಂಸ್ಥೆಯ ಮುಖಂಡರು ಹಾಗೂ ಸಿಬ್ಬಂದಿ ವರ್ಗ ಜಮಾಅತಿನ ಚಟುವಟಿಕೆಗಳನ್ನು ಮೆಚ್ಚಿದರು.

## ಅಹ್ಮದಿಯಾ ಸಂಘಟನೆ ಶ್ರಮದಾನ

ಯಾದಗಿರಿ: ವರ್ಷಕ್ಕೊಮ್ಮೆ ಸ್ವಚ್ಛತಾ ಕಾರ್ಯಕ್ರಮವನ್ನು ಅಹ್ಮದಿಯಾ ಸಂಘಟನೆಯವರು ಹಮ್ಮಿಕೊಂಡು ಪ್ರದೇಶದ ಸ್ವಚ್ಛತೆ ಕಾಪಾಡುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ವೀರಶೈವ ಸಮಾಜದ ನಗರ ಅಧ್ಯಕ್ಷ ಅಯ್ಯಣ್ಣ ಹುಂಡೇಕಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಜಮಾಅತೆ ಅಹ್ಮದಿಯಾ ಸಂಘಟನೆ ವತಿಯಿಂದ ಭಾನುವಾರ ವಾರ್ಡ್ ನಂ.3 ಮತ್ತು 4ರಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹಾಕಿಕೊಟ್ಟ ಯೋಜನೆ ಅಡಿ ಯುವಕರು ಪ್ರತಿವರ್ಷ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿರುವುದಲ್ಲದೆ ಬಡವರಿಗೆ ಉಚಿತವಾಗಿ ಬಟ್ಟೆ ನೀಡುತ್ತಿದ್ದಾರೆ. ರಕ್ತದಾನ, ಆರೋಗ್ಯ ತಪಾಸಣೆ ಸೇರಿದಂತೆ ಇನ್ನೂ ಅನೇಕ ಜನೋಪಯೋಗಿ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಎಲ್ಲಾ ಸಮುದಾಯಗಳ ಪ್ರೀತಿಗೆ ಪಾತ್ರವಾಗಿರುವ ಅಹ್ಮದಿಯಾ ಸಂಘಟನೆ ಕಾರ್ಯ ಇತರರಿಗೆ ಮಾದರಿಯಾಗಿದೆ ಎಂದರು.

ಸುಮಾರು 200 ಜನ ಯುವಕರು ಮತ್ತು ಚಿಕ್ಕ ಮಕ್ಕಳು ಪೊರಕೆ ಹಿಡಿದು ಕಸ ಗುಡಿಸಿ ಶ್ರಮದಾನ ಮಾಡಿದರು. ಈ ವೇಳೆ ನಗರಸಭೆ ಸದಸ್ಯರಾದ ವಿಲಾಸರಾವ್ ಪಾಟೀಲ, ಅಹ್ಮದಿಯಾ ಸಂಘಟನೆಯ ಯುವ ಅಧ್ಯಕ್ಷ ತಾಹಿರ್ ಅಹ್ಮದ್ ಸೌದಾಗರ, ಸಮಾಜದ ಪ್ರಮುಖರಾದ ಜಾವೇದ್ ಅಹ್ಮದ್, ಸಮೀರ್ ಅಹ್ಮದ್ ತಯ್ಯಾಬ್ ಅಹ್ಮದ್ ಅಳ್ಳೊಳ್ಳಿ, ಸಮೀರ್ ಅಹ್ಮದ್, ತೌಫೀಕ್ ಅಹ್ಮದ್ ಇದ್ದರು.

## ಕೊರೋನಾ ಚಿಕಿತ್ಸೆಗೆ ಕಟ್ಟಡ ಬಿಟ್ಟುಕೊಟ್ಟರು

ಪಯಂಗಾಡಿ: ಪಯಂಗಾಡಿಯ ಶಿಶುರೋಗ ತಜ್ಞ ಡಾ॥ ಗುಲಾಂ ಅಹ್ಮದ್ (ಅಮೀರ್, ಜಮಾಅತ್ ಅಹ್ಮದಿಯಾ ಪಯಂಗಾಡಿ) ಅವರು ಪಿಲಾತರದಲ್ಲಿ ಆಸ್ಪತ್ರೆ ಮಾಡಲು ನಿರ್ಮಿಸಿದ ಕಟ್ಟಡವನ್ನು ಕೊರೋನಾ ಪ್ರತಿರೋಧಕ ಐಸೋಲೇಶನ್ ವಾರ್ಡಿಗೋಸ್ಕರ ಪಂಚಾಯತ್ ಅಧಿಕಾರಿಗಳಿಗೆ ಬಿಟ್ಟುಕೊಟ್ಟರು. ಆದಿತ್ಯವಾರ (29–3–2020) ಡಿವೈಎಫ್ಐ ಕಾರ್ಯಕರ್ತರು ಕಟ್ಟಡವನ್ನು ಶುಚೀಕರಿಸುವರು. ಪಂಚಾಯತ್ ಅಧ್ಯಕ್ಷೆ ಪಿ. ಪ್ರಭಾವತಿ ಕೀಲಿಗೈ ಸ್ವೀಕರಿಸಿದರು. ಕಾರ್ಯದರ್ಶಿ ಸಿ.ಎಂ. ಹರಿದಾಸ್ ಭಾಷಣ ಮಾಡಿದರು.

(ದೇಶಾಭಿಮಾನಿ: 29–3–2020)

## ಹ್ಯುಮ್ಯಾನಿಟಿ ಫಸ್ಟ್ ಇಂಡಿಯಾ ಜನ ಸೇವೆ

ಮಡಿಕೇರಿ: ಕೊರೊನಾ ಲಾಕ್‌ಡೌನ್‌ನಿಂದ ಸಮಸ್ಯೆಗಳನ್ನು ಎದುರಿಸುತ್ತಿರುವ ಮಡಿಕೇರಿ ನಗರದ ವಿವಿಧ ಬಡಾವಣೆಯ ಬಡ ಕುಟುಂಬಗಳಿಗೆ ಹ್ಯುಮಾನಿಟಿ ಫಸ್ಟ್ ಇಂಡಿಯಾ, ಕೊಡಗು ಜಿಲ್ಲಾ ಸಮಿತಿಯ ವತಿಯಿಂದ ನೆರವು ನೀಡಲಾಯಿತು. ಕಳೆದ 15 ದಿನಗಳಿಂದ ಮಡಿಕೇರಿ ನಗರದ ರಾಜೇಶ್ವರಿ ನಗರ, ತ್ಯಾಗರಾಜ ಕಾಲೋನಿ, ಗದ್ದಿಗೆ, ಮಲ್ಲಿಕಾರ್ಜುನ ನಗರ, ಅಂಬೇಡ್ಕರ್ ಬಡಾವಣೆ, ಚಾಮುಂಡೇಶ್ವರಿ ನಗರ, ಹಿಲ್ ರಸ್ತೆ, ಮಹದೇವ ಪೇಟೆ, ರಾಣಿಪೇಟೆ, ಮಕಾನ್ ಗಲ್ಲಿ, ಹಿಂದುಸ್ಥಾನಿ ಶಾಲೆಯ ಆವರಣ ಮುಂತಾದ ಪ್ರದೇಶಗಳ 600ಕ್ಕೂ ಹೆಚ್ಚು ಮನೆಗಳ 1500ಕ್ಕೂ ಹೆಚ್ಚು ಜನರಿಗೆ ಪ್ರತಿದಿನ ವಿವಿಧ ಬಡಾವಣೆಗಳಲ್ಲಿ ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಲಾಯಿತು.

80ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳಿಗೆ ಜ್ಯೂಸ್ ಮತ್ತು ನೀರು ಒದಗಿಸಲಾಯಿತು.

ಹ್ಯೂಮಾನಿಟಿ ಫಸ್ಟ್ ಇಂಡಿಯಾದ ಉಸ್ತುವಾರಿ ಮುಹಮ್ಮದ್ ಶರೀಫ್‌ರವರ ನೇತೃತ್ವದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಅಧ್ಯಕ್ಷರಾದ ಎಂ.ಬಿ. ಜಹೀರ್ ಅಹ್ಮದ್, ಕಾರ್ಯಕರ್ತರಾದ ಎಂ.ಯು. ಉಸ್ಮಾನ್, ಅಬ್ದುಲ್ ಸಾಜಿದ್, ಎಂ. ತಾಹಿರ್, ಮನ್ಸೂರ್ ಅಹ್ಮದ್, ತಾಹ ರಹೀಂ, ಕಾಮಿಲ್ ಹಾರಿಸ್, ಜೆ.ಎಂ. ಬಶೀರ್ ಮತ್ತಿತರ ಕಾರ್ಯಕರ್ತರು ಸೇವೆಯಲ್ಲಿ ಪಾಲ್ಗೊಂಡಿದ್ದರು.

ಅದೇ ರೀತಿ ಶಿವಮೊಗ್ಗದಲ್ಲಿಯೂ ಹುಮ್ಯಾನಿಟಿ ಫಸ್ಟ್ ಇಂಡಿಯಾ ವತಿಯಿಂದ ಬಡ ಹಾಗೂ ದಿನಗೂಲಿ ನೌಕರರಿಗೆ ದಿನಸಿ ಸಾಮಗ್ರಿಗಳನ್ನು ವಿತರಿಸಲಾಯಿತು. ಹುಮ್ಯಾನಿಟಿ ಫಸ್ಟ್ ಇಂಡಿಯಾದ ಶಿವಮೊಗ್ಗದ ಮುಖ್ಯಸ್ಥರಾದ ಝಕರಿಯ್ಯಾರವರ ನೇತೃತ್ವದಲ್ಲಿ ಶಿವಮೊಗ್ಗದ ಸುತ್ತುಮುತ್ತಲಿನ 45ಕ್ಕೂ ಹೆಚ್ಚು ಜನರಿಗೆ ಒಂದು ತಿಂಗಳಿಗಾಗುವಷ್ಟು ಅಕ್ಕಿ, ಗೋದಿ ಹಿಟ್ಟು, ಸಕ್ಕರೆ, ಟೀ ಹುಡಿ, ಉಪ್ಪು ಹುಡಿ, ಮೆಣಸು, ಬೇಳೆ, ಎಣ್ಣೆ ಇತ್ಯಾದಿ ಸಾಮಗ್ರಿಗಳನ್ನು ಜಿಲ್ಲಾಡಳಿತದ ಅನುಮತಿಯೊಂದಿಗೆ ತಲುಪಿಸಲಾಯಿತು.

## ಆಹಾರ ವಸ್ತುಗಳ 100 ಕಿಟ್ ವಿತರಣೆ

ಬೆಂಗಳೂರು: ಸ್ಥಳೀಯ ಅಹ್ಮದಿಯಾ ಮುಸ್ಲಿಂ ಜಮಾಅತ್ ಹುಮ್ಯಾನಿಟಿ ಫಸ್ಟ್ ವತಿಯಿಂದ ಅಕ್ಕಿ, ಗೋದಿ, ಎಣ್ಣೆ, ಸಕ್ಕರೆ, ಉಪ್ಪು, ಧಾನ್ಯಗಳು ಒಳಗೊಂಡ 100 ಕಿಟ್‌ಗಳನ್ನು ಅಹ್ಮದಿಯಾ ಮಸೀದಿ ಇರುವ ವಿಲ್ಸನ್ ಗಾರ್ಡನ್ ಕ್ಷೇತ್ರದಲ್ಲಿ ಎಪ್ರಿಲ್ 19ರಂದು ಬಡ ಜನರಿಗೆ ವಿತರಿಸಲಾಗಿದೆ. ಮುಖಗವುಸು ಇಲ್ಲದ ಹಲವರಿಗೆ ಮುಖಗವುಸುಗಳನ್ನು ಒದಗಿಸಲಾಗಿದೆ. ಸ್ಥಳೀಯರು ಮತ್ತು ಪೋಲೀಸರು ಈ ಕಾರ್ಯದಲ್ಲಿ ಸಹಕಾರ ನೀಡಿದ್ದಾರೆ.

## ಆರೋಗ್ಯ ಪ್ರವರ್ತಕರಿಗೆ ಜ್ಯೂಸ್ ವಿತರಣೆ

ಮಂಜೇಶ್ವರ: ಮಂಜೇಶ್ವರ ಮತ್ತು ತಲಪಾಡಿ ಪರಿಸರದಲ್ಲಿ ಡ್ಯೂಟಿಯಲ್ಲಿರುವ ಆರೋಗ್ಯ ಪ್ರವರ್ತಕರಿಗೂ ಪೊಲೀಸರಿಗೂ ಮಂಜೇಶ್ವರ ಅಹ್ಮದಿಯಾ ಮುಸ್ಲಿಂ ಜಮಾಅತಿನ ಯುವ ವಿಭಾಗ (ಖುದ್ದಾಮುಲ್ ಅಹ್ಮದಿಯಾ) ವತಿಯಿಂದ ಎಪ್ರಿಲ್ ದಿನಾಂಕ 14 ಮತ್ತು 21ರಂದು ಜ್ಯೂಸ್ ವಿತರಣೆ ಮಾಡಲಾಯಿತು.

**(29ನೇ ಪುಟದಿಂದ) ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು**

ಇರುವ ಜನರಿಗೆ ಸಾಕ್ಷ್ಯಾಧಾರವಾಗಿ ನೀಡುವುದು ಎಷ್ಟು ಹಾಸ್ಯಾಸ್ಪದವಾಗಿದೆ. ಹಝ್ರತ್ ಈಸಾ ಮಸೀಹರು ಮುಂದೆ ಯಾವುದೋ ಕಾಲದಲ್ಲಿ ಇಳಿದು ಬರಲಿಕ್ಕಿತ್ತು. ಆದರೆ ಅವರ ಇಳಿದು ಬರುವಿಕೆಯನ್ನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದ ಅವಿಶ್ವಾಸಿಗಳಿಗೆ ಖಿಯಾಮತ್‌ಗೆ ಸಾಕ್ಷ್ಯಾಧಾರವಾಗಿ ಹೇಳುವುದು ಎಷ್ಟು ಸರಿ? (ಹೀಗೆ ಹೇಳುವುದರಿಂದ ನಾವು ಅಲ್ಲಾಹನ ಅಭಯ ಯಾಚಿಸುತ್ತೇವೆ.) ನಮ್ಮ ವಿರೋಧಿಗಳಾದ ಮತಪಂಡಿತರು ಹೇಳುವ ಅರ್ಥವನ್ನು ಅಂಗೀಕರಿಸುವುದಾದರೆ ಪವಿತ್ರ ಖುರ್‌ಆನ್ ಸಾಕ್ಷ್ಯಾಧಾರಗಳನ್ನು ನೀಡುವ ವಿಷಯದಲ್ಲಿ ಬಹಳ ಕೀಳ್ಮಟ್ಟದ ಗ್ರಂಥವೆಂದು ಕಾಣಿಸುವುದು. (ಹೀಗೆ ಹೇಳುವುದರಿಂದ ನಾವು ಅಲ್ಲಾಹನ ಅಭಯ ಯಾಚಿಸುತ್ತೇವೆ.)

ನೀವು ಯೋಚಿಸಿರಿ, ಹಝ್ರತ್ ಪೈಗಂಬರರ(ಸ) ಕಾಲದ ಅವಿಶ್ವಾಸಿಗಳೊಂದಿಗೆ ಹೇಳಲಾಗುತ್ತಿದೆ. "ಈಸಾ ಮಸೀಹ್ ಖಿಯಾಮತ್‌ಗೆ ಸಮೀಪವಾಗಿ ಆಗಮಿಸುವುದು ಖಿಯಾಮತ್ ಸಂಭವಿಸುವುದರ ಬಗ್ಗೆ ಒಂದು ಸಾಕ್ಷ್ಯಾಧಾರವಾಗಿದೆ. ನೀವು ಖಿಯಾಮತ್ ಬಗ್ಗೆ ಯಾವ ಸಂಶಯವನ್ನೂ ಹೊಂದಬೇಡಿರಿ." ಇದಕ್ಕಿಂತಲೂ ಹೆಚ್ಚು ಬಲಹೀನವಾದ ಸಾಕ್ಷ್ಯಾಧಾರ ಇರಲು ಸಾಧ್ಯವೇ? ಹಿಂದೆ ನಡೆದ ಸಂಭವವನ್ನು ಮತ್ತು ಈಗ ಸಂಭವಿಸುವುದನ್ನು ಈಗಿನ ಕಾಲದ ಜನರಿಗೆ ಮುಂದೆ ಸಂಭವಿಸುವುದರ ಬಗ್ಗೆ ಸಾಕ್ಷ್ಯವಾಗಿ ನೀಡಬಹುದಾಗಿದೆ. ಆದರೆ "ನೀವು ಮೃತರಾದ ನಂತರ ಅಂತಿಮ ಕಾಲಘಟ್ಟದಲ್ಲಿ ಈಸಾ ಮಸೀಹ್ ಇಳಿದು ಬರುವರು. ಅವರು ಖಿಯಾಮತ್‌ಗೆ ಚಿಹ್ನೆ ಆಗುವರು. ಆದುದರಿಂದ ನೀವು ಖಿಯಾಮತ್ ಸಂಭವಿಸುವ ಬಗ್ಗೆ ಸಂದೇಹಪಡಬೇಡಿರಿ" ಎಂದು ಹೇಳುವ ಬಲಹೀನ ಸಾಕ್ಷ್ಯಾಧಾರ ಅಲ್ಲಾಹನು ನೀಡಿದನೆಂದು ಹೇಳುವುದು ಪಾಪದೋಷ ಉಂಟು ಮಾಡುವುದಾಗಿದೆ. ಆದರೆ ಈಗಿನ ಕಾಲದ ಮತಪಂಡಿತರಿಗೆ ಮನವರಿಕೆ ಮಾಡಿಕೊಡುವುದಾದರೂ ಹೇಗೆ? ♦

**ಯುಗರಶ್ಮಿಗೆ ಚಂದಾದಾರರಾಗಿರಿ**

ವಾರ್ಷಿಕ ಚಂದಾ : ರೂ. 60/-

ಅಂಚೆ ಮೂಲಕ : ರೂ. 70/-

ಸಂಪರ್ಕಿಸಿರಿ : 99 00 410 789

## ಅಮೆರಿಕದ ನಾಸಾ ವಿಜ್ಞಾನಿಗಳ ಘೋಷಣೆ

# ಭೂಮಿ ಹೋಲುವ ಗ್ರಹ ಪತ್ತೆ

*** 2018ರಲ್ಲಿ ಹಾರಿಬಿಡಲಾಗಿದ್ದ ವಿಶೇಷ ಉಪಗ್ರಹದಿಂದ ಅನ್ವೇಷಣೆ.**

*** ನಾವಿರುವ ಭೂಮಿಗಿಂತ ನಾಲ್ಕು ಪಟ್ಟು ದೊಡ್ಡದಿದೆ ಟಿಒಐ 700 ಡಿ.**

*** ನಮ್ಮ ಭೂಮಿಗೂ ಹೊಸ ಗ್ರಹಕ್ಕೂ ಇರುವ ದೂರ 101.5 ಜ್ಯೋತಿವರ್ಷ.**

*** ಹೊಸ ಗ್ರಹದಲ್ಲಿ ನೀರು ತುಂಬಿದ್ದು ಅದು ಘನೀಕೃತವಾಗಿದೆ ಎಂದ ವಿಜ್ಞಾನಿಗಳು.**

**ವಾಷಿಂಗ್ಟನ್, ಜ 7:** ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ನಾಸಾ) ವಿಜ್ಞಾನಿಗಳು, ಭೂಮಿಯನ್ನೇ ಹೋಲುವ ಗ್ರಹವೊಂದನ್ನು ಪತ್ತೆ ಮಾಡಿರುವುದಾಗಿ ಮಂಗಳವಾರ ಘೋಷಿಸಿದ್ದಾರೆ. ಅನ್ಯ ಸೌರಮಂಡಲಗಳಲ್ಲಿ ಇರಬಹುದಾದ ಭೂಮಿಯನ್ನು ಹೋಲುವ ಗ್ರಹಗಳನ್ನು ಪತ್ತೆ ಮಾಡಲೆಂದೇ ಹಾರಿ ಬಿಡಲಾಗಿರುವ 'ಟ್ರಾನ್ಸಿಟಿಂಗ್ ಎಕ್ಸೋಪ್ಲಾನೆಟ್ ಸರ್ವೇ ಸ್ಯಾಟಲೈಟ್ (ಟಿಇಎಸ್‌ಎಸ್)' ಎಂಬ ಉಪಗ್ರಹದ ಮೂಲಕ ಇದನ್ನು ಪತ್ತೆ ಹಚ್ಚಿರುವುದಾಗಿ ವಿಜ್ಞಾನಿಗಳು ತಿಳಿಸಿದ್ದಾರೆ.

ಇದಕ್ಕೆ 'ಟಿಒಐ 700 ಡಿ' ಎಂದು ಹೆಸರಿಸಲಾಗಿದ್ದು ಇದು ನಾವಿರುವ ಭೂಮಿಯಿಂದ 101.5 ಜ್ಯೋತಿರ್ವರ್ಷಗಳಷ್ಟು ದೂರ ಇದೆ. ಆ ಗ್ರಹವು ಘನೀಕೃತ ನೀರಿನಿಂದ ತುಂಬಿದೆ. ತನ್ನ ಸೌರಮಂಡಲದ ಸೂರ್ಯನಿಂದ ನಿರ್ದಿಷ್ಟ ಅಂತರದಲ್ಲಿರುವ ಆ ಗ್ರಹ ನಾವಿರುವ ಭೂಮಿಗಿಂತ ನಾಲ್ಕು ಪಟ್ಟು ದೊಡ್ಡದಿದ್ದು, ಜೀವಿಗಳಿಗೆ ವಾಸಯೋಗ್ಯವಾದ ಪರಿಸರದೊಂದಿಗೆ ಆ ಗ್ರಹ ತನ್ನ ಸೂರ್ಯನ ಸುತ್ತ ಗಿರಕಿ ಹೊಡೆಯುತ್ತಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

2018ರ ಎಪ್ರಿಲ್‌ನಲ್ಲಿ ಹಾರಿಬಿಡಲಾಗಿದ್ದ ಟಿಇಎಸ್‌ಎಸ್, ಈವರೆಗೆ ಭೂಮಿಯನ್ನು ಹೋಲುವ 4,000 ಗ್ರಹಗಳನ್ನು ಪತ್ತೆ ಮಾಡಿದೆ. ಆದರೆ ತೀರಾ ಇತ್ತೀಚೆಗೆ, ದೈತ್ಯ ಗ್ರಹಗಳಾದ 'ಟಿಒಐ 700 ಎ', 'ಟಿಒಐ 700 ಬಿ', 'ಟಿಒಐ 700 ಸಿ' ಹಾಗೂ 'ಟಿಒಐ 700 ಡಿ' ಎಂಬ ಗ್ರಹಗಳನ್ನು ಪತ್ತೆ ಹಚ್ಚಿದೆ ಎಂದು ನಾಸಾ ಹೇಳಿದೆ. **(ಉದಯವಾಣಿ 8–1–2020)**

===============================================================

## ಆ್ಯರಿಝೋನಾ ಖಗೋಳ ವಿಜ್ಞಾನಿಗಳಿಂದ ಹೊಸ ಆಕಾಶಕಾಯ ಪತ್ತೆ

# ಭೂಮಿಗೆ ದೊರಕಿದ ಹೊಸ ಚಂದಿರ

*** ಹೊಸ ಚಂದ್ರನಿಗೆ '2020 ಸಿ.ಡಿ. 3' ಎಂದು ನಾಮಕರಣ**

*** ಮೊಟ್ಟೆಯಾಕಾರದ, ದೊಡ್ಡ ಕಾರೊಂದರ ಅಳತೆ ಹೋಲುವ '2020 ಸಿ.ಡಿ.3'**

*** 6.2 ಅಡಿ – ಹೊಸಚಂದ್ರ '2020 ಸಿ.ಡಿ.3'ನ ಉದ್ದ * 11.4 ಅಡಿ – ಹೊಸ ಚಂದ್ರನ ಅಗಲ**

*** 47 ಭೂಮಿಯನ್ನು ಸುತ್ತಲು ಹೊಸಚಂದ್ರ ತೆಗೆದುಕೊಳ್ಳುತ್ತಿರುವ ದಿನ**

ವಾಷಿಂಗ್ಟನ್, ಫೆ. 27: ಈಗಾಗಲೇ ಶಾಶ್ವತ ಚಂದ್ರನನ್ನು ಹೊಂದಿರುವ ಭೂಮಿಗೆ ಈಗ ಹೊಸ ಪುಟಾಣಿ ಚಂದಿರನೊಬ್ಬ ಸಿಕ್ಕಿದ್ದಾನೆ. ಈ ಪುಟಾಣಿ ಚಂದ್ರನಿಗೆ '2020 ಸಿ.ಡಿ.3' ಎಂದು ಹೆಸರಿಡಲಾಗಿದೆ. 3 ವರ್ಷಗಳಿಂದ ಈತ ಭೂಮಿಯನ್ನು ಸುತ್ತುತ್ತಿದ್ದಾನೆಂದು ವಿಜ್ಞಾನಿಗಳು ತಿಳಿಸಿದ್ದಾರೆ.

**ಹೇಗೆ ಪತ್ತೆಯಾದ ಹೊಸ ಚಂದ್ರ?:** ಅಮೆರಿಕದಲ್ಲಿ ಆ್ಯರಿಝೋನಾದ ಕೆಟಾಲಿನಾ ಸ್ಕೈ ಸರ್ವೇಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಖಗೋಳ ವಿಜ್ಞಾನಿಗಳು ಇದೇ ಫೆ. 19ರಂದು ಭೂಮಿಯನ್ನು ವೇಗವಾಗಿ ಸುತ್ತುತ್ತಿರುವ ಬೆಳಕಿನ ಉಂಡೆಯನ್ನು ಹೊಸದಾಗಿ ಪತ್ತೆ ಹಚ್ಚಿದ್ದರು.

**ಇದು ತಾತ್ಕಾಲಿಕ ಚಂದ್ರ!** ಈಗ ಪತ್ತೆಯಾಗಿರುವ '2020 ಸಿ.ಡಿ.3' ಚಂದ್ರನಿಗೆ ನಿಖರವಾದ ಕಕ್ಷೆಯೆಂಬುದೇ ಇಲ್ಲ. ಹಾಗಾಗಿ, ಕೆಲವು ದಿನಗಳ ಅನಂತರ ಭೂಮಿಯ ಪರಿಧಿಯಿಂದ ಆಚೆ ಸರಿಯುತ್ತದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಈ ಹಿಂದೆ, ಪತ್ತೆಯಾಗಿದ್ದ 'ಆರ್ ಎಚ್ 120' ಎಂಬ ಚಂದ್ರ ಸಹ ನಿಖರ ಕಕ್ಷೆ ಹೊಂದಿರದ ಕಾರಣ, 2006ರ ಸೆಪ್ಟೆಂಬರ್‌ನಿಂದ 2007ರ ಜೂನ್ ರವರೆಗೆ ಮಾತ್ರ ಭೂಮಿಯನ್ನು ಸುತ್ತಿ ಅನಂತರ ನಾಪತ್ತೆಯಾಗಿದ್ದ. **(ಉದಯವಾಣಿ 28–2–2020)**

===============================================================

# ಅತೀ ಪ್ರಾಚೀನ ಘನ ವಸ್ತು ಪತ್ತೆ

ವಾಷಿಂಗ್ಟನ್, ಜ. 14: ನಮ್ಮ ಸೌರಮಂಡಲದ ಅತಿ ಪ್ರಾಚೀನ ವಸ್ತುವೊಂದು ಆಸ್ಟ್ರೇಲಿಯಾದಲ್ಲಿ ಪತ್ತೆಯಾಗಿದೆ. ಘನರೂಪದಲ್ಲಿರುವ ಇದು ನಕ್ಷತ್ರದ ಅತಿ ಸಣ್ಣ ತುಣುಕು ಎಂದು ಹೇಳಿರುವ ವಿಜ್ಞಾನಿಗಳು, ಇದು 700 ಕೋಟಿ ವರ್ಷಗಳಷ್ಟು ಹಳೆಯದ್ದಾಗಿದೆ ಎಂದು ತಿಳಿಸಿದ್ದಾರೆ.

ಐವತ್ತು ವರ್ಷಗಳ ಹಿಂದೆ ಆಸ್ಟ್ರೇಲಿಯಾದ ನಿರ್ಜನ ಪ್ರದೇಶದಲ್ಲಿ ಉಲ್ಕೆಯೊಂದು ಅಪ್ಪಳಿಸಿದಾಗ ಅದರ ಜತೆಗೆ ಈ ನಕ್ಷತ್ರದ ಚೂರು ಸಹ ಭೂಮಿಗೆ ಬಂದು ಸೇರಿಕೊಂಡಿದೆ. ಇದು ಸೂರ್ಯನ ಸೃಷ್ಟಿಗೂ ಮುನ್ನ ತಾರೆಗಳು ಉದಯಿಸುವಾಗ ಜನಿತವಾಗಿರುವ ಪರಿಕರ

ಎಂಬುದು ಪರೀಕ್ಷೆಯ ವೇಳೆ ತಿಳಿದುಬಂದಿದೆ. ಇದರಿಂದ ತಾರೆಗಳ ಉಗಮದ ಬಗ್ಗೆ ಹೊಸ ಮಾಹಿತಿಗಳು ಸಿಗಲಿದ್ದು, ಈ ವರೆಗೆ ಇರುವ ಸಿದ್ಧಾಂತಗಳನ್ನು ಮೀರಿದ ಮತ್ತೊಂದು ಸಿದ್ಧಾಂತ ಸೃಷ್ಟಿಯಾಗುವ ಸಾಧ್ಯತೆಯಿದೆ ಎಂದು ಶಿಕಾಗೋ ವಿವಿಯ ಸಹ ಪ್ರಾಧ್ಯಾಪಕ ಫಿಲಿಪ್ ಹೆಕ್ ತಿಳಿಸಿದ್ದಾರೆ. **(ಉದಯವಾಣಿ 15-1-2020)**

==========================================================

## 'ಕೆ2-18ಬಿ' ಗ್ರಹದಲ್ಲಿದೆ ವಾಸಯೋಗ್ಯ ಪರಿಸರ!

## ಮಾನವನಿಗೆ ಹೊಸ ನೆಲೆ

*** 124 ಜ್ಯೋತಿರ್ವರ್ಷ – ನಮ್ಮ ಭೂಮಿಯಿಂದ 'ಸೂಪರ್ ಅರ್ತ್' ದೂರ**

*** 12,742 ಕಿ.ಮೀ. – ನಮ್ಮ ಭೂಮಿಯ ಅಗಲ (ವ್ಯಾಸ)**

*** 33,129.2 ಕಿ.ಮೀ – ಸೂಪರ್ ಅರ್ತ್‌ನ ವ್ಯಾಸ**

*** 2.6 ಪಟ್ಟು – ನಮ್ಮ ಭೂಮಿಗಿಂತ ಸುಮಾರು ಎರಡೂವರೆ ಪಟ್ಟು ದೊಡ್ಡದಾದ 'ಸೂಪರ್ ಅರ್ತ್'**

ಕೇಂಬ್ರಿಡ್ಜ್, ಫೆ. 28: ಅಮೆರಿಕದ ನಾಸಾ ವಿಜ್ಞಾನಿಗಳಿಂದ 2015ರಲ್ಲಿ ಪತ್ತೆಯಾಗಿದ್ದ 'ಕೆ2-18ಬಿ' (ಸೂಪರ್ ಅರ್ತ್) ಎಂಬ ಗ್ರಹದಲ್ಲಿ ನೀರಿನ ಕಣಗಳು ಹೇರಳವಾಗಿದ್ದು, ಮಾನವ ವಾಸಯೋಗ್ಯವಾದ ವಾತಾವರಣವಿದೆ ಎಂಬ ಕುತೂಹಲಕಾರಿ ವಿಚಾರವನ್ನು ಕೇಂಬ್ರಿಡ್ಜ್‌ನ ಖಗೋಳ ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ.

ನಮ್ಮ ಸೌರಮಂಡಲದಲ್ಲೇ ಇರುವ ಆ ಗ್ರಹ ಭೂಮಿಗಿಂತ ಎರಡೂವರೆ ಪಟ್ಟು ದೊಡ್ಡದಾಗಿದ್ದು, ಅಲ್ಲಿನ ವಾತಾವರಣದಲ್ಲಿ ಜಲಜನಕ ಹೇರಳವಾಗಿದೆ. ಹಾಗಾಗಿ, ಅಲ್ಲಿ ನೀರಿನ ಕಣಗಳು ಭರಪೂರವಾಗಿವೆ. ಮಿಥೇನ್ ಮತ್ತು ಅಮೋನಿಯಾ ಅನಿಲಗಳ ಪ್ರಮಾಣ ನಿರೀಕ್ಷೆಗಿಂತ ಕಡಿಮೆ ಇರುವುದರಿಂದ ಮಾನವರು ವಾಸಿಸಲು ಹೇಳಿ ಮಾಡಿಸಿದಂಥ ಹವಾಮಾನ ಇಲ್ಲಿದೆ ಎಂಬುದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. **(ಉದಯವಾಣಿ 29-2-2020)**

==========================================================

**'ಡಬ್ಲ್ಯೂಎಎಸ್‌ಪಿ-76' ಗುಣವಿಶೇಷ ಬಣ್ಣಿಸಿರುವ ಸ್ವಿಸ್ ವಿಜ್ಞಾನಿಗಳು**

## ಕಬ್ಬಿಣದ ಮಳೆ ಸುರಿಸೋ ಗ್ರಹ ಪತ್ತೆ!

*** 2400 ಡಿ.ಸೆ. – ಹೊಸ ಗ್ರಹದ ಹಗಲಿನಲ್ಲಿ ಇರುವ ಉಷ್ಣಾಂಶ**

*** 1500 ಡಿ.ಸೆ. – ರಾತ್ರಿಯ ಹೊತ್ತಿನಲ್ಲಿ ಇಳಿಕೆಯಾಗುವ ಶಾಖ**

*** 640 ಜ್ಯೋತಿರ್ವರ್ಷ – ಭೂಮಿಯಿಂದ ಹೊಸ ಗ್ರಹ ನಡುವೆ ಇರುವ ದೂರ**

ವಾಷಿಂಗ್ಟನ್, ಮಾ. 12: ಭೂಮಿಯಿಂದ ಸುಮಾರು 640 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ಅತಿ ಶಾಖವುಳ್ಳ ದೊಡ್ಡ ಗ್ರಹವೊಂದು ಪತ್ತೆಯಾಗಿದ್ದು, ಆ ಗ್ರಹದ ರಾತ್ರಿಯ ವೇಳೆ ಅಲ್ಲಿ ಕಬ್ಬಿಣದ ಅಂಶವು ಅಲ್ಲಿನ ನೆಲಕ್ಕೆ ಮಳೆಯಂತೆ ಸುರಿಯುತ್ತದೆ ಎಂಬ ಅಚ್ಚರಿಯ ವಿಚಾರವೊಂದನ್ನು ಯೂನಿವರ್ಸಿಟಿ ಆಫ್ ಜಿನೇವಾದ ವಿಜ್ಞಾನಿಗಳು ಹೊರಹಾಕಿದ್ದಾರೆ.

ಆ ಗ್ರಹಕ್ಕೆ 'ಡಬ್ಲ್ಯೂಎಎಸ್‌ಪಿ-76' ಎಂದು ಹೆಸರಿಡಲಾಗಿದ್ದು, ಅದಕ್ಕೆ ಒಬ್ಬ ಸೂರ್ಯನಿದ್ದಾನೆ. ತನ್ನ ಸೂರ್ಯನಿಗೆ ತೀರಾ ಸಮೀಪದಲ್ಲಿರುವ ಕಾರಣದಿಂದ ಆ ಗ್ರಹದ ಹಗಲಿನ ವೇಳೆ ಅಲ್ಲಿ 2,400 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶವಿರುತ್ತದೆ. ಅತಿ ಉಷ್ಣಾಂಶದಿಂದಾಗಿ ಅಲ್ಲಿನ ನೆಲದಲ್ಲಿರುವ ಕಬ್ಬಿಣಾಂಶ ಭಾಷ್ಪೀಕರಣಗೊಂಡು ವಾತಾವರಣಕ್ಕೆ ಸೇರುತ್ತದೆ. ನಮ್ಮ ಭೂಮಿಯ ಹಾಗೆಯೇ, ಆ ಗ್ರಹದ ಒಂದು ಮಗ್ಗುಲಲ್ಲಿ ಹಗಲಿದ್ದಾಗ, ಮತ್ತೊಂದು ಕಡೆ ರಾತ್ರಿಯಿರುತ್ತದೆ. ಆದರೆ, ಅಲ್ಲಿ ರಾತ್ರಿಯಿರುವ ಕಡೆ ಉಷ್ಣಾಂಶ 1.500 ಡಿಗ್ರಿಗೆ ಕುಸಿಯುತ್ತದೆ. ಆಗ ಭಾಷ್ಪೀಕರಣಗೊಂಡ ಕಬ್ಬಿಣದ ಕಣಗಳು ಕಡಿಮೆ ಉಷ್ಣಾಂಶದ ಕಡೆಗೆ ಸಾಗಿ ಅಲ್ಲಿ ಸಂಯುಕ್ತಗೊಂಡು ಮಳೆಯಂತೆ ನೆಲಕ್ಕೆ ಬೀಳುತ್ತವೆ.

### 130 ಹೊಸ ಗ್ರಹಗಳು ಪತ್ತೆ

ನಾವಿರುವ ಸೌರ ಮಂಡಲದ ಅಂಚಿನಲ್ಲಿ 139 ಹೊಸ ಸಣ್ಣ ಗ್ರಹಗಳನ್ನು ಪತ್ತೆ ಹಚ್ಚಲಾಗಿದೆ ಎಂದು ದ ಆಸ್ಟ್ರೋಫಿಸಿಕಲ್ ಜರ್ನಲ್ ಸಪ್ಲಿಮೆಂಟ್ ಸೀರೀಸ್ ಎಂಬ ನಿಯತಕಾಲಿಕೆಯಲ್ಲಿ ಮೂಡಿಬಂದಿರುವ ಅಧ್ಯಯನ ವರದಿಯೊಂದು ತಿಳಿಸಿದೆ. ಇವುಗಳಿಗೆ ಟ್ರಾನ್ಸ್-ನೆಪ್ಚೂನ್ ಗ್ರಹಗಳೆಂದು ('ಟಿಎನ್‌ಒ'ಗಳು) ಪರಿಗಣಿಸಲಾಗಿದೆ. **(ಉದಯವಾಣಿ 13-3-2020)**

==========================================================

## ನೆಪ್ಚೂನ್‌ಗೂ ಆಚೆ 139 ಹೊಸ ಆಕಾಶಕಾಯಗಳ ಪತ್ತೆ

ವಾಶಿಂಗ್ಟನ್, ಮಾ. 12: ಸೌರವ್ಯೂಹದ ಕೊನೆಯ ಗ್ರಹ ನೆಪ್ಚೂನ್‌ನ ಆಚೆಗೆ 139 ಹೊಸ ಆಕಾಶಕಾಯಗಳನ್ನು ಖಗೋಳ ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ.

ಇದರೊಂದಿಗೆ ಈ ಮಾದರಿಯ ಆಕಾಶಕಾಯಗಳನ್ನು ಪತ್ತೆಹಚ್ಚುವ ಹೊಸ ವಿಧಾನವೊಂದನ್ನೂ ವಿಜ್ಞಾನಿಗಳು ಆವಿಷ್ಕರಿಸಿದ್ದಾರೆ ಎಂದು 'ದಿ ಆ್ಯಸ್ಟ್ರೋಫಿಸಿಕಲ್ ಜರ್ನಲ್ ಸಪ್ಲಿಮೆಂಟ್ ಸೀರೀಸ್'ನಲ್ಲಿ ಪ್ರಕಟಗೊಂಡಿರುವ ಅಧ್ಯಯನವೊಂದು ತಿಳಿಸಿದೆ. ಈ ಹೊಸ

ವಿಧಾನವು ಮುಂದಿನ ದಿನಗಳಲ್ಲಿ ಕಾಲ್ಪನಿಕ 'ಒಂಬತ್ತನೇ ಗ್ರಹ' ಹಾಗೂ ಇತರ ಪತ್ತೆಯಾಗದ ಗ್ರಹಗಳ ಸಂಶೋಧನೆಯಲ್ಲಿ ಮಹತ್ವದ ಪಾತ್ರ ವಹಿಸಬಹುದಾಗಿದೆ.

"ನೆಪ್ಚೂನ್‌ನ ಆಚೆಗೆ ಇರುವ ಆಕಾಶದಲ್ಲಿ ಎಷ್ಟು ಆಕಾಶಕಾಯಗಳನ್ನು ಪತ್ತೆಹಚ್ಚಬಹುದು ಎನ್ನುವುದು ಎಷ್ಟು ಪ್ರಮಾಣದ ಆಕಾಶವನ್ನು ನೋಡಬಹುದು ಹಾಗೂ ಎಷ್ಟು ಅತ್ಯಂತ ಅಸ್ಪಷ್ಟ ವಸ್ತುಗಳನ್ನು ಕಾಣಬಹುದು ಎನ್ನುವುದನ್ನು ಅವಲಂಬಿಸಿದೆ" ಎಂದು ಅಮೆರಿಕದ ಪೆನ್ಸಿಲ್ವೇನಿಯ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಗ್ಯಾರಿ ಬರ್ನ್‌ಸ್ಟೀನ್ ಹೇಳುತ್ತಾರೆ. **(ವಾರ್ತಾಭಾರತಿ 13-3-2020)**

===================================================

## 93ನೇ ವಯಸ್ಸಿನಲ್ಲಿ ಪದವಿ ಪಡೆದ ಸಾಧಕ

ಹೊಸದಿಲ್ಲಿ: ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ (ಇಗ್ನೋ) ಈ ಬಾರಿಯ ಘಟಿಕೋತ್ಸವದಲ್ಲಿ ತಮಿಳುನಾಡು ಮೂಲದ ಶಿವಸುಬ್ರಹ್ಮಣ್ಯನ್, ತಮ್ಮ 93ನೇ ವರ್ಷದಲ್ಲಿ ಸ್ನಾತಕ್ಕೋತ್ತರ ಪದವಿ ಪಡೆದು ಎಲ್ಲರ ಗಮನ ಸೆಳೆದಿದ್ದಾರೆ.

1940ರ ದಶಕದಲ್ಲಿ ತಮಿಳುನಾಡಿನಲ್ಲಿ ಶಾಲಾ ಮಟ್ಟದ ವಿದ್ಯಾಭ್ಯಾಸ ಮುಗಿಸಿದ್ದ ಅವರು, ಕೌಟುಂಬಿಕ ಜವಾಬ್ದಾರಿಗಳಿಂದಾಗಿ ಕಾಲೇಜು ಮೆಟ್ಟಿಲು ಹತ್ತಲು ಆಗಿರಲಿಲ್ಲ, ಅನಂತರ, ಕೇಂದ್ರ ವಾಣಿಜ್ಯ ಸಚಿವಾಲಯದಲ್ಲಿ ಕ್ಲರ್ಕ್ ಆಗಿ ನೇಮಿಸಲ್ಪಟ್ಟು ಹೊಸದಿಲ್ಲಿಗೆ ಸ್ಥಳಾಂತರಗೊಂಡಿದ್ದರು. ಆಗಲೂ, ಬಿಡುವಿಲ್ಲದ ದುಡಿಮೆ, ಮದುವೆ – ಮಕ್ಕಳು, ಕುಟುಂಬ ಬಾಧ್ಯತೆ ಮುಂತಾದ ವಿಚಾರಗಳಲ್ಲಿ ಅವರ ಪದವಿ ಗಳಿಸುವ ಕನಸು ಹಾಗೆಯೇ ಉಳಿದಿತ್ತು.

ನಿವೃತ್ತಿಯ ನಂತರ, ಇಗ್ನೋದಲ್ಲಿ ಸಾರ್ವಜನಿಕ ಆಡಳಿತ ವಿಷಯದ ಪದವಿ ಶಿಕ್ಷಣ ಪಡೆದ ಅವರು, ಈಗ ಸ್ನಾತಕೋತ್ತರ ಪದವಿಯನ್ನೂ ಗಳಿಸಿದ್ದಾರೆ. **(ಉದಯವಾಣಿ 19-2-2020)**

===================================================

## ಸಾಕ್ಷರತಾ ಪರೀಕ್ಷೆಯಲ್ಲಿ 105ರ ಅಜ್ಜಿ ಪಾಸ್

ತಿರುವನಂತಪುರ, ಫೆ. 5: 4ನೇ ತರಗತಿ ಪರೀಕ್ಷೆ ಬರೆದಿದ್ದ ಕೇರಳದ 105 ವರ್ಷದ ವೃದ್ಧೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಅದರ ಜತೆಗೆ, ಪರೀಕ್ಷೆಗೆ ಕೂತು ಉತ್ತೀರ್ಣರಾದ ದೇಶದ ಅತ್ಯಂತ ಹಿರಿಯ ವ್ಯಕ್ತಿ ಎಂಬ ಖ್ಯಾತಿಗೂ ಪಾತ್ರರಾಗಿದ್ದಾರೆ. ಕಳೆದ ವರ್ಷ ಕೇರಳ ರಾಜ್ಯ ಸಾಕ್ಷರತಾ ಮಿಷನ್ ನಡೆಸಿದ್ದ ಸಾಕ್ಷರತಾ ಪರೀಕ್ಷೆಯನ್ನು ಶತಾಯುಷಿ ಭಾಗೀರಥಿ ತೆಗೆದುಕೊಂಡಿದ್ದರು. ಈ ಪರೀಕ್ಷೆ ತೇರ್ಗಡೆಯಾದ ಅತ್ಯಂತ ಹಿರಿಯ ವಯಸ್ಸಿನವರು ಇವರು ಎನ್ನಲಾಗಿದೆ. **(ಉದಯವಾಣಿ 6-2-2020)**

===================================================

## 2ರ ಬಾಲಕನಿಗೆ 102 ವಯಸ್ಸು ಎಂದು ನಮೂದು!

ಬರೇಲಿ, ಜ 21: ಉತ್ತರ ಪ್ರದೇಶದಲ್ಲಿ 2 ವರ್ಷದ ಬಾಲಕನ ಜನನ ಪ್ರಮಾಣ ಪತ್ರದಲ್ಲಿ ಆತನಿಗೆ 102 ವರ್ಷ ವಯಸ್ಸು, 4 ವರ್ಷದ ಬಾಲಕನ ಜನನ ಪ್ರಮಾಣ ಪತ್ರದಲ್ಲಿ 104 ವರ್ಷ ವಯಸ್ಸು ಎಂದು ನಮೂದಾಗಿದೆ. ಗ್ರಾಮಾಭಿವೃದ್ಧಿ ಅಧಿಕಾರಿಗೆ ಲಂಚ ನೀಡಲು ಮಕ್ಕಳ ಹೆತ್ತವರು ನಿರಾಕರಿಸಿದ್ದಕ್ಕಾಗಿಯೇ ಈ ರೀತಿ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಕೋರ್ಟ್ ಆದೇಶಿಸಿದೆ. **(ಉದಯವಾಣಿ 22-1-2020)**

===================================================

## ಪೋಪ್ ಪ್ರಸ್ತಾವಕ್ಕೆ ನಿವೃತ್ತ ಪೋಪ್ ಆಕ್ಷೇಪ

ವ್ಯಾಟಿಕನ್ ಸಿಟಿ, ಜ. 13: ಕ್ರಿಶ್ಚಿಯನ್ ಸಮುದಾಯದಲ್ಲಿ ಧರ್ಮ ಗುರುಗಳ ಸಂಖ್ಯೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ವಿವಾಹಿತರನ್ನೂ ಆ ಹುದ್ದೆಗೆ ನೇಮಕ ಮಾಡುವ ಕುರಿತು ಪೋಪ್ ಫ್ರಾನ್ಸಿಸ್ ಮಂಡಿಸಿರುವ ಪ್ರಸ್ತಾವಕ್ಕೆ ನಿವೃತ್ತ ಪೋಪ್ 16ನೇ ಬೆನೆಡಿಕ್ಟ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಇದೇ ಮೊದಲ ಬಾರಿಗೆ ವ್ಯಾಟಿಕನ್ ಚರ್ಚ್ (ಕ್ಯಾಥೋಲಿಕ್)ನ ಆಗುಹೋಗುಗಳಲ್ಲಿ ನಿವೃತ್ತ ಪೋಪ್‌ವೊಬ್ಬರು ಮಧ್ಯಪ್ರವೇಶ ಮಾಡಿದಂತಾಗಿದೆ. ಬ್ರಹ್ಮ ಚರ್ಯೆ (ಧರ್ಮ ಗುರುಗಳು ವೈವಾಹಿಕ ಜೀವನದಿಂದ ದೂರ ಇರುವ ವ್ರತ) ಎನ್ನುವುದು ತಲೆತಲಾಂತರಗಳಿಂದ ನಡೆದುಬಂದಿರುವ ಪವಿತ್ರ ಸಂಪ್ರದಾಯ. ಧರ್ಮಗುರುಗಳು ಬ್ರಹ್ಮಚರ್ಯೆ ಪಾಲಿಸುವುದಕ್ಕೆ ಅದರದ್ದೇ ಆದ ಮಹತ್ವವಿದೆ. ಹೀಗಾಗಿ ವಿವಾಹಿತರಿಗೆ ಈ ಹುದ್ದೆಯನ್ನು ನೀಡುವ ಪ್ರಸ್ತಾವವು ಒಪ್ಪುವಂಥದ್ದಲ್ಲ ಎಂದು 16ನೇ ಬೆನೆಡಿಕ್ಟ್ ಅಭಿಪ್ರಾಯಪಟ್ಟಿದ್ದಾರೆ. 16ನೇ ಬೆನೆಡಿಕ್ಟ್ ಅವರು ಕಾರ್ಡಿನಲ್ ರಾಬರ್ಟ್ ಸರಾ ಅವರ ಜತೆಗೂಡಿ ಬರೆದಿರುವ ಪುಸ್ತಕದಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ. **(ಉದಯವಾಣಿ 14-1-2020)**

===================================================

## ಅತ್ಯಾಚಾರಿ ಪಾದ್ರಿಗೆ ಪೋಪ್‌ರಿಂದ ಉಚ್ಚಾಟನೆ ಶಿಕ್ಷೆ

ಕೊಚ್ಚಿ, ಮಾ. 1: ಬಾಲಕಿ ಮೇಲೆ ಅತ್ಯಾಚಾರವೆಸಗಿದ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ಕೇರಳದ ಪಾದ್ರಿಯನ್ನು ಉಚ್ಚಾಟಿಸಿ ಪೋಪ್ ಫ್ರಾನ್ಸಿಸ್ ಆದೇಶ ಹೊರಡಿಸಿದ್ದಾರೆ. 16ರ ಬಾಲಕಿ ಮೇಲೆ ಅತ್ಯಾಚಾರವೆಸಗಿರುವ ಸೈರೋ – ಮಲಬಾರ್ ಚರ್ಚ್‌ನ ಪಾದ್ರಿ ರಾಬಿನ್ ವಡಕ್ಕಂಚೇರಿ ಪ್ರಸ್ತುತ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಅಪ್ರಾಪ್ತ ವಯಸ್ಸಿನವರ ಮೇಲೆ ಲೈಂಗಿಕ ದೌರ್ಜನ್ಯ ಎಸಗುವವರ

ವಿರುದ್ಧದ 'ಶೂನ್ಯ ಸಹಿಷ್ಣುತೆ' ನೀತಿಗೆ ಅನುಗುಣವಾಗಿ ಪೋಪ್ ಈ ನಿರ್ಧಾರ ಕೈಗೊಂಡಿದ್ದಾರೆ ಎಂದು ಚರ್ಚ್‌ನ ಅಧಿಕಾರಿಗಳು ತಿಳಿಸಿದ್ದಾರೆ. ಇನ್ನೊಂದು ಪ್ರಕರಣದಲ್ಲಿ ಅತ್ಯಾಚಾರ ಆರೋಪ ಎದುರಿಸುತ್ತಿರುವ ಬಿಷಪ್ ಫ್ರಾಂಕೋ ಮುಲಕ್ಕಲ್ ವಿರುದ್ಧದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಕಾರಣಕ್ಕೆ ತಮ್ಮನ್ನು ಚರ್ಚ್‌ನಿಂದ ಹೊರಹಾಕಿದ ನಿರ್ಧಾರ ಪ್ರಶ್ನಿಸಿ ಸಿಸ್ಟರ್ ಲೂಸಿ ಕಲಪುರ ಅವರು ಸಲ್ಲಿಸಿದ್ದ ಮನವಿಯನ್ನು ವ್ಯಾಟಿಕನ್ ತಿರಸ್ಕರಿಸಿದೆ. **(ಉದಯವಾಣಿ 2–3–2020)**

==========================================================

## ಮದ್ರಸದ ಬಾಲಕಿಯರಿಗೆ ಕಿರುಕುಳ: ಶಿಕ್ಷಕನ ವಿರುದ್ಧ ಪೋಕ್ಸೋ ದಾಖಲು

ಕುಂಬಳೆ, ಜ. 22: ಇಲ್ಲಿಗೆ ಸಮೀಪದ ಬಂದ್ಯೋಡಿನ ವಸತಿ ಮದ್ರಸದಲ್ಲಿ ಕಲಿಯುವ 14 ಮತ್ತು 17 ವರ್ಷ ಪ್ರಾಯದ ಬಾಲಕಿಯರಿಗೆ ನವೆಂಬರ್–ಡಿಸೆಂಬರ್ ತಿಂಗಳಲ್ಲಿ ಕಿರುಕುಳ ನೀಡಿದ ಘಟನೆಗೆ ಸಂಬಂಧಿಸಿ ಮದ್ರಸ ಶಿಕ್ಷಕ ತಿರುವನಂತಪುರ ನಿವಾಸಿ ಶಿಯಾದ್ ಉಸ್ತಾದ್ ವಿರುದ್ಧ ಕುಂಬಳೆ ಪೊಲೀಸರು ಪೋಕ್ಸೋ ಕೇಸು ದಾಖಲಿಸಿದ್ದಾರೆ.

ಇಲ್ಲಿ ಕಲಿಯುತ್ತಿರುವ ಮಂಗಳೂರು ನಿವಾಸಿಗಳಾದ ಬಾಲಕಿಯರು ನೀಡಿದ ದೂರಿನಂತೆ ಪೊಲೀಸರು ತನಿಖೆ ನಡೆಸಿದ್ದು, ಆಗ ಇನ್ನಷ್ಟು ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡಿದ ಬಗ್ಗೆ ಮಾಹಿತಿ ಲಭಿಸಿದೆ. **(ಉದಯವಾಣಿ 23–1–2020)**

==========================================================

## ಬುರ್ಖಾ ನಿಷೇಧ ಹಿಂಪಡೆದ ಕಾಲೇಜು

ಪಾಟ್ನಾ: ಇತ್ತೀಚೆಗೆ ಕಾಲೇಜಿನ ಆವರಣದಲ್ಲಿ ಮತ್ತು ತರಗತಿಯೊಳಗೆ ವಿದ್ಯಾರ್ಥಿನಿಯರು ಬುರ್ಖಾ ಧರಿಸಿರುವುದನ್ನು ನಿಷೇಧಿಸಿದ್ದ ಬಿಹಾರದ ಜೆ ಡಿ ಮಹಿಳಾ ಕಾಲೇಜು ಈಗ ಏಕಾಏಕಿ ನಿಷೇಧ ವಾಪಸ್ ಪಡೆದಿದೆ. ಈ ಕುರಿತು ಸ್ಪಷ್ಟನೆ ನೀಡಿರುವ ಪ್ರಾಂಶುಪಾಲರು, 'ಕಾಲೇಜಿಗೆ ಸಮವಸ್ತ್ರ ಇದೆ. ಅದನ್ನು ಧರಿಸುವುದು ಕಡ್ಡಾಯ. ಬುರ್ಖಾ ಕುರಿತು ಯಾವುದೇ ನಿಯಮ ಇಲ್ಲ' ಎಂದಿದ್ದಾರೆ.

**(ಉದಯವಾಣಿ 26–1–2020)**

==========================================================

## ಮೆಕ್ಕಾ, ಮದೀನ ಯಾತ್ರೆಗೆ ನಿರ್ಬಂಧ

### ಯಾತ್ರಾರ್ಥಿಗಳ ವೀಸಾ ರದ್ದುಪಡಿಸಿದ ಸೌದಿ ಅರೇಬಿಯಾ ಸರಕಾರ

ರಿಯಾದ್, ಫೆ. 27: ವಿಶ್ವಾದ್ಯಂತ ವ್ಯಾಪಿಸಿರುವ ಮಾರಣಾಂತಿಕ ಕೊರೊನಾ ವೈರಸ್ ಸೋಂಕು ಮುಸ್ಲಿಮರ ವಾರ್ಷಿಕ ಹಜ್ ಯಾತ್ರೆ ಮತ್ತು ಉಮ್ರಾ ಮೇಲೂ ಪರಿಣಾಮ ಬೀರಿದೆ. ಸದ್ಯಕ್ಕೆ ಮೆಕ್ಕಾ ಮತ್ತು ಮದೀನಾ ಭೇಟಿಗೆ ನಿಷೇಧ ಹೇರಿರುವ ಸೌದಿ ಅರೇಬಿಯಾವು ಇಸ್ಲಾಂನ ಪವಿತ್ರ ಯಾತ್ರಾಸ್ಥಳಕ್ಕೆ ಆಗಮಿಸುವವರ ವೀಸಾಗಳನ್ನು ರದ್ದು ಮಾಡಿದೆ.

ಪ್ರತಿ ವರ್ಷವೂ ಮೆಕ್ಕಾ ಮತ್ತು ಮದೀನಗಳಿಗೆ ಲಕ್ಷಾಂತರ ಮಂದಿ ಭೇಟಿ ನೀಡುತ್ತಾರೆ. ಹಜ್ ಯಾತ್ರೆಯ ದಿನಗಳನ್ನು ಹೊರತುಪಡಿಸಿಯೂ ಉಮ್ರಾ ಯಾತ್ರೆಗಾಗಿ ಆಗಮಿಸುತ್ತಾರೆ. ಸದ್ಯಕ್ಕೆ ಸೌದಿ ಅರೇಬಿಯಾದಲ್ಲಿ ಕೊರೊನಾ ವೈರಸ್ ಸೋಂಕು ದೃಢಪಟ್ಟ ಪ್ರಕರಣಗಳು ವರದಿಯಾಗಿಲ್ಲ. ಆದರೆ ನೆರೆಹೊರೆಯ ರಾಷ್ಟ್ರಗಳಲ್ಲಿ, ಅಂದರೆ ಒಟ್ಟಾರೆ ಮಧ್ಯ ಪ್ರಾಚ್ಯದಲ್ಲಿ 240 ಮಂದಿಗೆ ಸೋಂಕು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಮುಂಜಾಗ್ರತೆಯ ಕ್ರಮವಾಗಿ ಯಾರಿಗೂ ವೀಸಾ ನೀಡದಿರಲು ನಿರ್ಧರಿಸಲಾಗಿದೆ ಎಂದು ಸೌದಿ ಸರಕಾರ ತಿಳಿಸಿದೆ.

**(ಉದಯವಾಣಿ 28–2–2020)**

==========================================================

## 33 ಮಂದಿ ಸಜೀವ ದಹನ ಕೇಸ್: ಅಪರಾಧಿಗಳಿಗೆ ಜಾಮೀನು

*** ಗೋದ್ರೋತ್ತರ ಗಲಭೆ ಪ್ರಕರಣ ವಿಚಾರಣೆ * ವಾರಕ್ಕೆ ಆರು ಗಂಟೆ ಸಮಾಜ ಸೇವೆಗೆ ಆದೇಶ**

ಹೊಸದಿಲ್ಲಿ, ಜ. 28: ಗುಜರಾತ್‌ನಲ್ಲಿ 2002ರಲ್ಲಿ ನಡೆದ ಗೋಧ್ರೋತ್ತರ ಗಲಭೆ ವೇಳೆ 33 ಮಂದಿ ಮುಸ್ಲಿಮರನ್ನು ಸಜೀವ ದಹನ ಮಾಡಿದ ಪ್ರಕರಣ ಸಂಬಂಧ 15 ಮಂದಿ ಅಪರಾಧಿಗಳಿಗೆ ಸುಪ್ರೀಂಕೋರ್ಟ್ ಮಂಗಳವಾರ ಜಾಮೀನು ನೀಡಿದೆ.

ಗುಜರಾತ್‌ನಿಂದ ದೂರವಿದ್ದು, ಮಧ್ಯ ಪ್ರದೇಶದ ಎರಡು ಪ್ರತ್ಯೇಕ ನಗರಗಳಲ್ಲಿದ್ದುಕೊಂಡು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅಪರಾಧಿಗಳಿಗೆ ಕೋರ್ಟ್ ಸೂಚಿಸಿದೆ. 2002 ಫೆ. 28ರಂದು ಮೆಹ್ಸಾನಾ ಜಿಲ್ಲೆಯ ಸರ್ದಾರ್ಪುರ ಗ್ರಾಮದ ಮನೆಯೊಂದರಲ್ಲಿ 33 ಮುಸ್ಲಿಮರು ಆಶ್ರಯ ಪಡೆದಿದ್ದರು. ಅಲ್ಲಿಗೆ ಆಗಮಿಸಿದ ಗಲಭೆಕೋರರ ಗುಂಪೊಂದು, ಆ ಮನೆಗೆ ಬೆಂಕಿ ಹಚ್ಚಿದ ಪರಿಣಾಮ ಎಲ್ಲ 22 ಮಹಿಳೆಯರು ಸಹಿತ 33 ಮಂದಿ ಸಜೀವ ದಹನವಾಗಿದ್ದರು. ಪ್ರಕರಣ ಸಂಬಂಧ 15 ಮಂದಿ ಅಪರಾಧಿಗಳಿಗೆ ಗುಜರಾತ್ ಹೈಕೋರ್ಟ್ ಗಲ್ಲುಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು.

ಅದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಮಂಗಳವಾರ ಸಿಜೆಐ ಎಸ್.ಎ. ಬೋಬ್ಡೆ ನೇತೃತ್ವದ ನ್ಯಾಯಪೀಠ, ಈ ಅಪರಾಧಿಗಳಿಗೆ ಜಾಮೀನು ನೀಡಿದೆ. 15 ಮಂದಿಯನ್ನು ಎರಡು ಗುಂಪುಗಳಾಗಿ ವಿಂಗಡಿಸಿ, ವಾರಕ್ಕೆ 6 ಗಂಟೆ ಸಮಾಜ ಸೇವೆ ಮಾಡಬೇಕು ಎಂದು ಷರತ್ತು ವಿಧಿಸಿದೆ. **(ಉದಯವಾಣಿ 29–1–2020)**

ಆರೋಗ್ಯ

ಬಾಳು ಕಹಿಯಾಗಿಸುವ 'ಬಿಳಿವಿಷ!'

# ಸಿಹಿ ಸಿಹಿ ಸಕ್ಕರೆ ತೋರದು ಅಕ್ಕರೆ

ಪ್ರಶಾಂತ ಭಾಗ್ವತ
(ಸಂಗ್ರಹಿತ ಮಾಹಿತಿ)

ಸಕ್ಕರೆ ಅಂದರೆ ಯಾರಿಗೆ ಗೊತ್ತಿಲ್ಲ ಹೇಳಿ? ಅದೊಂದು ಸಿಹಿ ಪದಾರ್ಥ, ಸಿಹಿಯಾದ ತಿಂಡಿ–ತಿನಿಸು ತಯಾರಿಸಲು ಈ ಸಕ್ಕರೆ ಬೇಕೇಬೇಕು. ಸಕ್ಕರೆಯಲ್ಲಿ ಸಿಹಿ ಅಂಶ ಇರುವ ವಿಷಯವಷ್ಟೇ ಗೊತ್ತು. ಆದರೆ, ನಿತ್ಯವೂ ನಾವು ಸೇವಿಸುತ್ತಿರುವ ಸಕ್ಕರೆ ಮೂಲಕವಾಗಿ ನಮ್ಮ ದೇಹಕ್ಕೆ ವಿಷವೂ ಸೇರುತ್ತಿದೆ. ಈ ವಿಷಯ ಸಕ್ಕರೆ ಸೇವಿಸುವ ಬಹುತೇಕರಿಗೆ ತಿಳಿದಿಲ್ಲ.

ಸಕ್ಕರೆಯೂ ವಿಷ ಎನ್ನುವುದನ್ನು ವಿಜ್ಞಾನಿಗಳು ದೃಢಪಡಿಸಿದ್ದಾರೆ. ಸಕ್ಕರೆ ತಯಾರಿಕೆಯಲ್ಲಿ ಅಧಿಕ ಪ್ರಮಾಣದಲ್ಲಿ ಗಂಧಕ (ಸಲ್ಫರ್) ಬಳಸಲಾಗುತ್ತದೆ. ಅದೊಂದು ರಾಸಾಯನಿಕ (ಕೆಮಿಕಲ್) ಪದಾರ್ಥವಾಗಿದ್ದು, ವಿಷಕಾರಕ ಅಂಶವನ್ನೇ ಒಳಗೊಂಡಿದೆ.

ಭಾರತೀಯರಿಗೆ ಸಕ್ಕರೆ ಬಳಕೆ ತಿಳಿದೇ ಇರಲಿಲ್ಲ. ಸಿಹಿ ತಿಂಡಿ ತಯಾರಿಸಲು ಅಥವಾ ಪಾಯಸ–ಕಜ್ಜಾಯ ತಯಾರಿಸಲೂ ನಮ್ಮ ಪೂರ್ವಜರು ಬೆಲ್ಲವನ್ನೇ ಬಳಸುತ್ತಿದ್ದರು. ಹೀಗಾಗಿಯೇ ಅವರು ಆರೋಗ್ಯವಂತರಾಗಿದ್ದರು. ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಬ್ರಿಟಿಷರು 1868ರಲ್ಲಿ ಸಕ್ಕರೆ ತಯಾರಿಸುವ ಕಾರ್ಖಾನೆ ಆರಂಭಿಸಿದರು.

ತಲೆತಲಾಂತರದಿಂದ ಸಾಂಪ್ರದಾಯಿಕವಾಗಿ ಬಳಸುತ್ತಿದ್ದ ಬೆಲ್ಲದ ಜಾಗದಲ್ಲಿ ಕೇವಲ 150 ವರ್ಷದ ಹಿಂದೆ ಬಿಳಿಯರು ತಯಾರಿಸಿದ ಬಿಳಿ ವಿಷ (ಸಕ್ಕರೆ) ನಮ್ಮೆಲ್ಲರ ಆಹಾರ ಪದ್ಧತಿಯಲ್ಲಿ ಹಾಸು ಹೊಕ್ಕಿದೆ. ಸಕ್ಕರೆಯಲ್ಲಿರುವ ವಿಷಕಾರಕ ಅಂಶದಿಂದ ಅನೇಕ ಪ್ರಕಾರದ ರೋಗ–ರುಜಿನ ಹರಡುತ್ತಿರುವುದನ್ನು ವೈಜ್ಞಾನಿಕ ಲೋಕವೇ ಸಾಬೀತುಪಡಿಸಿದೆ.

* ಮೊದಲೇ ತಿಳಿಸಿದಂತೆ ಸಕ್ಕರೆ ಉತ್ಪಾದಿಸುವಾಗ ಸರ್ವಾಧಿಕ ಪ್ರಮಾಣದಲ್ಲಿ ಗಂಧಕ ಉಪಯೋಗಿಸಲಾಗುತ್ತದೆ.
* ಗಂಧಕವನ್ನು ಬಾಂಬ್ ತಯಾರಿಸಲು, ಸಿಡಿಮದ್ದು ಅಥವಾ ಪಟಾಕಿ ತಯಾರಿಸಲು ಬಳಸುತ್ತಾರೆ. ಅದೊಂದು ರಾಸಾಯನಿಕ ವಸ್ತುವಾಗಿದೆ.
* ಗಂಧಕವು ಅತ್ಯಂತ ಜಡ ಪದಾರ್ಥವಾಗಿದ್ದು, ಒಮ್ಮೆ ಶರೀರದೊಳಗೆ ಸೇರಿದರೆ ಸುಲಭವಾಗಿ ಹೊರಬೀಳದು.
* ಗಂಧಕಾಂಶವಿರುವ ಸಕ್ಕರೆ ಸೇವನೆಯಿಂದ ಕೊಲೆಸ್ಟ್ರಾಲ್ ಹೆಚ್ಚುತ್ತದೆ. ಕೊಲೆಸ್ಟ್ರಾಲ್ ಹೆಚ್ಚಳದಿಂದ ಹೃದಯಾಘಾತ ಸಂಭವಿಸುತ್ತದೆ.
* ಸಕ್ಕರೆಯಿಂದ ತಯಾರಿಸಿದ ಸಿಹಿ ತಿಂಡಿ ಸೇವನೆಯಿಂದ ದೇಹದ ತೂಕ ಹೆಚ್ಚಲೂ ಕಾರಣವಾಗುತ್ತದೆ.
* ದೇಹದಲ್ಲಿ ರಕ್ತದೊತ್ತಡ (ಬಿ.ಪಿ)ಕ್ಕೆ ಕಾರಣವಾಗಬಲ್ಲದು. ಅಲ್ಲದೆ, ಮೆದುಳಿಗೆ ಸ್ಟ್ರೋಕ್ ಹೊಡೆಬಹುದಾದ ಸಾಧ್ಯತೆಯೂ ಇದೆ.
* ಸಕ್ಕರೆ ತಯಾರಿಕೆಯಲ್ಲಿ 23ಕ್ಕೂ ಹೆಚ್ಚು ಹಾನಿಕಾರಕ ರಾಸಾಯನಿಕ ಬಳಸುವುದರಿಂದ ದೇಹ ಸೇರಿದ ಸಕ್ಕರೆಯಿಂದಾಗಿ ಪಚನ ಶಕ್ತಿ ಕ್ಷೀಣಿಸುತ್ತದೆ.
* ಸಕ್ಕರೆಯೂ ಕ್ಯಾನ್ಸರ್ ಕಾರಕವಾಗಿದೆ. ಕ್ಯಾನ್ಸರ್‌ನ ಜೀವಾಣುಗಳು ಸಕ್ಕರೆ ಇಲ್ಲದೆ ಇರಲಾರವು ಎಂದು ತಜ್ಞರು ಅಧ್ಯಯನದ ಮೂಲಕ ಸಾಬೀತು ಮಾಡಿದ್ದಾರೆ.
* ಮನುಷ್ಯನಿಗೆ ಬೆಂಬಿಡದ ಭೂತದಂತೆ ಕಾಡುವ 'ಸಕ್ಕರೆ ಕಾಯಿಲೆ' (ಡಯಾಬಿಟೀಸ್)ಗೆ ಇದೇ ಸಕ್ಕರೆಯೇ ಮೂಲ ಕಾರಣ.
* ಎಸಿಡಿಟಿ, ಹೈಪರ್ ಎಸಿಡಿಟಿ ಹಾಗೂ ಹೊಟ್ಟೆಯಲ್ಲಿ ಒಂದು ಬಗೆಯ ಉರಿ ಉಂಟಾಗಲೂ ಮುಖ್ಯ ಕಾರಣವಾಗಿದೆ.
* ರಕ್ತದಲ್ಲಿ ಟ್ರೈಗ್ಲಿಸರಿನ್ ಪ್ರಮಾಣ ಹೆಚ್ಚಳವಾಗುವುದಲ್ಲದೆ, ಸಕ್ಕರೆಯ ಕೆಟ್ಟ ಪರಿಣಾಮದಿಂದ ಪಾರ್ಶ್ವವಾಯು, ಪೆರಲಿಸಿಸ್ ಕೂಡ ಉಂಟಾಗಬಹುದು.
* ಸಕ್ಕರೆ ಸೇವಿಸಿದ ಕೂಡಲೇ ಸಾವು ಬರುವುದಿಲ್ಲ. ಆದರೆ, ಇದರಲ್ಲಿ ವಿಷಕಾರಿ ಅಂಶಗಳಿವೆ. ಹೀಗಾಗಿಯೇ ಸಕ್ಕರೆಯನ್ನು 'ಸ್ಲೋ ಪಾಯಿಸನ್' (ನಿಧಾನ ವಿಷ) ಎಂದು ವೈದ್ಯಲೋಕ ಉಲ್ಲೇಖಿಸಿದೆ. ಒಟ್ಟಾರೆಯಾಗಿ ಸಕ್ಕರೆಯು ಕಾಯಿಲೆಗಳ ಉದ್ಭವ ಹಾಗೂ ಕಾಯಿಲೆ ಉಲ್ಬಣಕ್ಕೆ ಮೂಲ ಕಾರಣವಾಗಿದೆ.

## ಸಕ್ಕರೆ ತ್ಯಜಿಸೋಣ ಕ್ಯಾನ್ಸರ್ ಓಡಿಸೋಣ

ಕೇರಳದ ಪ್ರಸಿದ್ಧ ವೈದ್ಯ, 'ಸ್ಟೆತಸ್ಕೋಪ್‌ನೊಂದಿಗೆ ಸಂತ' ಎಂದೇ ಕರೆಯಲ್ಪಡುವ ಆನ್ಕೊಲೋಜಿಸ್ಟ್ ಡಾ। ಪಿ.ವಿ. ಗಂಗಾಧರನ್ ಅವರು ಎಲ್ಲರೂ ಸಕ್ಕರೆ ಸೇವಿಸುವುದನ್ನು ಬಿಡಬೇಕೆಂದು ವಿನಂತಿಸುತ್ತಾರೆ. ಸಕ್ಕರೆ ಇಲ್ಲದೆ ಕ್ಯಾನ್ಸರ್ ಹರಡುವುದಿಲ್ಲ. ಸಕ್ಕರೆ ಇಲ್ಲದೇ ಹೋದರೆ ಕ್ಯಾನ್ಸರ್ ತನ್ನಿಂದ ತಾನೇ ಸತ್ತು ಹೋಗುತ್ತದೆ ಎಂದು ಅವರು ಜಾಗೃತಿ ಮೂಡಿಸುತ್ತಿದ್ದಾರೆ. ಒಂದು ನಿಂಬೆ ಹಣ್ಣಿನ ರಸವನ್ನು ಬೆಚ್ಚಗಿನ ನೀರಿನಲ್ಲಿ ಬೆರಸಿ ಬೆಳಗಿನ ಉಪಹಾರಕ್ಕೂ ಮೊದಲು ಮೂರು ತಿಂಗಳ ಕಾಲ ಸೇವಿಸಬೇಕು. ಇದು ಕೆಮೋಥೆರಪಿಗಿಂತ ಸಾವಿರ ಪಟ್ಟು ಹೆಚ್ಚು ಪರಿಣಾಮಕಾರಿ ಎನ್ನುವುದನ್ನು ಮೇರಿಲ್ಯಾಂಡ್ ವೈದ್ಯಕೀಯ ಕಾಲೇಜು ಹೇಳುತ್ತದೆ. ಕ್ಯಾನ್ಸರ್ ಕೊಲ್ಲಲು ಸಾವಯದ ಅಥವಾ ಕಚ್ಚಾ ತೆಂಗಿನೆಣ್ಣೆಯನ್ನು ಬೆಳಗ್ಗೆ ಮತ್ತು ರಾತ್ರಿ 3 ಚಮಚ ಸೇವಿಸಿ ಎನ್ನುವ ಅವರು, ಇವುಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಿ, ಆದರೆ, ಸಕ್ಕರೆ ತಿನ್ನುವುದನ್ನು ಸಂಪೂರ್ಣವಾಗಿ ಬಿಟ್ಟುಬಿಡಿ. ಎರಡು ವರ್ಷಗಳಿಂದ ನಾನು ಈ ಸಂದೇಶವನ್ನು ಎಲ್ಲೆಡೆ ನೀಡುತ್ತಿದ್ದೇನೆ. ನೀವುಗಳೂ ಈ ಸಂದೇಶವನ್ನು ಎಲ್ಲಡೆ ಹರಡಿ. 'ಕ್ಯಾನ್ಸರ್ ಅನ್ನು ಓಡಿಸೋಣ; ಅದಕ್ಕೆ ಸಕ್ಕರೆ ತ್ಯಜಿಸೋಣ' ಎಂದು ಡಾ। ಗಂಗಾಧರನ್ ಸಲಹೆ ನೀಡಿದ್ದಾರೆ.

**(ವಾಟ್ಸ್ ಆ್ಯಪ್‌ನಲ್ಲಿ ಬಂದದ್ದು)**

# ನಿಂಬೆ ಹಣ್ಣಿನಿಂದ ಆರೋಗ್ಯ ವೃದ್ಧಿ

ನಿಂಬೆ ಹಣ್ಣನ್ನು ನಮ್ಮ ದಿನನಿತ್ಯದ ಅಡುಗೆಯಲ್ಲಿ ಹೆಚ್ಚಾಗಿ ಬಳಸುವುದರಿಂದ ಅದರಲ್ಲಿರುವ ಆರೋಗ್ಯಕರ ಗುಣಗಳು ನಮ್ಮ ಆರೋಗ್ಯವನ್ನು ಕಾಪಾಡುವುದರ ಜತೆಗೆ ಕಾಯಿಲೆ ಮುಕ್ತರನ್ನಾಗಿಸುತ್ತದೆ.

**ಚಿಕಿತ್ಸಾ ಗುಣಗಳು:**

**ನೆಗಡಿ ಮತ್ತು ಫ್ಲೂ ಶಮನಕಾರಿ:** ನಿಂಬೆ ಹಣ್ಣಿನಲ್ಲಿ ವಿಟಮಿನ್ ಸಿ ಇರುವುದರಿಂದ ಇದು ಸೋಂಕು ತಗುಲದಂತೆ ನೋಡಿಕೊಳ್ಳುತ್ತದೆ ಮತ್ತು ನೆಗಡಿಯಿಂದ ನಮ್ಮನ್ನು ರಕ್ಷಿಸುತ್ತದೆ.

**ದೊಡ್ಡ ಕರುಳನ್ನು ಸ್ವಚ್ಛಗೊಳಿಸುತ್ತದೆ:** ನಿಂಬೆ ಸೇವನೆಯಿಂದ ಕರುಳಿನಲ್ಲಿ ತ್ಯಾಜ್ಯದ ಸುಲಭ ಚಲನೆಗೆ ಸಹಕಾರಿ. ನಿಂಬೆ ರಸವನ್ನು ಪ್ರತಿದಿನ ಬೆಳಗ್ಗೆ ನೀರಿನೊಂದಿಗೆ ಸೇರಿಸಿ ಕುಡಿದರೆ ಇನ್ನಷ್ಟು ಉತ್ತಮ.

**ಕ್ಯಾನ್ಸರ್ ದೂರಗೊಳಿಸಲು ಸಹಕಾರಿ:** ನಿಂಬೆ ಹಣ್ಣು 22 ಕ್ಯಾನ್ಸರ್ ಪ್ರತಿಬಂಧಕ ಸಂಯುಕ್ತಗಳನ್ನು ಹೊಂದಿದೆ.

**ಲಿವರ್ ಸಮಸ್ಯೆಗೆ ರಾಮಬಾಣ:** ಒಂದು ಲೋಟ ನೀರಿಗೆ ನಿಂಬೆ ರಸವನ್ನು ಸೇರಿಸಿ ಕುಡಿಯುವುದರಿಂದ ಲಿವರ್ ಆರೋಗ್ಯ ಕಾಪಾಡಬಹುದು.

**ಸಮತೋಲನ ಕಾಪಾಡುತ್ತದೆ:** ನಿಂಬೆ ಹಣ್ಣು ಆಮ್ಲೀಯವಾಗಿದ್ದು, ಅದು ದೇಹದ ಪಚನ ಕ್ರಿಯೆಯಲ್ಲಿ ಪಾತ್ರವಹಿಸುತ್ತದೆ. ದೇಹದ ವಿವಿಧ ದ್ರವಗಳ ಮೇಲೆ ಪ್ರತ್ಯಾಮ್ಲೀಯ ಪರಿಣಾಮವನ್ನು ಉಂಟು ಮಾಡುತ್ತದೆ.

**ಅಲರ್ಜಿಯಿಂದ ಮುಕ್ತಿ:** ನಿಂಬೆ ಹಣ್ಣು ಅಲರ್ಜಿಯನ್ನು ದೂರಗೊಳಿಸುವ ಶಕ್ತಿಯನ್ನು ಹೊಂದಿದೆ.

**ನರಸಂಬಂಧಿ ರೋಗ ಮುಕ್ತಿ:** ನಿಂಬೆ ಹಣ್ಣಿನ ಸಿಪ್ಪೆಯಲ್ಲಿ ಅತಿಯಾದ ರೋಗ ನಿರೋಧಕ ಶಕ್ತಿಯನ್ನು ಹೊಂದಿರುವುದರಿಂದ ಮಿದುಳಿಗೆ ಸಂಬಂಧಿಸಿದ ದೋಷಗಳನ್ನು ಕಡಿಮೆಗೊಳಿಸಿ ಉತ್ತಮ ಆರೋಗ್ಯವನ್ನು ನೀಡುತ್ತದೆ.

**ಕಣ್ಣಿನ ವ್ಯಾಧಿಗಳು:** ನಿಂಬೆ ಹಣ್ಣಿನಲ್ಲಿರುವ ರುಟಿನ್ ಎಂಬ ಅಂಶವು ಡಯಾಬಿಟಿಕ್ ರೆಟಿನೋಪತಿಯನ್ನು ಒಳಗೊಂಡಿರುವುದರಿಂದ, ಅನೇಕ ಕಣ್ಣಿನ ರೋಗಗಳನ್ನು ನಿವಾರಿಸುತ್ತದೆ.

**ಡಯಾಬಿಟಿಸ್ ನಿಯಂತ್ರಣ:** ನಿಂಬೆ ಹಣ್ಣಿನಲ್ಲಿರುವ ಹೆಸ್ಪರ್‌ಟೈನ್ ಎಂಬ ರಾಸಾಯನಿಕವು ರಕ್ತದಲ್ಲಿರುವ ಸಕ್ಕರೆಯ ಅಂಶವನ್ನು ಕಡಿಮೆ ಮಾಡುವುದರಿಂದ ಮಧುಮೇಹವನ್ನು ನಿಯಂತ್ರಿಸುವಲ್ಲಿ ಸಹಕರಿಸುತ್ತದೆ.

**ಕಿಡ್ನಿಯಲ್ಲಿನ ಕಲ್ಲುಗಳು:** ನಿಂಬೆ ಹಣ್ಣಿನಲ್ಲಿರುವ ಸಿಟ್ರಿಕ್ ಆಮ್ಲವು ಕಿಡ್ನಿಯಲ್ಲಿರುವ ಕಲ್ಲುಗಳನ್ನು ಕರಗಿಸಿ ಕಿಡ್ನಿಸ್ಟೋನ್ ನಿವಾರಿಸುವಲ್ಲಿ ಸಹಕರಿಸುತ್ತದೆ.

**ತಾರುಣ್ಯವನ್ನು ಕಾಪಾಡುತ್ತದೆ:** ನಿಂಬೆ ಹಣ್ಣಿನಲ್ಲಿರುವ ವಿಟಮಿನ್ ಸಿ ದೇಹದಲ್ಲಿ ರಾಡಿಕಲ್ಸ್‌ಗಳನ್ನು ತಟಸ್ಥಗೊಳಿಸುತ್ತದೆ. ಇದರಿಂದ ನಮ್ಮ ತಾರುಣ್ಯ ಇನ್ನಷ್ಟು ಹೆಚ್ಚುತ್ತದೆ. ಸಿಟ್ರಿಕ್ ಆ್ಯಸಿಡ್ ಇರುವುದರಿಂದ ದೇಹದಲ್ಲಿನ ಕೊಬ್ಬು ಕರಗಿಸಲು ಸಹಾಯ ಮಾಡುತ್ತದೆ. ನಿಂಬೆ ರಸವನ್ನು ದಿನನಿತ್ಯ ಸೇವಿಸುವುದರಿಂದ ಮಲಬದ್ಧತೆ ಸಮಸ್ಯೆ ದೂರವಾಗುತ್ತದೆ.

**ಮೊಡವೆಯಿಂದ ಮುಕ್ತಿ:** ಪ್ರತಿ ದಿನ ನಿಂಬೆ ರಸ ಮುಖಕ್ಕೆ ಹಚ್ಚಿ 5 ನಿಮಿಷದ ಬಳಿಕ ಮುಖ ತೊಳೆಯುವುದರಿಂದ ಮೊಡವೆ ಸಮಸ್ಯೆಯನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು.

**(ಉದಯವಾಣಿ 28–1–2020)**

**ವಿಜಿತಾ ಅಮೀನ್ ಬಂಟ್ವಾಳ**

**(21ನೇ ಪುಟದಿಂದ)** **ದೇವಾಸ್ತಿತ್ವದ ಹತ್ತು ಸಾಕ್ಷ್ಯಾಧಾರಗಳು**

ಮಾರ್ಗದರ್ಶನ ದಯಪಾಲಿಸುವನು. ಅಲ್ಲಾಹನು ಎಂತಹ ರೀತಿಯಲ್ಲಿ ತನ್ನ ಅಸ್ತಿತ್ವವನ್ನು ಅವನಿಗೆ ಸಾಬೀತುಪಡಿಸಿ ಕೊಡುವನೆಂದರೆ ಅವನ ಹೃದಯವು ಸಂಶಯ ಸಂದೇಹಗಳ ಕೊಳಕಿನಿಂದ ಸಂಪೂರ್ಣವಾಗಿ ದೂರ ಸರಿಯುವುದು. ಈ ರೀತಿಯಲ್ಲಿ ತೀರ್ಮಾನ ಮಾಡುವುದರಿಂದ ಯಾವುದೇ ರೀತಿಯ ಮೋಸ ಉಂಟಾಗಲಾರದು. ಸತ್ಯವನ್ನು ಅನ್ವೇಷಿಸುವವರು ಈ ರೀತಿ ವರ್ತಿಸಲು ಕಷ್ಟವೇನಿದೆ?

ಈ ಹತ್ತು ಸಾಕ್ಷ್ಯಾಧಾರಗಳನ್ನು ಪ್ರಸ್ತಾಪಿಸಿ ನಾನು ನನ್ನ ಲೇಖನ ಮುಕ್ತಾಯಗೊಳಿಸುತ್ತೇನೆ. ಪವಿತ್ರ ಖುರ್‌ಆನ್‌ನಲ್ಲಿ ಬೇರೆ ಸಾಕ್ಷ್ಯಾಧಾರಗಳೂ ಇವೆ. ಸದ್ಯಕ್ಕೆ ನಾನು ಮೇಲೆ ಪ್ರಸ್ತಾಪಿಸಿದ ಸಾಕ್ಷ್ಯಾಧಾರಗಳಿಗೆ ಸೀಮಿತಗೊಳಿಸುತ್ತೇನೆ. ಯಾರಾದರೂ ಈ ಸಾಕ್ಷ್ಯಾಧಾರಗಳ ಬಗ್ಗೆ ಚಿಂತಿಸುವನಾದರೆ ಈ ಸಾಕ್ಷ್ಯಾಧಾರಗಳ ಮೂಲಕ ಅವನಿಗೆ ಬೇರೆ ಸಾಕ್ಷ್ಯಾಧಾರಗಳೂ ಸಿಗುವುವು. ವಲ್ಲಾಹುಲ್ ಮುಸ್ತಆನ್ (ಅಲ್ಲಾಹನು ಸಹಾಯಕನಾಗಿದ್ದಾನೆ).

ಕೊನೆಯದಾಗಿ ನಾನು ಹೀಗೆ ಹೇಳಲು ಬಯಸುತ್ತೇನೆ: ಈ ಕಿರುಲೇಖನ ಯಾರಿಗಾದರೂ ತಲಪಿದರೆ ಅವರು ಅದನ್ನು ಓದಿದ ನಂತರ, ಯಾರಿಗೆ ಲಾಭಕರವಾಗುವುದೆಂದು ಅವರು ಯೋಚಿಸುತ್ತಾರೋ ಅವರಿಗೆ ನೀಡಬೇಕೆಂದು ಅಪೇಕ್ಷಿಸುತ್ತೇನೆ. ◆

**(ಅನುವಾದಕ: ಎಮ್. ಉಬೈದುಲ್ಲಾ)**

ಕಿರು ಪರಿಚಯ

# ಹ್ಯೂಮಾನಿಟಿ ಫಸ್ಟ್ ಇಂಡಿಯಾ

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಲೋಕದೆಲ್ಲೆಡೆ ತನ್ನ ಜನಸೇವೆಯ ಕೆಲಸಗಳಿಂದ ಅರಿಯಲ್ಪಡಲಾಗಿದೆ. ದೇವನ ಸೃಷ್ಟಿಯ ಸೇವೆಗಾಗಿ ಮತ್ತು ಸಮಾಜದಲ್ಲಿ ವಿವಿಧ ತರದ ಆವಶ್ಯಕ ಸಾಮಾನುಗಳಿಂದ ವಂಚಿತವಾಗಿರುವ ವಿಭಾಗಗಳನ್ನು ಮೇಲೆಕ್ಕೆತ್ತಲು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಕಲ್ಯಾಣ ಸಂಸ್ಥೆಯಾದ ಹ್ಯೂಮಾನಿಟಿ ಫಸ್ಟ್ ಲೋಕದೆಲ್ಲೆಡೆ ಜನಸೇವೆ ಕಾರ್ಯಗಳನ್ನು ಮಾಡುತ್ತಿದೆ. 1995ರಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಾಲ್ಕನೇ ಜಾಗತಿಕ ನೇತಾರರಾಗಿದ್ದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹಿಬರು "ಹ್ಯೂಮಾನಿಟಿ ಫಸ್ಟ್" ಸಂಸ್ಥೆಯನ್ನು ಸ್ಥಾಪಿಸಿದರು. ಇಂದು ದೇವಾನುಗ್ರಹದಿಂದ ಈ ಸಂಸ್ಥೆ 52 ದೇಶಗಳಲ್ಲಿ ಮನುಕುಲದ ಸೇವೆಯನ್ನು ಮಾಡಲು ಸೌಭಾಗ್ಯವನ್ನು ಪಡೆಯುತ್ತಿದೆ.

ತನ್ನ ಸ್ಥಾಪನೆಯ ಕಾಲದಿಂದ ಇಂದಿನ ವರೆಗೆ ವಿವಿಧ ಸಂದರ್ಭಗಳಲ್ಲಿ ಹ್ಯೂಮಾನಿಟಿ ಫಸ್ಟಿಗೆ ಇತರ ದೇಶಗಳಲ್ಲಿ ಎಂಬಂತೆ ಭಾರತದಲ್ಲೂ ಜನಸೇವೆ ಮಾಡುವ ಅಸಾಧಾರಣವಾದ ಸೌಭಾಗ್ಯ ಲಭಿಸಿದೆ. 1998ರಲ್ಲಿ ಗುಜರಾತಿನಲ್ಲಿ ಘಟಿಸಿದ ಭೂಕಂಪದ ಸಂದರ್ಭದಲ್ಲಿ ಸಾವಿರಾರು ನಿರ್ಗತಿಕ ಕುಟುಂಬಗಳಿಗೆ ಹ್ಯೂಮಾನಿಟಿ ಫಸ್ಟ್ ಆಸರೆಯಾಯಿತು. ಅನಂತರ 2008ರಲ್ಲಿ ಕಾಶ್ಮೀರದಲ್ಲಿ ಸಂಭವಿಸಿದ ಭೂಕಂಪ ಮತ್ತು ಕೆಲವು ವರ್ಷಗಳ ಹಿಂದೆ ನೇಪಾಳದಲ್ಲಿ ಉಂಟಾದ ತೀವ್ರ ಭೂಕಂಪದ ಸಂದರ್ಭಗಳಲ್ಲಿಯೂ ಹ್ಯೂಮಾನಿಟಿ ಫಸ್ಟ್ ಇಂಡಿಯಾದ ಸ್ವಯಂ ಸೇವಕರಿಗೆ ಅಸಾಮಾನ್ಯವಾದ ಸೇವೆ ಮಾಡಲು ಸೌಭಾಗ್ಯ ಲಭಿಸಿತು. ಸಾವಿರಾರು ಬಡಜನರಿಗೆ ವಸತಿ ವ್ಯವಸ್ಥೆ ಒದಗಿಸಲಾಯಿತು ಮತ್ತು ಸಾವಿರಾರು ಕುಟುಂಬಗಳಿಗೆ ಅನ್ನಪಾನೀಯದ ವ್ಯವಸ್ಥೆ ಹ್ಯೂಮಾನಿಟಿ ಫಸ್ಟ್ ವತಿಯಿಂದ ಮಾಡಿಕೊಡಲಾಯಿತು. ಕಳೆದ ಕೆಲವು ವರ್ಷಗಳಿಂದ ಭಾರತದ ವಿವಿಧ ರಾಜ್ಯಗಳಲ್ಲಿಯೂ ವಿನಾಶದ ದೃಶ್ಯಗಳನ್ನು ನಾವು ಕಂಡೆವು. ತಮಿಳುನಾಡು, ಕೇರಳ ಮತ್ತು ಕರ್ನಾಟಕದಲ್ಲಿ ಉಂಟಾದ ಪ್ರವಾಹದ ವೇಳೆಗಳಲ್ಲಿ ಹ್ಯೂಮಾನಿಟಿ ಫಸ್ಟ್ ತನ್ನ ಅನನ್ಯವಾದ ಸೇವೆಗಳನ್ನು ಸಲ್ಲಿಸಿ ಈ ಕಠಿಣ ಸಂದರ್ಭದಲ್ಲಿ ನಿರ್ಗತಿಕರಿಗೆ ಆಶ್ರಯವಾಯಿತು.

2016ರಿಂದ ಹ್ಯೂಮಾನಿಟಿ ಫಸ್ಟ್ ಇಂಡಿಯಾ ನೋಂದಾಯಿತ ಸಂಸ್ಥೆಯಾಗಿ ತನ್ನ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಭಾರತದಲ್ಲಿ ಈಗ 23 ರಾಜ್ಯಗಳಲ್ಲಿ ಹ್ಯೂಮಾನಿಟಿ ಫಸ್ಟಿನ ತಂಡ ಕಾರ್ಯಶೀಲವಾಗಿದೆ. ಅತಿ ಕಠಿಣವಾದ ಸಂದರ್ಭಗಳಲ್ಲಿಯೂ ಹ್ಯೂಮಾನಿಟಿ ಫಸ್ಟಿನ ಟೀಮ್ ವ್ಯವಸ್ಥಿತವಾದ ಯೋಜನೆಯೊಂದಿಗೆ ದೇವನ ಸೃಷ್ಟಿಯ ಸೇವೆ ಮಾಡುವ ಸೌಭಾಗ್ಯ ಪಡೆಯುತ್ತಿದೆ. 2 ವರ್ಷಗಳ ಹಿಂದೆ ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಪ್ರವಾಹದ ಕಾರಣದಿಂದ ಜನಸಾಮಾನ್ಯರಿಗೆ ತುಂಬಾ ನಷ್ಟವುಂಟಾದ ಕಠಿಣವಾದ ಘಟ್ಟದಲ್ಲಿ ಹ್ಯೂಮಾನಿಟಿ ಫಸ್ಟ್ ನೂರಾರು ನಿರ್ಗತಿಕರಿಗೆ ಆಶ್ರಯವಾಯಿತು. ಪ್ರವಾಹದ ಸಂದರ್ಭದಲ್ಲಿ ಹ್ಯೂಮಾನಿಟಿ ಫಸ್ಟ್ ವತಿಯಿಂದ ವಸತಿ ವ್ಯವಸ್ಥೆ ಮಾಡಿ ಕೊಡಲಾಯಿತು. ಸಂತ್ರಸ್ತರಿಗೆ ಊಟದ ವ್ಯವಸ್ಥೆಯ ಜೊತೆಗೆ ಆವಶ್ಯಕ ಔಷಧಿ ಮತ್ತು ಉಪಚಾರವನ್ನು ಒದಗಿಸಲಾಯಿತು. ಪ್ರವಾಹದ ಕಾರಣದಿಂದ ತಮ್ಮ ಮನೆಗಳನ್ನು ಕಳಕೊಂಡ ಈ ಪ್ರದೇಶದ 15 ಜನರಿಗೆ ಹ್ಯೂಮಾನಿಟಿ ಫಸ್ಟ್ ಮನೆ ಕಟ್ಟಿಕೊಟ್ಟಿತು.

ಇಂದು ನಮ್ಮ ದೇಶ ಕೊರೋನ ವೈರಸಿನ ಮಹಾಮಾರಿಯನ್ನು ಎದುರಿಸುತ್ತಿದೆ. ಈ ಸಂದರ್ಭದಲ್ಲಿ ಭಾರತದ ಹ್ಯೂಮಾನಿಟಿ ಫಸ್ಟಿನ 600ಕ್ಕೂ ಹೆಚ್ಚಿನ ಸ್ವಯಂ ಸೇವಕರು ಜನಸೇವೆಯಲ್ಲಿ ನಿರತರಾಗಿದ್ದಾರೆ. ಅವರು ಸಂತ್ರಸ್ತರ ಸಹಾಯಕ್ಕಾಗಿ ಶತಪ್ರಯತ್ನ ಮಾಡುತ್ತಿದ್ದಾರೆ. ಈ ಲೋಕ್‌ಡೌನ್ ವೇಳೆಯಲ್ಲಿ ಹ್ಯೂಮಾನಿಟಿ ಫಸ್ಟ್ ವತಿಯಿಂದ 3,000 ಕುಟುಂಬಗಳಿಗೆ ರೇಶನ್ ಒದಗಿಸಲಾಯಿತು. ಅದೇ ರೀತಿಯಲ್ಲಿ 4,000 ಜನರಿಗೆ ಹ್ಯೂಮಾನಿಟಿ ಫಸ್ಟ್ ಬಗ್ಗೆಯಲ್ಲಿ ಆಹಾರವನ್ನು ನೀಡಲಾಯಿತು. ಕರ್ನಾಟಕ ಮತ್ತು ಕೇರಳದಲ್ಲಿ ಕಳೆದ 40 ದಿನಗಳಲ್ಲಿ ಹ್ಯೂಮಾನಿಟಿ ಫಸ್ಟ್ ವತಿಯಿಂದ 10,000ಕ್ಕೂ ಹೆಚ್ಚಿನ ಜನರ ಸಹಾಯದ ಪ್ರಯತ್ನ ಮಾಡಲಾಗಿದೆ. ಜನಸೇವೆಯ ಈ ಕೆಲಸ ಈಗಲೂ ಜಾರಿಯಲ್ಲಿದೆ.

ಹ್ಯೂಮಾನಿಟಿ ಫಸ್ಟ್ ವತಿಯಿಂದ ಈ ತುರ್ತು ಪರಿಸ್ಥಿತಿಯಲ್ಲಿ ಮಾತ್ರವಲ್ಲದೆ, ವರ್ಷವಿಡೀ ಸಾಮಾನ್ಯ ದಿನಗಳಲ್ಲೂ ಜನಸೇವೆಯ ಕೆಲಸಗಳನ್ನು ಮಾಡಲಾಗುತ್ತಿದೆ. ನೀರಿನ ಕೊರತೆಯಿರುವ ಭಾರತದ ಪ್ರದೇಶಗಳಲ್ಲಿ ಕುಡಿಯುವ ಶುದ್ಧ ನೀರನ್ನು ಒದಗಿಸಲು ಹ್ಯೂಮಾನಿಟಿ ಫಸ್ಟ್ ಪ್ರಯತ್ನಿಸುತ್ತಿದೆ. ಅದಕ್ಕಾಗಿ ವಿವಿಧ ಪ್ರದೇಶಗಳಲ್ಲಿ ಬಾವಿ ಮತ್ತು ಹ್ಯಾಂಡ್‌ಪಂಪ್ ಅಳವಡಿಸುವ ಕೆಲಸ ಸಹ ಮಾಡುತ್ತಿದೆ. ಅದೇ ರೀತಿಯಲ್ಲಿ ಬಡ ಮಕ್ಕಳಿಗೆ ಶಾಲಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಹ್ಯೂಮಾನಿಟಿ ಫಸ್ಟ್ ವತಿಯಿಂದ 10,000 ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ಒದಗಿಸಲಾಯಿತು.

ಹ್ಯೂಮಾನಿಟಿ ಫಸ್ಟ್ ವತಿಯಿಂದ ಭಾರತದೆಲ್ಲೆಡೆ ವರ್ಷವಿಡೀ ಮೆಡಿಕಲ್ ಮತ್ತು ರಕ್ತದಾನ ಕ್ಯಾಂಪುಗಳು ನಡೆಸಲಾಗುತ್ತಿದೆ. ದಕ್ಷಿಣ ಭಾರತದ ವಿವಿಧ ಪ್ರದೇಶಗಳಲ್ಲಿ ಕಳೆದ 3 ವರ್ಷಗಳಿಂದ ಹ್ಯೂಮಾನಿಟಿ ಫಸ್ಟ್ ವತಿಯಿಂದ 50ಕ್ಕೂ ಮೇಲ್ಪಟ್ಟು ಮೆಡಿಕಲ್ ಕ್ಯಾಂಪುಗಳು ನಡೆಸಲಾಯಿತು.

ಹ್ಯೂಮಾನಿಟಿ ಫಸ್ಟಿಗೆ ಕಳೆದ 5 ವರ್ಷಗಳಿಂದ ಭಾರತದ ಒಂದೂವರೆ ಲಕ್ಷ (1,50,000) ಜನರಿಗೆ ಸಹಾಯ ಮಾಡಲು ಸೌಭಾಗ್ಯ ಲಭಿಸಿತು. ಹ್ಯೂಮಾನಿಟಿ ಫಸ್ಟ್ ಜನಸೇವೆಯ ಕೆಲಸವನ್ನು ಧರ್ಮ ಮತ್ತು ಜಾತಿಯ ಭೇದಭಾವವನ್ನು ತೊರೆದು ಮಾಡುತ್ತಿದೆ. "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂಬುದೇ ನಮ್ಮ ಧ್ಯೇಯವಾಗಿದೆ. ಇದೇ ಧ್ಯೇಯ ಮತ್ತು ಸಂದೇಶವನ್ನು ಎತ್ತಿಹಿಡಿದು ಹ್ಯೂಮಾನಿಟಿ ಫಸ್ಟಿನ ಯಾತ್ರೆ 1995ರಲ್ಲಿ ಆರಂಭಗೊಂಡಿತ್ತು ಮತ್ತು ಇಂದಿಗೂ ಜಾರಿಯಲ್ಲಿದೆ ಹಾಗೂ ಮುಂದೆಯೂ ಜಾರಿಯಾಗಿರುವುದು.

# ಭೂಮಿಯ ಮೇಲೆ ಎರಗುವ ದೇವಕೋಪ

**ಇದು ಯಾವಾಗ ಘಟಿಸುವುದು? ಕೆಲವು ದಿನಗಳಲ್ಲೋ ಕೆಲವು ವಾರಗಳಲ್ಲೋ ಕೆಲವು ಮಾಸಗಳಲ್ಲೋ ಕೆಲವು ವರ್ಷಗಳಲ್ಲೋ ಎಂದು ನನಗೆ ಅರುಹಲಾಗಿಲ್ಲ. ಸಮೀಪ ಕಾಲದಲ್ಲಿ ಅಥವಾ ದೂರ ಕಾಲದಲ್ಲಿ ಯಾವಾಗ ಅದು ಘಟಿಸಿದರೂ ಅದು ಒಂದು ಭೂಕಂಪ ಅಥವಾ ಬೇರೇನು ಆದರೂ ಅದರ ಕಾಠಿಣ್ಯ ಭಯಾನಕವಾಗಿರುವುದು. ನನ್ನ ಸಹಜೀವಿಗಳೊಂದಿಗೆ ನನಗೆ ಇರುವ ಅಗಾಧವಾದ ಅನುಕಂಪ ಕಾರಣದಿಂದ ನಾನು ನಿರ್ಬಂಧಿಸಲ್ಪಟ್ಟಿಲ್ಲವಾಗಿದ್ದರೆ ನಾನು ಇದನ್ನು ಹೇಳುತ್ತಿರಲಿಲ್ಲ. ಆದುದರಿಂದ ಆಲಿಸಿರಿ, ನಾನಿದೋ ನಿಮಗೆ ಎಚ್ಚರಿಕೆ ನೀಡಿದ್ದೇನೆ. ಭೂಮಿ ಇದೋ ಕೇಳುತ್ತಿದೆ. ಸದ್ವರ್ತನೆಯಿಂದ ಯಾರು ವ್ಯತಿಕ್ರಮಿಸುತ್ತಾರೋ ದುಷ್ಕೃತ್ಯಗಳ ಕಡೆಗೆ ಯಾರು ಬಾಗುತ್ತಾರೋ ಭೂಮಿಯನ್ನು ತಮ್ಮ ಪಾಪಗಳಿಂದ ಯಾರು ಕಲುಷಿತಗೊಳಿಸುತ್ತಾರೋ ಅವರು ಹಿಡಿಯಲ್ಪಡುವರು. ತನ್ನ ಕೋಪ ಭೂಮಿಯ ಮೇಲೆ ಎರಗಲಿದೆ ಎಂದು ಸರ್ವಶಕ್ತನಾದ ದೇವನು ಎಚ್ಚರಿಕೆ ನೀಡುತ್ತಾನೆ. ಯಾಕೆಂದರೆ ಭೂಮಿಯಲ್ಲಿ ಪಾಪ ಮತ್ತು ಕೆಡುಕು ತುಂಬಿಕೊಂಡಿವೆ.**

**(ಅಲ್ ಇನ್‌ದಾರ್ – 1905 ಎಪ್ರಿಲ್ 5 ವಿಜ್ಞಾಪನೆ)**

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
**ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು**

=========================================================

## ಸಂಪಾದಕರಿಗೆ ಪತ್ರ

ಸಂಪುಟ 36ನೇ ಸಂಚಿಕೆ 2ರ "ಯುಗರಶ್ಮಿ" ತ್ರೈಮಾಸಿಕದಲ್ಲಿ ನಿಮ್ಮ ಹಿಂದು – ಮುಸ್ಲಿಮರ ನಡುವೆ ಐಕ್ಯತೆಯ ಬಗ್ಗೆ ಪ್ರಸ್ತಾಪಿಸಿರುವ ಲೇಖನವು ಅತ್ಯಂತ ಶ್ಲಾಘನೀಯ, ಸಮಂಜಸ ಮತ್ತು ಅದರ ಪ್ರಾಮುಖ್ಯತೆಯು ಭಾರತದ ಇಂದಿನ ಹಿತ ಮತ್ತು ಮುಂದಿನ ಏಳಿಗೆಗೆ ಪ್ರಬಲವಾದ ಅಡಿಪಾಯ ಎಂದು ಹೇಳುವುದು ಉತ್ಪ್ರೇಕ್ಷೆ ಆಗಲಾರದು. ಸ್ವಾಮಿ ವಿವೇಕಾನಂದರು ಸಹ ಈ ಎರಡು ಸಮುದಾಯಗಳ ಐಕ್ಯತೆಯ ಅಗತ್ಯತೆಯನ್ನು ಮತ್ತು ಪ್ರಾಮುಖ್ಯತೆಯನ್ನು ತಮ್ಮ ಲೇಖನಗಳಲ್ಲಿ ಘೋಷಿಸಿದ್ದಾರೆ. ಗಾಂಧೀಜಿ ಅವರು ಸಹ ಹಿಂದು ಮುಸ್ಲಿಂ ಐಕ್ಯತೆಗೆ ಅವರ ಜೀವನಪರ್ಯಂತ ಶ್ರಮಿಸಿದ್ದಾರೆ.

ಎರಡೂ ಪಕ್ಷಗಳಿಗೆ ಸೇರಿದ ಕೆಲವು ಸಂಕುಚಿತ ಮನೋಧರ್ಮವುಳ್ಳ ಪಕ್ಷಪಾತಿಗಳು ಮತ್ತು ರಾಜಕೀಯ ವ್ಯಕ್ತಿಗಳು/ ಪಕ್ಷಗಳು/ ಮತಾಂಧರು ಎರಡೂ ಸಮುದಾಯಗಳ ನಡುವೆ ಪರಸ್ಪರ ವೈರತ್ವವನ್ನು ಅಜ್ಞಾನವಶಾತ್ ಮತ್ತು ರಾಜಕೀಯ ಲಾಭಕ್ಕಾಗಿ ಬೆಳೆಸುತ್ತಿರುವುದು ಅತ್ಯಂತ ಶೋಚನೀಯ ಸಂಗತಿ.

ಎರಡೂ ಸಮುದಾಯಗಳಿಗೆ ಸೇರಿದ ವಿಚಾರವಂತ, ವಿಶಾಲ ಮನೋಧರ್ಮವುಳ್ಳ ಪ್ರಬುದ್ಧ ನಾಗರಿಕರು ಒಟ್ಟುಗೂಡಿ ಕಲೆ, ಸಂಸ್ಕೃತಿ, ಸಾಹಿತ್ಯ, ಶಿಲ್ಪಕಲೆ, ಸಂಗೀತ ಇವುಗಳ ಮೂಲಕ ಸರ್ವ ಜನಾಂಗಕ್ಕೂ ಅನ್ವಯಿಸುವ ಸಕಲ ಧರ್ಮಗಳಿಗೂ ಆಧಾರವಾಗಿರುವ, ವಿಶ್ವಮೌಲ್ಯಗಳನ್ನು ಪ್ರಚಾರಗೊಳಿಸುವ ಕಾರ್ಯಗಳಲ್ಲಿ ತೊಡಗಬೇಕು. ಇಂತಹ ಉದಾತ್ತ ಉಪಕ್ರಮವನ್ನು ನಿಮ್ಮ ಸಂಸ್ಥೆಯು ಕೈಗೊಂಡಿದ್ದಲ್ಲಿ ನನ್ನ ಮತ್ತು ನನ್ನ ಸಹಚಿಂತಕರ ಸಂಪೂರ್ಣ ಸಹಕಾರ ಮತ್ತು ಬೆಂಬಲ ಇರುತ್ತದೆ ಎಂದು ನಾನು ಹೇಳಬಯಸುತ್ತೇನೆ.

**– ಎಂ. ಎಲ್. ರಾಂಪ್ರಕಾಶ್, ಬೆಂಗಳೂರು.**



ಯಾದಗಿರಿ: ಗಣರಾಜ್ಯೋತ್ಸವ ಅಂಗವಾಗಿ ಹುಮ್ಯಾನಿಟಿ ಫಸ್ಟ್ ವತಿಯಿಂದ ರೋಗಿಗಳಿಗೆ ಹಣ್ಣು ವಿತರಣೆ



ಯಾದಗಿರಿ: ಅಹ್ಮದಿಯಾ ಸಂಘಟನೆ ಶ್ರಮದಾನ



ಜಕ್ಕೂರ್: ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ವತಿಯಿಂದ ವಿಕಲಚೇತನ ಮಕ್ಕಳಿಗೆ ಅನ್ನದಾನ



ಶಿವಮೊಗ್ಗ: ಹುಮ್ಯಾನಿಟಿ ಫಸ್ಟ್ ವತಿಯಿಂದ ಜನಸೇವೆ





ಬೆಂಗಳೂರು: ಹುಮ್ಯಾನಿಟಿ ಫಸ್ಟ್ ವತಿಯಿಂದ ಆಹಾರ ವಸ್ತುಗಳ ಕಿಟ್ ವಿತರಣೆ





ಮಡಿಕೇರಿ: ಹುಮ್ಯಾನಿಟಿ ಫಸ್ಟ್ ವತಿಯಿಂದ ಜನಸೇವೆ

Registered with the Registrar of Newspapers for India No. R.N. 27354/75
**Yugarashmi** Kannada Quarterly, **May - 2020.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone, ipode, and Android

**Quran**
Read the Holy Quran in easy Yassarnal Quran Font

**Conditions of Bai'at**
A pocket reference of Shara't-e-Bai'at in 7 languages

**Sermons**
Huzoor's Friday Sermons In 15 languages

**MTA**
Watch MTA Live, view Schedule and much more

**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore